ಪರಾಮರ್ಶೆಗೆ ಮಾತ್ರ

"ಸಿರಿಗನ್ನಡ" ಗ್ರಂಥಾಲಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ 583 276.

1372

F ಸಿರಿಗನ್ನಡ ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ.ಹಂಪಿ.

# ಕನ್ನಡ ವಿಶ್ವವಿದ್ಯಾಲಯ ಹಂಪಿ

ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ಎಂ.ಫಿಲ್ ಪದವಿಗಾಗಿ ಸಲ್ಲಿಸಿದ ಸಂಶೋಧನಾ ಪ್ರಬಂಧ

## "ವೈದ್ಯ ಸಂಗಣ್ಣನ ವಚನಗಳ ವೈಜ್ಞಾನಿಕ ನೆಲೆ"

ಸಂಶೋಧನಾ ವಿದ್ಯಾರ್ಥಿ

ರಿ.ನಂ: ಕ.ಸಾ.ಪ.-೧೬೨೦೦೧೦೩೦೦೭೧-೨೦೧೭

ಸಿರಿಗನ್ನಡ ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ. ಹಂಪಿ.

೨೦೧೬-೨೦೧೭

137046

8K0
KU4 Y

# ದೃಢೀಕರಣ ಪತ್ರ

**ಎಸ್. ರಾಧಿಕ** ಇವರು **"ವೈದ್ಯ ಸಂಗಣ್ಣನ ವಚನಗಳ ವೈಜ್ಞಾನಿಕ ನೆಲೆ"** ಎಂಬ ಶೀರ್ಷಿಕೆಯ **ಎಂ.ಫಿಲ್** ನಿಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸ್ವತಂತ್ರ ಅಧ್ಯಯನದ ಮೂಲಕ ಸಿದ್ಧಪಡಿಸಿರುತ್ತಾರೆ. ಹಂಪಿ ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್ ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ನಿಬಂಧವನ್ನು ಈ ಮೊದಲು ವಿಶ್ವವಿದ್ಯಾಲಯದ ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

**ಮಾರ್ಗದರ್ಶಕರು**

ಶೀ ಮಳೀಮಠ

**ಡಾ.ಶೀಲಾದೇವಿ ಎಸ್.ಮಳೀಮಠ**

ಸಹಪ್ರಾಧ್ಯಾಪಕರು, ಕನ್ನಡ ವಿಭಾಗ

ಬಿ.ಎಮ್.ಎಸ್ ಮಹಿಳಾ ಕಾಲೇಜು

ಬಸವನಗುಡಿ, ಬೆಂಗಳೂರು

ಶೀ ಮಳೀಮಠ

ಡಾ|| ಶೀಲಾದೇವಿ ಎಸ್. ಮಳೀಮಠ
ಎಂ.ಎ., ಎಂ.ಎಡ್., ಎಸ್.ಇ.ಟಿ., ಪಿ.ಎಚ್.ಡಿ., ಪಿಜಿ ಡಿಪ್ಲೊಮೊ
ಪತ್ರಿಕೋದ್ಯಮ, ಕನ್ನಡ ಉಪನ್ಯಾಸಕರು
ಬಿ.ಎಂ.ಎಸ್. ಮಹಿಳಾ ವಿದ್ಯಾಲಯ
ಬಸವನಗುಡಿ, ಬೆಂಗಳೂರು - 560 004.

ಸ್ಥಳ: ಬೆಂಗಳೂರು.
ದಿನಾಂಕ: 24-7-2017

# ಪ್ರಮಾಣ ಪತ್ರ

ಹಂಪಿ ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್ ಪದವಿಗಾಗಿಸಲ್ಲಿಸುತ್ತಿರುವ **"ವೈದ್ಯ ಸಂಗಣ್ಣನ ವಚನಗಳ ವೈಜ್ಞಾನಿಕ ನೆಲೆ"** ಎಂಬ ಶೀರ್ಷಿಕೆಯ **ಎಂ.ಫಿಲ್** ನಿಬಂಧವನ್ನು **ಡಾ.ಶೀಲಾದೇವಿ ಎಸ್.ಮಳೀಮಠ,** ಪ್ರಾಧ್ಯಾಪಕರು, ಕನ್ನಡ ವಿಭಾಗ ಬಿ.ಎಮ್.ಎಸ್ ಮಹಿಳಾ ಕಾಲೇಜು, ಬಸವನಗುಡಿ ಬೆಂಗಳೂರು ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ನಿಬಂಧವನ್ನು ಈ ಮೊದಲು ವಿಶ್ವವಿದ್ಯಾಲಯದ ಯಾವುದೇ ಪದವಿ ಅಥವಾ ಇತರೆ ಉದ್ದೇಶಗಳಿಗಾಗಲಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸಂಶೋಧನಾ ವಿದ್ಯಾರ್ಥಿ

**ಎಸ್. ರಾಧಿಕ**

ದಿನಾಂಕ: 24/7/2017

ಸ್ಥಳ: ಬೆಂಗಳೂರು.

## ಪರಿವಿಡಿ:

## ಅಧ್ಯಾಯ-೧

## ಅಧ್ಯಯನದ ಉದ್ದೇಶ ವ್ಯಾಪ್ತಿ ಮತ್ತು ಸ್ವರೂಪ

**<u>ಪೀಠಿಕೆ:</u>**

"ಅರಿಯದವಂಗೆ ಅರಿದಿಹೆನೆಂಬ ಬಯಲರೋಗ ಹುಟ್ಟಿ,
ಕಾಲುಗೆಟ್ಟು, ದೃಷ್ಟಿ, ನಷ್ಟವಾಗುತ್ತಿದೆ ನೋಡಾ!
ಅದಕ್ಕೆ ನಾನೊಂದು ಮದ್ದ ಕಂಡೆ, ಹೆಸರಿಲ್ಲದ ಗಿಡ, ಮೂಲವಿಲ್ಲದ ಬೇರು.
ಎಲೆ ಹೂ ನಷ್ಟವಾದ ಚಿಗುರಿನ ಕುಲಗೆಟ್ಟು,
ಸಹ ಮೂಲಮಂ ತಂದು. ಆ ಕಲ್ಲಿನಲ್ಲಿ ಇಕ್ಕಿ ನೀರನೆರೆದು,
ಆ ಗುಂಡಿನಲ್ಲಿ ಹಾಗರೆಯಲಾಗಿ, ತಟ್ಟೆಯಲ್ಲಿ ಇಕ್ಕುವದಕ್ಕೆ ಮೊದಲೆ,
ಮದ್ದಿನ ದೃಷ್ಟಿ ನಷ್ಟವಾಯಿತ್ತು,
ಮರುಳಶಂಕರ ಪ್ರಿಯ ಸಿದ್ದರಾಮೇಶ್ವರ ಲಿಂಗವನರಿಯಲಾಗಿ."[೧]

– [ಸ. ವ. ಸ –೪ವ.ಸಂ. ೧೦೯]

ಸಮಾಜದಲ್ಲಿ ಅಜ್ಞಾನ ಎನ್ನುವ ಅಂಧಕಾರ ತುಂಬಿ ತುಳುಕುತ್ತಿದೆ.ಎಲ್ಲ ಜನತೆ ಅಂಧಕಾರದಲ್ಲೇ ಜೀವನ ಸಾಗಿಸುತ್ತಾ ಅದೇ ಜೀವನ ಎಂದು ತಿಳಿದಿದ್ದಾರೆ ಇವರು ಸತ್ಯವನ್ನು ಅರಿಯದ ಮೂರ್ಖರು. ಎಲ್ಲರೂ ಎಲ್ಲವನ್ನೂ ಅರಿತ ಸರ್ವಜ್ಞರಂತೆ ಸಮಾಜದಲ್ಲಿ ಮೆರೆಯುತ್ತಿದ್ದಾರೆ. ಅಂತಹವರನ್ನು ಕುರಿತು ವೈದ್ಯ ಸಂಗಣ್ಣ ತನ್ನ ವಚನಗಳ ಮೂಲಕ ಚಿಕಿತ್ಸೆಗೆ ಒಳಪಡಿಸಬೇಕು ಮತ್ತು ವೈಜ್ಞಾನಿಕ ದೃಷ್ಟಿಕೋನದಲ್ಲಿ ಗಮನಿಸಬೇಕು ಎಂದು ತಿಳಿಸಿದ್ದಾರೆ.

ಕನ್ನಡ ಸಾಹಿತ್ಯದಲ್ಲಿ ವಚನ ಸಾಹಿತ್ಯ ಎನ್ನುವುದು ಪ್ರಮುಖ ಸ್ಥಾನವನ್ನು ಪಡೆದುಕೊಂಡಿದೆ. ವಚನ ಸಾಹಿತ್ಯವು ಸಮಾಜದ ಜನರ ಬದುಕು, ಭಾಷೆ, ಸಾಹಿತ್ಯ ಈ ಮೂರು ಅಂಶಗಳಲ್ಲಿ ಸಮ್ಮಿಳಿತವಾಗಿದೆ. ಆದ್ದರಿಂದ ವಚನ ಸಾಹಿತ್ಯ ಒಂದು ಸತ್ವಯುತ ಜೀವಂತ ಪರಂಪರೆಯ ನಿದರ್ಶನ ಆದ್ದರಿಂದಲೇ ೧೨ನೇ ಶತಮಾನದ ವಚನ ಸಾಹಿತ್ಯ ಒಂದು ವಿಶಿಷ್ಟವಾದ ವೈಜ್ಞಾನಿಕ ಅಂಶಗಳ ಅಮೂಲ್ಯವಾದ ಸಾಹಿತ್ಯ ಪ್ರಕಾರ ಕನ್ನಡ ಸಾಹಿತ್ಯದಲ್ಲಿ ವಚನ ಪರಂಪರೆ ಒಂದು ಭಾಗ ಅದರ ಮಾಧ್ಯಮ ಭಾಷೆ ವ್ಯಕ್ತಿಯ ಭಾವನೆಗಳ ಅಭಿವ್ಯಕ್ತಿಗೆ ಭಾಷೆ ಮತ್ತು ಸಾಹಿತ್ಯ ಪೂರಕವಾಗಿದ್ದು, ಭಾಷೆ, ಶಬ್ದ ಬಳಕೆಯ ಹಿಂದಿರುವ ಮನೋಭಾವ ರಚನಾ ಕೌಶಲ್ಯವನ್ನು ವಚನಗಳಲ್ಲಿಯೂ ಶೋಧಿಸಬಹುದು. ವಚನಗಳನ್ನು ಆಧ್ಯಾತ್ಮಿಕ, ಸಾಮಾಜಿಕ, ಧಾರ್ಮಿಕ, ಮಾನವಿಕ ಮತ್ತು ವೈದ್ಯಕೀಯವಾಗಿಯೂ ವಿಶ್ಲೇಷಣೆ ಮಾಡಬಹುದು ವಚನಗಳ ಪ್ರಮುಖ ಉದ್ದೇಶ **"ದೇಹವನ್ನು ಆವರಿಸಿದ ಅಜ್ಞಾನವನ್ನು ದೇಹದಲ್ಲಿಯೇ ಸಂಗಮವಾದ ಜ್ಞಾನದ ಮೂಲಕ ಓಡಿಸಿವುದು"** ಮತ್ತು ವಿವಿಧ ವಚನಕಾರರ ವೈಯುಕ್ತಿಕ ಅನುಭವ ಅನಿಸಿಕೆಗಳ ಮೂಲಕ ಅಜ್ಞಾನದ ತೆರೆ ಸರಿಸುವುದು. ವೈದ್ಯ

ಸಂಗಣ್ಣನ ವಚನಗಳಲ್ಲಿ ವೈಜ್ಞಾನಿಕವಾಗಿ ಮೂರ್ತ ಮತ್ತು ಅಮೂರ್ತ ಕಲ್ಪನೆಗಳನ್ನು ಈತನ ವಚನಗಳಲ್ಲಿ ಶೋಧಿಸಬಹುದು.

ವಚನ ಸಾಹಿತ್ಯ ಎನ್ನುವುದು ವೈಯುಕ್ತಿಕ ಅನುಭವಗಳ ಅಭಿವ್ಯಕ್ತಿ ಎಂದು ತಿಳಿದರೂ ಒಬ್ಬೊಬ್ಬ ವಚನಕಾರರು ಒಂದೊಂದು ರೀತಿಯಲ್ಲಿ ಅಭಿವ್ಯಕ್ತಿಸುತ್ತಾರೆ. ತಾವು ಅನುಭವಿಸಿದ ಸ್ಥಿತಿ ಮತ್ತು ನೋಡಿದ ದೃಶ್ಯಗಳನ್ನು ಕಣ್ಣಿಗೆ ಕಟ್ಟುವ ಹಾಗೆ ವಚನಗಳಲ್ಲಿ ವ್ಯಕ್ತಪಡಿಸಿದ್ದಾರೆ. ಅವರ ಅಭಿವ್ಯಕ್ತಿ ಒಂದು ನೇರ ಅರ್ಥವನ್ನು ನೀಡುತ್ತಿದ್ದರೂ ಮತ್ತೊಂದು ಆಂತರಿಕ ಅರ್ಥವನ್ನು ನೀಡುತ್ತದೆ. ಹಾಗೆಯೇ ವಚನಗಳಲ್ಲಿ ವೈಜ್ಞಾನಿಕ ವಿಚಾರಗಳನ್ನು ನೋಡುತ್ತೇವೆ ಇವು ಬೆಡಗಿನಂತೆ ತೋರುವ ವೈಜ್ಞಾನಿಕ ವಚನಗಳು ಇಲ್ಲಿ ಪರಸ್ಪರ ಸಂಬಂದವೇ ಇಲ್ಲದ ರೂಪಕಗಳು ಸೇರಿ ಪ್ರತಿಮೆಯಾಗುತ್ತವೆ ಇಲ್ಲಿ ಬಳಸಿದ ರೂಪಕಗಳಿಗೆ ಸಾವಯುವ ಸಂಬಂಧ ತೀರ ತೆಳುವಾಗಿ ಮತ್ತು ಸೂಕ್ಷ್ಮವಾಗಿ ಇರುತ್ತದೆ ಏಕೆಂದರೆ ಬೆಡಗಿನಂತೆ ತೋರುವ ವೈಜ್ಞಾನಿಕ ವಚನಗಳ ಸ್ವರೂಪವೇ ಹಾಗೆ.

'ಅರಿಯದವಂಗೆ ಅರಿದಿಹೆನೆಂಬ ಬಯಲರೋಗ ಹುಟ್ಟಿ.....'ಈ ಸಾಲಿನಲ್ಲಿ ಅರಿಯದೇ ಇರುವವ ತನಗೆ ಎಲ್ಲವೂ ತಿಳಿದಿದೆ ಎಂದು ಹೇಳಿಕೊಳ್ಳುತ್ತಾನೆ. ಇದೇ ಒಂದು ಕಾಯಿಲೆ, ಎಂದು ವೈದ್ಯ ಸಂಗಣ್ಣ ಹೇಳುತ್ತಾರೆ. ಇದು ಒಂದು 'ಬಯಲರೋಗ' ಬಯಲು ಎಂದರೆ 'ಜಗತ್ತು ಉತ್ಪತ್ತಿಯಾಗುವುದಕ್ಕೆ ಮುಂಚೆ, ಭೂಮಿಯ ಮೇಲೆ ಜೀವ ಸಂಕುಲಗಳು ಬರುವ ಮೊದಲು ಇದ್ದ ಸ್ಥಿತಿ ಅದೇ ಶೂನ್ಯ ಸ್ಥಿತಿ' ಇಂತಹ ಶೂನ್ಯದಲ್ಲಿ ಇರುವ ವ್ಯಕ್ತಿ ತನಗೆ ಎಲ್ಲವೂ ತಿಳಿದಿದೆ ಎನ್ನುವ ಬಯಲರೋಗ ಹುಟ್ಟಿದೆ. ಇದರ ಪರಿಣಾಮ ಕಾಲುಗೆಟ್ಟು, ದೃಷ್ಟಿ ನಷ್ಟವಾಗಿ ಹೋಯಿತ್ತು. ಅದಕ್ಕೆ ನಾನೊಂದು ಮದ್ದನ್ನು ಕಂಡು ಹಿಡಿದಿದ್ದೇನೆ. ಅದು 'ಹೆಸರಿಲ್ಲದ ಗಿಡ, ಮೂಲವಿಲ್ಲದ ಬೇರು, ಎಲೆ ಹೂ ನಷ್ಟವಾದ ಚಿಗುರಿನ ಕುಲಗೆಟ್ಟು ಸಹ ಮೂಲಮಂ ತಂದು' ಈ ಸಾಲಿನ ಅರ್ಥ ದೇಹವನ್ನು ಕುರಿತು ಹೇಳುತ್ತಾನೆ. ಈ ದೇಹಕ್ಕೆ ಹೆಸರಿಲ್ಲ, ಬೇರಿಲ್ಲ. ಎಲೆ ಹೂ ಇಲ್ಲ ಅಂತಹದ್ದನ್ನು ಸಹ ಮೂಲಮಂ ಅಂದರೆ ಪೂರ್ತಿಯಾಗಿ ಆಂತರಿಕ ಮತ್ತು ಬಾಹ್ಯ, ಮನಸ್ಸು ಮತ್ತು ದೇಹವನ್ನು ಪೂರ್ತಿಯಾಗಿ ಒಂದು ಹತ್ತಿರ ತಂದು ಅ ಕಲ್ಲೆಂಬ ದೇಹದಲ್ಲಿ ಸುಜಲವನ್ನು ಅರೆದು ಅಂದರೆ ತನ್ನಲ್ಲಿರುವ ಅಹಂಕಾರವನ್ನು ಅರಿವೆಂಬ ಜ್ಞಾನದಿಂದ ಅರೆದಾಗ ಆ ಮದ್ದ ತಟ್ಟೆಯಲ್ಲಿ ಇಕ್ಕುವ ಮೊದಲೆ ವ್ಯಕ್ತಿಯ ರೋಗ ನಷ್ಟವಾಗುತ್ತದೆ ಮತ್ತು ಮಾಯಾವಾಗುತ್ತದೆ. ಮರುಳ ಶಂಕರ ಪ್ರಿಯ ಸಿದ್ದರಾಮೇಶ್ವರನ ಲಿಂಗವನ್ನು ಅರಿತಾಗ ಎಂದು ವೈದ್ಯ ಸಂಗಣ್ಣ ತಿಳಿಸಿದ್ದಾರೆ.

ವೈದ್ಯ ಸಂಗಣ್ಣ "ಮರುಳ ಪ್ರಿಯ ಸಿದ್ದರಾಮೇಶ್ವರಲಿಂಗ"ಎನ್ನುವ ಅಂಕಿತದಲ್ಲಿ ೨೧ ವಚನಗಳನ್ನು ರಚಿಸಿದ್ದಾರೆ. ಈತನು ವೃತ್ತಿಯಲ್ಲಿ ವೈದ್ಯ. ವೈದ್ಯ ಸಂಗಣ್ಣ ನಾಡಿಗಳ ವಿವರ ನೀಡಿದ್ದಾನೆ. ಅಂಗಾಲ ಮೇಲಣ ದೊಡ್ಡಂಗುಷ್ಟ, ಮದ್ಯದಲ್ಲಿ ಪೃಥ್ವಿನಾಡಿ ನಾಭಿ ಮೂತ್ರನಾಳದ ನಾಲ್ಕಂಗುಲ ಮದ್ಯದಲ್ಲಿ ಅಪ್ಪುನಾಡಿ ಉರಸೂತ್ರ ನಾಭಿ ಮೊದಲಾದ ಪಂಚಾಂಗುಲ ಮದ್ಯದ ಮೇಲ್ದೆಸೆಯಲ್ಲಿ(ತೇಜನಾಡಿ), ಇಡಾ ಪಿಂಗಳ ಮಧ್ಯದಲ್ಲಿ ಆಕಾಶಕೈದಿದ ನಾಡಿ ಹೀಗೆ ಐದು ಮಾರ್ಗವನ್ನು ಹೊಂದಿರುವ ನಾಡಿಯಲ್ಲಿ ಆಡುವ ಆತ್ಮನ ದಿಕ್ಕಿನ

ವಿವರವನ್ನು ತಿಳಿದು ಈ ಐದು ಮಾರ್ಗಗಳನ್ನು ಮುಚ್ಚಿ ಮೇಗಣ ಬ್ರಹ್ಮ ರಂಧ್ರವನ್ನು ನಮ್ಮ ವೈದ್ಯರು ಮುಟ್ಟಿದರೆಂದು (ವ.ಸ.೧೦೨) ತಿಳಿಸಿದ್ದಾರೆ. ಈ ಹಿನ್ನೆಲೆಯಲ್ಲಿ ವೈದ್ಯ ಸಂಗಣ್ಣನ ವಚನಗಳ ವೈಜ್ಞಾನಿಕ ವಿಚಾರಗಳ ವಿಷಯದಲ್ಲಿ ಶೋಧನೆಯನ್ನು ಕೈಗೊಂಡಿರುತ್ತೇನೆ.

ಪ್ರಸ್ತುತ ವೈದ್ಯ ಸಂಗಣ್ಣನ ವಚನಗಳ ಕುರಿತು ಅಧ್ಯಯನ ಮಾಡುತ್ತಿದ್ದು ಅದಕ್ಕೆ "ವೈದ್ಯ ಸಂಗಣ್ಣನ ವಚನಗಳ ವೈಜ್ಞಾನಿಕ ನೆಲೆ" ಎಂಬ ಶೀರ್ಷಿಕೆಯಡಿಯಲ್ಲಿ ಶೊಧನೆಗೆ ಪ್ರಯತ್ನಿಸಿದ್ದೇನೆ. ಎಲ್ಲಾ ವಚನಕಾರರು ತಮ್ಮ ಕಾಯಕ ವೃತ್ತಿಗೆ ಅನುಗುಣವಾಗಿ ತಮ್ಮ ಅನುಭವಗಳನ್ನು ವಚನಗಳ ಮೂಲಕ ಸಮಾಜಕ್ಕೆ ತಿಳಿಯ ಪಡಿಸುವ ಕಾಯಕ ತೊಟ್ಟಿದ್ದರು. ಕಾಯಕ ಎಂದರೆ ಸಮರ್ಪಣ ಭಾವ, ಸಮರ್ಪಣ ಭಾವದಿಂದ ಮಾಡುವ ಕೆಲಸ. ಅಂದರೆ ತನು ಮನ ಧನಗಳನ್ನು ಅರ್ಪಿಸಿ ಕಾಯಕ ಮಾಡಬೇಕೆಂದುವೈದ್ಯಸಂಗಣ್ಣ ವಚನಗಳ ಮೂಲಕ ವಿವರಿಸುತ್ತಾನೆ. ವಚನ ಪರಂಪರೆಯಲ್ಲಿ ಕಾಯಕ ಹೆಚ್ಚು ಮಹತ್ವವನ್ನು ಪಡೆದಿದೆ. ವೈದ್ಯ ಸಂಗಣ್ಣ ಈ ಕಾಯಕವನ್ನೇ ನಂಬಿದವನಾಗಿದ್ದು ಈತ ಭವರೋಗದ ವೈದ್ಯನಾಗಿದ್ದಾನೆ. ಭವ ಎಂದರೆ "ಜನನ ಮರಣಗಳ ನಡುವಿನ ತೊಂದರೆ ಅಥವಾ ಇಹದಲ್ಲಿ ಸಂಸಾರದ ಜಂಜಾಟದಲ್ಲಿ ಸಿಲುಕಿ ಹಾಕಿಕೊಂಡವನು ಎನ್ನುವ ಅರ್ಥವಿದೆ."[೨] ಈ ಭವದಲ್ಲಿ ಸಿಲುಕಿದ ವ್ಯಕ್ತಿಯ ಕಾಯಿಲೆಯನ್ನು ವಾಸಿ ಮಾಡುವ ವೈದ್ಯನಾಗಿದ್ದಾನೆ. ಶರೀರ ಮತ್ತು ಆತ್ಮಗಳ ನಡುವಿನ ಅಂತರದ ಬಗ್ಗೆ ತಿಳಿಸಿದ್ದಾನೆ. ಈ ಅಂತರ ಅಜ್ಞಾನದಿಂದ ಬಂದದ್ದು ಬೇಗ ಅರಿತುಕೊಳ್ಳಿ ಎಂದು ಚೇತನವನ್ನು ತುಂಬವವನು ವೈದ್ಯ ಸಂಗಣ್ಣ ಈತ ವೈದ್ಯಶಾಸ್ತ್ರಕ್ಕೆ ಕೊಟ್ಟ ಕೊಡುಗೆ ಅಪೂರ್ವವಾದದ್ದು ಈ ಕುರಿತು ಅನ್ವೇಷಣೆ ಮಾಡುವುದು ಅತ್ಯವಶ್ಯಕ.

## ಅಧ್ಯಯನದ ಉದ್ದೇಶ:

ವಚನ ಸಾಹಿತ್ಯ ಪರಂಪರೆಯಲ್ಲಿ ವೈದ್ಯ ಸಂಗಣ್ಣ ಗಮನಾರ್ಹ ವಚನಕಾರರಲ್ಲಿ ಒಬ್ಬರು. ವೈದ್ಯ ಸಂಗಣ್ಣನವರು ಹೆಸರೇ ಸೂಚಿಸುವ ಹಾಗೆ ಈತನ ಕಾಯಕ ವೈದ್ಯ ವೃತ್ತಿ. ಶರೀರದ ರೋಗಗಳ ಉಪಶಮಕ್ಕೆ ಬಹಿರಂಗ ಚಿಕಿತ್ಸೆಯ ಜೊತೆಗೆ ಅಂತರಂಗದ ಚಿಕಿತ್ಸೆಯೂ ನಡೆಯಬೇಕೆಂಬುದು, ಶಿವಯೋಗ ಮತ್ತು ಕರ್ಮಯೋಗ, ಷಟಸ್ಥಲಗಳು, ಅಷ್ಟಾವರಣ, ತ್ರಿವಿಧ ದಾಸೋಹ, ಅರಿವೇ ಗುರು, ಸ್ಥಾವರ–ಜಂಗಮ ಪರಿಕಲ್ಪನೆಯ ಬಗ್ಗೆಯೂ ಈತನ ವಚನಗಳು ಬೆಳಕು ಚೆಲ್ಲುತ್ತವೆ. ಪ್ರಸ್ತುತ ನನ್ನ ಅಧ್ಯಯನದಲ್ಲಿ 'ವೈದ್ಯ ಸಂಗಣ್ಣನ ವಚನಗಳ ವೈಜ್ಞಾನಿಕ ನೆಲೆ' ಹೇಗೆ ಹೊಂದಿದೆ, ವೈಜ್ಞಾನಿಕ ವಿಚಾರಗಳನ್ನು ಹೇಗೆ ಪ್ರತಿಬಿಂಬಿಸುತ್ತದೆ ಮತ್ತು ಕರ್ಮಯೋಗ ಶಿವಯೋಗದ ಮೂಲಕ ಷಟ್‌ಸ್ಥಲಗಳ ಮೂಲಕ ಸಾಧಿಸಿ ಸಿದ್ದಿಯನ್ನು ಪಡೆಯಬಹುದು ಎಂಬುದನ್ನು ಶೋಧಿಸಲು ಪ್ರಯತ್ನಿಸಿದ್ದೇನೆ.

"ವಚನ ಸಾಹಿತ್ಯ ಪರಂಪರೆಯ ಅನ್ನುವುದು ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಒಂದು ತಪೋವನವನ್ನು ಪ್ರವೇಶಿಸಿದ ಅನುಭವ ಕೊಡುತ್ತದೆ."[೩] ಈ ತಪೋವನ ಎಲ್ಲಾ ಸಿದ್ಧ ಸಾಧಕರು ಅಂದರೆ

ವಚನಕಾರರು ನಮ್ಮ ಅಂತರಂಗವನ್ನು ಪರಿಶುದ್ಧಗೊಳಿಸಿ ಆತ್ಮದ ಬಂಧನಗಳು ಕಳಚಿ ನಮ್ಮನ್ನು ಮುಕ್ತರನ್ನಾಗಿಸಿ ಮಾಡುವ ಒಂದು ದಿವ್ಯ ಆನಂದಾನುಭವ ಕೊಡುವಂತಹ ಕೀರ್ತಿ ವಚನ ಸಾಹಿತ್ಯಕ್ಕೆ ಸಲ್ಲುತ್ತದೆ. ಇಂತಹ ಇತಿಹಾಸವನ್ನು ಹೊಂದಿರುವ ವಚನ ಸಾಹಿತ್ಯದಲ್ಲಿ ವೈದ್ಯ ಸಂಗಣ್ಣನೂ ತನ್ನ ವಚನಗಳಲ್ಲಿ ವೈದ್ಯಕೀಯ ಪರಿಭಾಷೆಯ ಪದಗಳಾದ ತ್ರಿಸಂಧಿ, ಜೀರ್ಣಪರ್ಣದಂತೆ ರೋಮಕೂಪದಲ್ಲಿಸೂಸುವ ವಾಯು, ಘಟತ್ರಯದ ಬೇಧವನರಿದು ಮಾಡುವ ಕ್ರಮವೆಂತುಂಟೆಂದಡೆ ಎಂಬ ಪದಗಳನ್ನು ಬಳಸುತ್ತಾ ವೈದ್ಯ ಜ್ಞಾನವನ್ನು ಜನರಲ್ಲಿ ತುಂಬುವ ಪ್ರಯತ್ನ ಮಾಡಿರುತ್ತಾನೆ.

ವೈದ್ಯ ಸಂಗಣ್ಣನು ವೈದ್ಯಕೀಯ ಕಾಯಕವನ್ನು ಕೈಗೊಂಡವನು. ಈತ ಶಿವಯೋಗಿಯಾಗಿ ಷಟ್‌ಸ್ಥಲದ ತತ್ವಗಳನ್ನು, ಅಂತಃಶರೀರ ಮತ್ತು ಬಾಹ್ಯಶರೀರ ಎರಡಕ್ಕೂ ಅಂತರ್ ಸಂಬಂಧವನ್ನು ಕಲ್ಪಿಸಿ ವೈದ್ಯ ಮಾಡುತ್ತಿದ್ದರು. ಪಂಚಾಕ್ಷರಿ ಪ್ರಣವ ಮಂತ್ರವನ್ನು ಸರಿಯಾಗಿ ಪಾಲಿಸದಿದ್ದರೆ ಅವರಿಗೆ ರೋಗ ಉಂಟಾಗುವುದು. ಆತನ ರೋಗ ನಿವಾರಣೆ ಆಗಬೇಕಾದರೆ ತ್ರಿಕರಣಶುದ್ಧಿಯಾಗಿರಬೇಕು. ಆ ಮೇಲೆ ರೋಗ ದೂರವಾಗುವುದು. ಈ ಪ್ರಕಾರ ತನ್ನ ಕಾಯಕವನ್ನು ನಿರ್ವಹಿಸುತ್ತಾ ಲಿಂಗಾಂಗ ಸಾಮರಸ್ಯವನ್ನು ಹೊಂದಿದ್ದನು. ಈತನ ಒಂದು ವಚನದಲ್ಲಿ ಶಿವಾನುಭವದ ತತ್ವ ಬೋಧೆಯ ಮುಖಾಂತರ ರೋಗವನ್ನು ನಿವಾರಿಸುವ ಕ್ರಮವು ನಮಗೆ ಕಂಡು ಬರುವುದು.

"ನಾನಾ ರೋಗಂಗಳು ಬಂದು ದೇಹವ ಹಿಡಿದಲ್ಲಿಶಿವಾರ್ಚನೆಯ ಬೆರಕೊಳ್ಳಿ,

ಸಕಲ ಪುಷ್ಪಂಗಳಿಂದ ಪೂಜೆಯ ಮಾಡಿಕೊಳ್ಳಿ,

ಪಂಚಾಕ್ಷರಿ ಪ್ರಣವ ತಪ್ಪದೆ ತ್ರಿಸಂಧಿಯಲ್ಲಿ ನೆನಹುಗೊಳ್ಳಿ,

ಇದರಿಂದ ರುಜೆದರ್ಪಂಗಡುಗು,

ಮರುಳ ಶಂಕರ ಪ್ರಿಯ ಸಿದ್ಧರಾಮೇಶ್ವರ ಲಿಂಗ ಸಾಕ್ಷಿಯಾಗಿ."

– [ಸ. ವ. ಸಂ: ೪ – ವ. ಸಂ–೧೨೧]

ಈ ಮೇಲಿನ ವಚನದಲ್ಲಿ ತಾನು ವೈಜ್ಞಾನಿಕ ಚಿಂತನೆಯನ್ನು ತನ್ನ ವಚನಗಳಲ್ಲಿ ಸ್ಫುರಿಸುತ್ತಿದ್ದಂತೆ ಈ ವಚನದಲ್ಲಿ ಆದ್ಯಾತ್ಮಿಕ ಚಿಂತನೆಯ ಬಗ್ಗೆಯೂ ಗಮನ ಹರಿಸುತ್ತಾನೆ. ನಾನಾ ರೋಗಗಳು ಹಿಡಿದ ದೇಹಕ್ಕೆ ಶಿವಾರ್ಚನೆಯ ಮೊರೆ ಹೋಗಲು ತಿಳಿಸಿದ್ದಾರೆ. ಸಕಲ ಪುಷ್ಪಗಳಿಂದ ಪೂಜೆಯ ಮಾಡಬೇಕು ಎಂದು ತ್ರಿಸಂಧಿಯಲ್ಲಿ ಅಂದರೆ ಪಂಚಾಕ್ಷರಿ ಪ್ರಣವ ತಪ್ಪದೆ ತ್ರಿಸಂಧಿಯಲ್ಲಿ ನೆನಹುಗೊಳ್ಳಿ, ಇದರಿಂದ

ರುಜೆದರ್ಪಂಗಡುಗು, ಮೂರು ಸಮಯಗಳಲ್ಲಿ ಪಂಚಾಕ್ಷರಿ ಪ್ರಣವ ಮಂತ್ರ 'ಓಂ ನಮಃ ಶಿವಾಯ'ವನ್ನು ತಪ್ಪದೇ ಪಠಿಸಬೇಕು ಎಂದು ತಿಳಿಸಿದರು. ಇದರಿಂದ ರೋಗ ದರ್ಪಗಳು ಹೋಗುತ್ತವೆ ಎಂದು ಹೇಳುತ್ತಾರೆ. ಮತ್ತೊಂದು ಅರ್ಥದಲ್ಲಿ ಹೇಳುವುದಾದರೆ ನಮ್ಮ ದೇಹಕ್ಕೆ ಅಜ್ಞಾನವೆಂಬ ಕಾಯಿಲೆ ಹಿಡಿದಿದೆ, ಅದನ್ನು ನಮ್ಮಲ್ಲಿರುವ ಜ್ಞಾನ ಜ್ಯೋತಿಯಿಂದ ಅರಿತುಕೊಳ್ಳಬೇಕು. ನಮ್ಮಲ್ಲೇ ಇರುವ ಅರಿವು ಅದೇ ಶಿವ, ಆ ಶಿವನಿಗೆ ಸಕಲ ಪುಷ್ಪಂಗಳಿಂದ ಪೂಜೆ ಮಾಡಿ ತ್ರಿಸಂಧಿಯಲ್ಲಿ ಪಂಚಾಕ್ಷರಿ ಪ್ರಣವ ಮಂತ್ರವನ್ನು ಉಚ್ಛ್ವಾಸ ಮತ್ತು ನಿಚ್ಛ್ವಾಸಗಳ ಮೂಲಕ ನೆನೆದರೆ ರೋಗ ಹೋಗುತ್ತದೆ. ನಮ್ಮ ಉಸಿರಾಟ ಕ್ರಿಯೆ ಎನ್ನುವುದು ಉಚ್ಛ್ವಾಸ ನಿಚ್ಛ್ವಾಸಗಳಲ್ಲಿ ನಡೆಯುತ್ತದೆ. ನಮ್ಮ ಜೀವಾತ್ಮದ ಉಳಿವಿಗೆ ಮೂಲ ಕಾರಣ, ಆದ್ದರಿಂದ ವೈದ್ಯ ಸಂಗಣ್ಣನ ಪ್ರಕಾರ ಜೀವಾತ್ಮದ ಉಳಿವಿಗೆ ಕಾರಣವಾದ ಉಸಿರೇ ಶಿವ ಅದನ್ನು ತ್ರಿಸಂಧಿಯಲ್ಲಿ ನೆನೆದಾಗ ರೋಗ ವಾಸಿಯಾಗುತ್ತದೆ ಎಂದು ತಿಳಿಸಿದ್ದಾರೆ.

**ಅಧ್ಯಯನದ ವ್ಯಾಪ್ತಿ ಮತ್ತು ಸ್ವರೂಪ:**

ಪ್ರಸ್ತುತ ಅಧ್ಯಯನವು ವೈದ್ಯ ಸಂಗಣ್ಣನ ಒಟ್ಟು ೨೧ ವಚನಗಳ ಮೇಲೆ ಬೆಳಕು ಬೀರುವುದು ಮುಖ್ಯ ಉದ್ದೇಶವಾಗಿದೆ. ಈ ವಚನಗಳಲ್ಲಿ ಪ್ರಮುಖವಾಗಿ ವೈದ್ಯಕೀಯ ಶಾಸ್ತ್ರದ ಆಯಾಮವನ್ನು ಇಟ್ಟುಕೊಂಡು ವಚನಗಳು ರಚನೆಯಾಗಿವೆ. ವಚನಗಳಲ್ಲಿ ಶರೀರದ ಕಾಯಿಲೆಗಳ ಉಪಶಮನಕ್ಕೆ ಬಹಿರಂಗದ ಚಿಕಿತ್ಸೆಯಾದರೆ ಮಾತ್ರ ಅಂತರಂಗದ ಸ್ವಾಸ್ಥ್ಯ ಕಾಪಾಡಲು ಸಾಧ್ಯ ಎಂದು ತಿಳಿಸಿಕೊಟ್ಟಿದ್ದಾರೆ. ಮೊದಲಿಗೆ ನಾಡಿಗಳ ಕುರಿತು ಹೇಳಿದವರು ವೈದ್ಯ ಸಂಗಣ್ಣ ಆದರೆ "ಆಯುರ್ವೇದದಲ್ಲಿ ಮೊದಲ ಬಾರಿಗೆ ನಾಡಿಯ ಬಗ್ಗೆ ಪ್ರಸ್ತಾಪಿಸಿದವರು ಗುಜರಾತಿ ಹಮ್ಮೀರ ದೇಶದ 'ಶರಾಂಗದರ' ಎಂಬ ಪ್ರಾಚೀನ ವೈದ್ಯ ಗ್ರಂಥಗಳಲ್ಲಿ ದಾಖಲಾಗಿದೆ. ಇವನು ಕ್ರಿ.ಶ. ೧೩೬೧ರಲ್ಲಿ ಜೀವಿಸಿದ್ದನು. ಆದರೆ ಇವನಿಗಿಂತಲೂ ಮೊದಲು ೨೦೦ ವರ್ಷಗಳ ಪೂರ್ವದಲ್ಲಿ ವಚನಕಾರ ವೈದ್ಯ ಸಂಗಣ್ಣನು ತನ್ನ ಒಂದು ವಚನದಲ್ಲಿ ೨೬ ನಾಡಿಗಳ ಬಗ್ಗೆ ವರ್ಣಿಸಿದ್ದಾನೆ"[೩].ಈ ವಚನದಲ್ಲಿ ಇರುವೆಯಿಂದ ಹಿಡಿದು ಆನೆಯವರೆಗೆ, ಉರುಗ, ಮಂಡೂಕ, ಮಯೂರ, ಮಕರದಂತಹ ಪ್ರಾಣಿ ಪಕ್ಷಿಗಳ ಚಲನವಲನಗಳಂತೆ ರೋಗಿಯಲ್ಲಿ ನಾಡಿಗಳು ಹರಿದಾಡುತ್ತವೆ ಎಂಬ ವಿಚಾರವನ್ನು ವೈದ್ಯ ಸಂಗಣ್ಣನ ವಚನಗಳಲ್ಲಿ ಕಾಣಬಹುದು.

ಪೂರ್ವದಲ್ಲಿ ಪ್ರಸಿದ್ಧಿಯನ್ನು ಪಡೆದ ಚರಕ, ಶುಶ್ರುತರ ಗ್ರಂಥಗಳಲ್ಲಿ ನಾಡಿಯ ಬಗ್ಗೆ ಎಲ್ಲಿಯೂ ಪ್ರಸ್ತಾಪವಿಲ್ಲ. ಆಗಿನ ಕಾಲದಲ್ಲಿ ಹೆಚ್ಚು ಪ್ರಸಿದ್ಧಿಯನ್ನು ಪಡೆದ ವೈದ್ಯರು ಇವರಿಗೆ ನಾಡಿಯ ಬಗ್ಗೆ ಸರಿಯಾಗಿ ತಿಳಿದಿರಲಿಲ್ಲ. ಹಾಗಾಗಿ ವೈದ್ಯ ಜಗತ್ತಿಗೆ ನಾಡಿಯ ಬಗ್ಗೆ ವೈಜ್ಞಾನಿಕವಾಗಿ ಮೊಟ್ಟ ಮೊದಲ ಬಾರಿಗೆ ತಿಳಿಸಿದವರೆಂದರೆ ಶರಣ ವೈದ್ಯ ಸಂಗಣ್ಣನವರಾಗಿದ್ದಾರೆ. ಆಧುನಿಕ ಜಗತ್ತಿಗೆ ನಾಡಿಮಿಡಿತದ ಬಗ್ಗೆ ಬ್ರಿಟನ್‌ದ 'ತಾನ್ ಪ್ಲೋಯರ್' ಎಂಬಾತ ೧೭೦೭ರಲ್ಲಿ ಬರೆದ 'ವೈದ್ಯನ ನಾಡಿ ನಿರೀಕ್ಷೆಣೆ' ಎಂಬ ಗ್ರಂಥದಲ್ಲಿನ ವಿಚಾರವೇ ಮೊದಲಿನದೆಂದು ನಂಬಲಾಗಿದೆ"[೪].

“ಮಯೂರ ನಾಡಿ, ಮಂಡೂಕ ನಾಡಿ, ಜಳೂಕ ನಾಡಿ, ಅಹಿವಳಿ ನಾಡಿ,

ಮಂಡಲಗಮಕ ನಾಡಿ, ಷಂಡೇತಪಥ ನಾಡಿ, ದೀರ್ಘನಾಡಿ,

ಅಧಮನಾಡಿ, ಉತ್ತರನಾಡಿ, ಪೂರ್ವನಾಡಿ, ಪಶ್ಚಿಮನಾಡಿ,

ಗಜಗಮನನಾಡಿ, ಹಚ್ಚೋತಿನಾಡಿ, ವಿಕ್ರಮನಾಡಿ, ಸೂತ್ರನಾಡಿ,

ಸಂಚುನಾಡಿ, ಸಂಚಲನಾಡಿ, ಶೈತ್ಯನಾಡಿ, ಉಷ್ಣನಾಡಿ,

ವಿಹಂಗನಾಡಿ, ಕೂರ್ಮನಾಡಿ, ಮರ್ಕಟನಾಡಿ,

ಪಿಪೀಲಿಕಾನಾಡಿ, ದಂಷ್ಟ್ರನಾಡಿ, ಮಕರನಾಡಿ, ಕರ್ಕೋಟಕನಾಡಿ,

ಸಮರಸನಾಡಿ, ಸಂತೋಷನಾಡಿ,

ಇಂತೀ ಪ್ರಥಮನಾಡಿಯೊಳಗಾದ ಶರೀರದಲ್ಲಿ ತೋರುವನಾಡಿ

ಜೀರ್ಣಪರ್ಣದಂತೆ ರೋಮಕೂಪದಲ್ಲಿ ಸೂಸುವ ವಾಯು,

ಇಂತಿವ ನೋಡಿ ವ್ಯಾಧಿ ಕ್ರಮವನರಿತೆಹೆನೆಂದಡೆ ಅದಾರಿಗೂ ಅಸಾಧ್ಯ

ನಾ ಮೂರು ನಾಡಿಯ ಬಲ್ಲೆ,

ಉತ್ಪತ್ಯ ಒಂದುಸ್ಥಿತಿ ಎರಡು, ಲಯ ಮೂರು,

ನಾಳದ ನಾಡಿಯ ಬಲ್ಲೆ, ಭಕ್ತಿಯೆಂಬ ಹಸ್ತವಿಡಿದು ನೋಡಲಾಗಿ.

ಗುರುನಾಡಿ ಉಭಯವ ಕೊಂಡೆಡೆಯಾಡುತ್ತಿದೆ,

ಲಿಂಗನಾಡಿ ತ್ರಿಸಂಧಿಯೊಳಗೆ ಸೂಸುತ್ತಿದೆ.

ಜಂಗಮನಾಡಿ ಮೂರರ ಹಂಗು ಬಿಟ್ಟು ಮಹದಲ್ಲಿ ಸಂದಿರುತ್ತದೇಕೋ?

ಇದು ಲಿಂಗಾಂಗಿಗಳ ವೈದ್ಯ

ಸಂಗನ ಬಸವಣ್ಣ ಬಂದಾಗ ಎನ್ನಕೊಂಡು ಬಂದ,

ತನ್ನ ವಶಕ್ಕೆ ವೈದ್ಯನೆಚಿದು.

ಈ ವೈದ್ಯದ ಚೀಲವ ಹೊತ್ತು ಗಸಣಿಗೊಳ್ಳುತ್ತಿದ್ದೇನೆ.

ಈ ಕಾಯಕದ ಸೇವೆಯ ಬಿಡಿಸಿ, ಕರಣ, ಪ್ರಸಾದವ ಕೊಟ್ಟು,

ಮರುಳ ಶಂಕರ ಪ್ರಿಯ ಸಿದ್ದರಾಮೇಶ್ವರ ಲಿಂಗ ನಿಮ್ಮಡಿಯೊಳಗೆನ್ನನಿರಿಸ." ‖

– [ಸ.ವ.ಸಂ. ೪ – ವ.ಸಂ – ೧೨೪]

ವೈದ್ಯ ಸಂಗಣ್ಣನ ಈ ವಚನವನ್ನು ಓದಿದ ಯಾವ ವೈದ್ಯನಾಗಲಿ ಸಂಗಣ್ಣನವರ ಈತನ "ನಾಡಿಜ್ಞಾನಕ್ಕೆ" ಋಣಿಯಾಗಿರದೆ ಇರಲು ಸಾಧ್ಯವಿಲ್ಲ. ಏಕೆಂದರೆ ಇಂದಿನ ಎಲ್ಲ ವೈದ್ಯರು ರೋಗಿಯನ್ನು ಪರೀಕ್ಷಿಸುವುದು ನಾಡಿಮಿಡಿತದಿಂದಲೆ ರೋಗದ ಲಕ್ಷಣವನ್ನು ಅರಿಯಲು ಪ್ರಯತ್ನಿಸುತ್ತಾರೆ. ಈತ ತಿಳಿಸಿದ ೨೬ ನಾಡಿಗಳಲ್ಲಿ ಹರಿದಾಡುವ ಆತ್ಮನ ನಿಹಿತವನ್ನು, ವ್ಯಾದಿಯ ಕ್ರಮವನ್ನು ಅರಿಯುವುದು ಅಸಾಧ್ಯ ಆದ್ದರಿಂದಲೇ ಆತ ಮೂರು ನಾಡಿಗಳನ್ನು ಮಾತ್ರ ನಾನು ತಿಳಿದಿರುವೆ ಅದು:

೧. ಗುರುನಾಡಿ

೨. ಲಿಂಗನಾಡಿ

೩. ಜಂಗಮನಾಡಿ

ಗುರು ಎಂದರೆ ಶಿಷ್ಯನಿಗೆ ಇಷ್ಟಲಿಂಗ ದೀಕ್ಷೆಯನ್ನು ಕೊಟ್ಟು ಅನುಗ್ರಹಿಸುವವನು. ಹಾಗೆಯೇ ನಮ್ಮ ದೇಹದಲ್ಲಿ ಇರುವ ಗುರುನಾಡಿಯೂ ಅದಕ್ಕೆ ಇಷ್ಟವಾದ ವಿಷಯಗಳನ್ನು ಮಾತ್ರ ನೀಡಿ ದೇಹಕ್ಕೆ ಉತ್ತಮ ಗುರು ಪ್ರಸಾದವಾಗುತ್ತದೆ. ಹಾಗೆಯೇ ಲಿಂಗ ಎಂದರೆ ಸಾಕ್ಷಾತ್ ಶಿವ, ಪರಶಿವನ ಸಂಕೇತವೇ ಲಿಂಗ. ಲಿಂಗನಾಡಿಯೂ ಸಹ ದೇಹವೇ ಲಿಂಗ–ಲಿಂಗವೇ ಅಂಗ. ಅಂಗವೇ ಅರಿವು ಎನ್ನುವದರ ಮೇಲೆ ಲಿಂಗ ನಾಡಿ ಎನ್ನುವುದು ದೇಹದಲ್ಲಿ ಹರಿಯುತ್ತದೆ. ಇದು ಸಹ ನಮ್ಮಲ್ಲಿನ ಅಹಂಕಾರ, ಅನಾಚಾರಗಳನ್ನು ದೂರವಿರಿಸಿ ಲಿಂಗಾಂಗಿಗಳ ವೈದ್ಯಕ್ಕೆ ಸಹಾಯಕವಾಗುತ್ತದೆ. ಹಾಗೆಯೇ ಜಂಗಮ ನಾಡಿಯೂ ಸಹ ಇಡೀ ದೇಹದಲ್ಲಿ ಸಂಚರಿಸಿ ಗುರು ಮತ್ತು ಲಿಂಗಗಳ ನಡುವಿನ ಸಾಮರಸ್ಯ ಕಾಯುತ್ತದೆ. ಸಂಗಣ್ಣ ಬಸವಣ್ಣನಿಂದ ತನ್ನ ಅರಿವಿನ ಜ್ಞಾನವನ್ನು ತಿಳಿದುಕೊಂಡೆನು. ನಾನು ಭವರೋಗದ ವೈದ್ಯನಾದೆನು. ಈ ಕಾಯಕದ ಸೇವೆ ಸಾಕಾಗಿದೆ ಮರುಳ ಶಂಕರ ಪ್ರಿಯ ಸಿದ್ದರಾಮೇಶ್ವರ ನಿಮ್ಮ ಅಡಿಯೊಳಗೆ ಎನಗೆ ಸ್ಥಾನವನ್ನು ಕೊಡು ಎಂದು ವೈದ್ಯ ಸಂಗಣ್ಣ ಬೇಡಿಕೊಳ್ಳುತ್ತಾನೆ.

"ಕಾಯದಲ್ಲಿ ಗುರು ತತ್ತ್ವ, ಜೀವದಲ್ಲಿ ಲಿಂಗ ತತ್ತ್ವ ಹಾಗೂ ಭಾವದಲ್ಲಿ ಜಂಗಮ ತತ್ತ್ವವನ್ನು ಅಳವಡಿಸಿಕೊಂಡು ಗುರು, ಲಿಂಗ, ಜಂಗಮವನ್ನು ಕಂಡು ಕೊಂಡಾಗ ಆ ಮೂರು ತತ್ತ್ವಗಳೂ ಆತನಲ್ಲಿ ನೆಲಸುತ್ತವೆ. ಲಿಂಗದೀಕ್ಷೆಯನ್ನು ಕೊಡುವ ದೀಕ್ಷಾಗುರು, ಅರಿವನ್ನು ನೀಡುವ ಶಿಕ್ಷಾಗುರು ಮತ್ತು

ಕಾಯಕರ್ಮವನ್ನು ಕೆಡಿಸಿ ಮುಕ್ತಿ ಮಾರ್ಗವನ್ನು ತೋರಿಸುವ ಮೋಕ್ಷಗುರು"[೫]. ಇವೆಲ್ಲವೂ ಅಜ್ಞಾನದಿಂದ ಜ್ಞಾನ ಮಾರ್ಗದೆಡೆಗೆ ನಮ್ಮನ್ನು ಕರೆದುಕೊಂಡು ಹೋಗುತ್ತವೆ.

ವೈದ್ಯ ಸಂಗಣ್ಣನು ಒಂದು ವಚನದಲ್ಲಿ ಗುರುವಿಂಗೆ ತನು, ಲಿಂಗಕ್ಕೆ ಮನ, ಜಂಗಮಕ್ಕೆ ಧನವನ್ನು ಕೊಡಬೇಕು ಎಂದು ಹೇಳುತ್ತಾರೆ. ಇದೇ ವಿಚಾರವನ್ನು ಬಸವಣ್ಣನು ಹೇಳುತ್ತಾನೆ. 'ತನುವ ಕೊಟ್ಟು ಗುರುವನೊಲಿಸಬೇಕು, ಮನವ ಕೊಟ್ಟು ಲಿಂಗವನೊಲಿಸಬೇಕು, ಧನವ ಕೊಟ್ಟು ಜಂಗಮನೊಲಿಸಬೇಕು ಎಂದು ಹೇಳಿದ್ದಾರೆ. ಗುರು ಲಿಂಗ ಜಂಗಮದಿಂದ ಪಾದೋದಕ ಪ್ರಸಾದ ಎಂದರೆ ನಮ್ಮಲ್ಲಿ ಜ್ಞಾನ ನಮಗೆ ಸಾಕ್ಷಾತ್ಕಾರ ಆಗುತ್ತದೆ.

ಇವು ಶಿವತತ್ವವನ್ನು ಹೇಳುತ್ತವೆ. ಕಾಯಕ ತತ್ವವನ್ನು, ಶಿವತತ್ವವನ್ನು, ವೈದ್ಯಕೀಯ ಚಿಕಿತ್ಸೆಯ ಬಗ್ಗೆಯೂ ಈತನ ವಚನಗಳು ಬೆಳಕು ಬೀರುವುದನ್ನು ಕಾಣುತ್ತೇವೆ.

ಭಕ್ತಿ ನಿಷ್ಠೆ, ವಿಶ್ವಾಸ ನಿಷ್ಠೆ, ಜ್ಞಾನ ನಿಷ್ಠೆ.

ಇಂತಿ ಸದ್ಭಾವ ನೆಲೆಗೊಳ್ಳದ ಕಾರಣ,

ತನುವಿಂಗೆ ಅನುಪಾನವ ಪಾನವ ಮಾಡಬೇಕು.

ಮೇಲೆ ಅರಿದಡೆ, ಮನವು ಮನದಲ್ಲಿ ನಿಲಬೇಕು,

ಮರುಳ ಶಂಕರ ಪ್ರಿಯ ಸಿದ್ದರಾಮೇಶ್ವರ ಲಿಂಗವ ನೊಡಗೂಡಬೇಕು."

ವೈದ್ಯಸಂಗಣ್ಣ ಶರೀರಶಾಸ್ತ್ರದ ಆದಿಯಾಗಿ ಅಂತರಂಗ ಶುದ್ಧಿ ಕ್ರಿಯೆಯನ್ನು ಮತ್ತು ಆತರಂಗಿಕ ಬದಲಾವಣೆಯನ್ನು ಸ್ವಾಸ್ಥ್ಯದಲ್ಲಿ ಇಡುವ ಮಾರ್ಗವನ್ನು ತಿಳಿಪಡಿಸಿದ್ದಾರೆ.

**ಕೊನೆ ಟಿಪ್ಪಣಿ:**

| | | |
|---|---|---|
| ೧. ಬಿ. ಆರ್.ಹಿರೇಮಠ | – | ಸಂಕೀರ್ಣ ವಚನ ಸಂಪುಟ–೪<br>ಪುಟಸಂಖ್ಯೆ ೪೧ ರಿಂದ ೫೧ ವಚನಗಳು. |
| ೨. ಎಸ್.ವಿದ್ಯಾಶಂಕರ | – | ವೀರಶೈವ ಪಾರಿಭಾಷಿಕ ಪದಕೋಶ<br>ಪುಟಸಂಖ್ಯೆ–೩೮೫. |
| ೩. ಎಂ.ಆರ್.ಶ್ರೀನಿವಾಸಮೂರ್ತಿ | – | ವಚನ ಧರ್ಮಸಾರ<br>ಪುಟಸಂಖ್ಯೆ – ೧ |
| ೪. ರುದ್ರೇಶ್ ಗಂಗಾಧರ ಕಿತ್ತೂರ | – | ವಚನ ಜ್ಞಾನ ವಿಜ್ಞಾನ<br>ಪುಟಸಂಖ್ಯೆ – ೮೨ |
| ೫. ಎಸ್.ವಿದ್ಯಾಶಂಕರ | – | ವೀರಶೈವ ಪಾರಿಭಾಷಿಕ ಪದಕೋಶ<br>ಪುಟಸಂಖ್ಯೆ – ೧೪೫ |

## ಅಧ್ಯಾಯ-೨

## ವೈದ್ಯ ಸಂಗಣ್ಣನ ವಚನಗಳ ವೈದ್ಯಕೀಯ ಚಿಕಿತ್ಸೆ

೧೨ನೇ ಶತಮಾನದಲ್ಲಿ ಪ್ರವರ್ದಮಾನಕ್ಕೆ ಬಂದ ವಚನ ಸಾಹಿತ್ಯ ಇಡೀ ಸಾಹಿತ್ಯ ಕ್ಷೇತ್ರದಲ್ಲಿಯೇ ಒಂದು ಮೈಲಿಗಲ್ಲು. ಈ ಸಮಯದಲ್ಲಿ ಬರುವ ಎಲ್ಲಾ ವಚನಕಾರರು ತಮ್ಮ ಅನುಭವದಿಂದ ಸೃಷ್ಟಿಯಾದದ್ದು ವಚನಸಾಹಿತ್ಯ. ಇಲ್ಲಿ ಕಾಲ್ಪನಿಕತೆಗೆ ಅವಕಾಶವಿಲ್ಲ. ಈ ಸಾಹಿತ್ಯ ಕೇವಲ ಒಂದು ವರ್ಗ, ಜಾತಿ, ಜನಾಂಗಕ್ಕೆ ಮಾತ್ರ ಸೀಮಿತವಾದದ್ದು ಅಲ್ಲ. ಇದು ಸರ್ವಕಾಲಕ್ಕೂ ಸರ್ವ ವಿಧಿತ. ಎಲ್ಲರಿಗೂ ಜ್ಞಾನ ಮಾರ್ಗದ ಅರಿವನ್ನು ಮೂಡಿಸುವ ಕಾಲಘಟ್ಟವಾಗಿದೆ. ವಚನಗಳಲ್ಲಿ ಅಡಗಿರುವ ವಿಷಯಗಳನ್ನು ಅರಿತಾಗ ನಮಗೆ ಅಂದಿನ ವಚನಕಾರರು ಒಬ್ಬ ವೈದ್ಯನಾಗಿ, ವಿಜ್ಞಾನಿಯಾಗಿ, ಗಣಿತಶಾಸ್ತ್ರಜ್ಞರಾಗಿ, ಖಗೋಳ ಜ್ಞಾನಿಗಳಾಗಿ, ಯೋಗ ಪಂಡಿತರಾಗಿ, ಕಾಲ ಜ್ಞಾನಿಗಳಾಗಿ, ಆಧ್ಯಾತ್ಮ ಜೀವಿಗಳಾಗಿ ಹೀಗೆ ನಾನಾ ಕ್ಷೇತ್ರಗಳಲ್ಲಿ ಪರಿಣತಿ ಪಡೆದವರಾಗಿ ನಮಗೆ ಕಾಣಬರುತ್ತಾರೆ. ಈ ಎಲ್ಲಾ ವಚನಕಾರರು ಸುಶಿಕ್ಷಿತರು ಎಂದು ಹೇಳಲು ಸಾಧ್ಯವಿಲ್ಲ. ಎಷ್ಟೋ ವಚನಕಾರರು ಪ್ರಾರಂಭದಲ್ಲಿ ಅನಕ್ಷರಸ್ಥರಾಗಿದ್ದರು ಮತ್ತು ವಿವಿಧ ಕಸಬುಗಳನ್ನು ಮಾಡುತ್ತಿದ್ದರು. ಅನೇಕ ವಚನಕಾರರು ಅಂದಿನ ಸಮಾಜದ ಮೇಲ್ವರ್ಗದವರಿಂದ ತುಳಿತಕ್ಕೆ ಒಳಗಾದವರಿದ್ದರು. ಇಂತಹ ಸಾಮಾನ್ಯ ವ್ಯಕ್ತಿಗಳು ಅದ್ಬುತ ಜ್ಞಾನ ಬಂಡಾರವನ್ನು ಹೊಂದಿರುವುದು ಸೋಜಿಗವೆ ಸರಿ. ಇವರ ಜ್ಞಾನ ಸಮಾಜದಲ್ಲಿ ಹೊಸ ಚೇತನ ಬದಲಾವಣೆಯುಂಟು ಮಾಡುವ ಹಾಗೆ ಆಗಲು ಸ್ಫೂರ್ತಿಯನ್ನು ತುಂಬಿದವರು ಮೊದಲಿಗೆ ಬಸವಣ್ಣನವರು. ಅವರ ಹಾದಿಯಾಗೆ ವೈದ್ಯ ಸಂಗಣ್ಣನು ತನ್ನ ಅರಿವಿನ ಮಾರ್ಗವನ್ನು ಶೋಧಿಸಿಕೊಂಡನು.

೧೮ನೇ ಶತಮಾನದಲ್ಲಿ ವೈದ್ಯಶಾಸ್ತ್ರ ಬೆಳವಣಿಗೆ ಹೊಂದಿದ ಕಾಲಘಟ್ಟ. ಖಗೋಳ ಶಾಸ್ತ್ರದ ಸಿದ್ಧಾಂತ ಪ್ರಪಂಚವನ್ನು ಹೊಸ ದಿಕ್ಕಿಗೆ ನಡೆಸಿತು ಎನ್ನುವದು ಜನರ ನಂಬಿಕೆ ಆದರೆ ೧೨ನೇ ಶತಮಾನದಲ್ಲಿಯೇ ಬದಲಾವಣೆ ಕಂಡು ಬಂತು. ನಮ್ಮ ವೈದ್ಯ ಸಂಗಣ್ಣ ತನ್ನ ಅನೇಕ ವಚನಗಳಲ್ಲಿ ವಿವಿಧ ನಾಡಿಗಳ ಬಗ್ಗೆ ರೋಗಕ್ಕೆ ಕಾರಣಗಳು ಮತ್ತು ಪರಿಹಾರಗಳನ್ನು ತಿಳಿಸಿದ್ದಾನೆ. ದೇಹವನ್ನು ಸುಸ್ಥಿತಿಯಲ್ಲಿ ಇಡುವುದು ಹೇಗೆ, ವೈದ್ಯಕೀಯ ಚಿಕಿತ್ಸೆಯನ್ನು ಹೇಗೆ ಮಾಡಬೇಕು ಮತ್ತು ವೈದ್ಯ ಪಂಡಿತನೆಂದರೆ ಹೇಗಿರಬೇಕು ಎಂದು ಈ ಕೆಳಗಿನ ವಚನದಲ್ಲಿ ವಿವರವಾಗಿ ತಿಳಿಸಿದ್ದಾರೆ.

"ಪಿಂಡ ಪ್ರಾಣ ಆರೋಗ್ಯಂಗಳ ಚಿಕಿತ್ಸೆಯನರಿದು,

ವೈದ್ಯವ ಮಾಡಬಲ್ಲಡೆ ಪಂಡಿತನಪ್ಪ,

ಘಟತ್ರಯದ ಬೇಧವನರಿದು ಮಾಡುವ ಕ್ರಮವೆಂತುಂಟೆಂದಡೆ:

ಕಟಿ ಮೊದಲಾದ ಕೀಳುದೆಸೆಯಲ್ಲಿ ಸಂಧಿನ ಭೇದ.

ಅಂಗುಲಿಸಂದು ಇಪ್ಪತ್ತು ಮಡಸಂದು ಎರಡು ಪಚ್ಚಳ ಸಂದು ಎರಡು.

ಇಂತೀ ಅಧಮನಾಳದಿಂದ ಕೆಳಗಾದ ನಾಳನಾಡಿಗಳ ಸೋಧಿಸಿಕೊಂಡು,

ಊರ್ಧ್ವದಂಡದಲ್ಲಿ ಉಭಯ ಪಕ್ಷದಲ್ಲಿ ಕೆಲವರಿಂದ ಸಂದು ಅರುವತ್ತಾರು.

ಅಂತು ಕೀಳು ಮೊದಲಾದ ಸಂದು ನರ ಇಪ್ಪತ್ತನಾಲ್ಕು.

ಅದರಿಂದ ಮೊದಲಾದ ಉಭಯಕರದ ಸಂದು,

ಅಂಗುಲಿಯ ಸಂದು ಇಪ್ಪತ್ತೆಂಟು.ಇಂತೀ ಉಭಯಕರದ ಸಂದಾರು.

ಇಂತೀ ಕರದೊಳಗಾದ ಮೂವತ್ತು ನಾಲ್ಕರ ಸಂದಿನ

ನಾಳನಾಡಿಗಳನರಿದು, ಅದರಿಂದ ಮೇಲೆ ಸಂಪುಟವರೆಡು.

ಜಿಹ್ವೆ ಮೊದಲಾದ ಏಳು ದ್ವಾರಂಗಳ ಸೋಧಿಸಿಕೊಂಡು,

ಕಪಾಲದ ತ್ರಿವಿಧದ ಹೊಲಿಗೆಯ ಕಂಡು, ಅಂಗುಷ್ಠ ತೊಟ್ಟು

ವಾಣಾಗ್ರಪರಿಯಂತರದಲ್ಲಿ ಸ್ಥಾನವ ಮುಟ್ಟಿ ನೋಡಿ,

ರವಿಶಶಿ ಪವನ ಪಾವಕ ಮುಟ್ಟಿ ಎಡೆಯಾಡುವ ಲಕ್ಷಣವ ಕಂಡು,

ಅವಕ್ಕೆ ಚಿಕಿತ್ಸೆಯಪ್ಪ ಅನ್ನ ಔಷಧಿ ಪಯಪಾನ ಉದಕ

ಮುಂತಾದ ತೆರನರಿದಡೆ ಆತನೆ ಇರವನರಿದವ.

ಇಂತೀ ಕಾಯಕದ ವೈದ್ಯವ ಮಾಡ ಬಲ್ಲವ,

ಮೇಲನರಿದು ಕೀಳು ಮರೆಯ ಬಲ್ಲಡೆ, ಆತ ವೈದ್ಯ ಪಂಡಿತನೆಂಬೆ,

ಮರುಳ ಶಂಕರ ಪ್ರಿಯ ಸಿದ್ದರಾಮೇಶ್ವರ ಲಿಂಗವ ಬಲ್ಲವ."

– [ಸಂ.ವ.ಸಂ–೪ ವ.ಸಂ.– ೧೨೨]

ಈ ವಚನದ ಅರ್ಥ ಪಿಂಡ ಪ್ರಾಣ ಆರೋಗ್ಯಂಗಳ ಚಿಕಿತ್ಸೆಯನ್ನು ಅರಿತು ವೈದ್ಯವನ್ನು ಮಾಡುವವನು ಪಂಡಿತನಾಗುತ್ತಾನೆ. ಕಟಿ, ಅಂಗುಲಿ, ಪಕ್ಕೆ, ಕರ, ಜಿಹ್ವೆ, ಕಪೋಲ, ಉರ್ದ್ವನಾಳ ಮುಂತಾದ ಶರೀರದ ಸರ್ವ

ಅಂಗಗಳ ವಿವರವನ್ನು ತಿಳಿಸುವುದರೊಂದಿಗೆ ಅವುಗಳಿಗೆ ಯಾವ ರೀತಿಯ ಚಿಕಿತ್ಸೆಯನ್ನು ನೀಡಬೇಕೆಂದು ತಿಳಿಸುತ್ತಾರೆ. ಅನ್ನ, ಔಷಧಿ, ಪಯ, ಪಾನ, ಉದಕ ಮುಂತಾದ ಶರೀರದ ಸರ್ವ ಅಂಗಗಳ ವಿವರವನ್ನು ತಿಳಿಸುವುದರೊಂದಿಗೆ ಅವುಗಳಿಗೆ ಯಾವ ರೀತಿಯ ಚಿಕಿತ್ಸೆಯನ್ನು ನೀಡಬೇಕೆಂದು ತಿಳಿಸುತ್ತಾರೆ. ಅನ್ನ, ಔಷದಿ, ಪಯ, ಪಾನ, ಉದಕ ಮುಂತಾದ ರೀತಿಯ ಚಿಕಿತ್ಸೆಯನ್ನು ನೀಡುವ ವೈದ್ಯ ಕಾಯದ ವೈದ್ಯವ ಮಾಡಬಲ್ಲವ ಮೇಲನರಿದು ಕೀಳು ವಿಚಾರವ ತಿಳಿದವನು ವೈದ್ಯ ಪಂಡಿತನಾಗುತ್ತಾನೆ. ಇಷ್ಟೆಲ್ಲ ಶಾಸ್ತ್ರ ಜ್ಞಾನವಿದ್ದರೂ ಕೇವಲ ವೈದ್ಯಶಾಸ್ತ್ರದಿಂದಲೆ ವ್ಯಾದಿ ಪರಿಹಾರವೆಂದು ಅವನು ನಂಬುವುದಿಲ್ಲ. ಎಷ್ಟೇ ರೋಗಗಳು ದೇಹಕ್ಕೆ ಅಂಟಿದ್ದರೂ ಶಿವನನ್ನು ನೆನಸಿಕೊಳ್ಳಿ, ತ್ರಿಸಂಧಿಯಲ್ಲಿ ಕುಳಿತು ಶಿವನ ಧ್ಯಾನ ಅರ್ಚನೆ ಮಾಡಿ ಎಂದು ಹೇಳುತ್ತಾನೆ. ವೈದ್ಯ ಸಂಗಣ್ಣ ಬಹಿರಂಗ ಚಿಕಿತ್ಸೆಯನ್ನು ಮಾಡುತ್ತಲೇ ಅಂತರಂಗದ ಅರಿವನ್ನು ತಿಳಿಸಿಕೊಡುತ್ತಾನೆ. ವೈದ್ಯಕೀಯ ಕ್ಷೇತ್ರಕ್ಕೆ ಈತ ಕೊಟ್ಟ ಕೊಡುಗೆ ಅಪಾರವಾದದ್ದು. ದೇಹದ ಎಲ್ಲಾ ನಾಡಿಗಳ ಕುರಿತು ಚರ್ಚಿಸಿದ್ದಾನೆ. ಈಗಿನ ವೈದ್ಯರು ನಾಡಿಯ ಮೂಲಕವೇ ರೋಗಿಯ ಸ್ಥಿತಿಯನ್ನು ತಿಳಿಯುತ್ತಾರೆ. ಈ ವಿಷಯವನ್ನು ಸಂಗಣ್ಣ ೧೨ನೇ ಶತಮಾನದಲ್ಲಿಯೇ ತಿಳಿಸಿ ಕೊಟ್ಟಿದ್ದರು.

ವೈದ್ಯ ಸಂಗಣ್ಣನ ವಚನಗಳ ಅಧ್ಯಯನಕ್ಕೆ ತೊಡಗಿದಾಗ ಈತ ಎರಡು ರೀತಿಯ ವೈದ್ಯರನ್ನು ಪರಿಚಯ ಮಾಡಿ ಕೊಡುತ್ತಾನೆ. ಒಬ್ಬ ಸಾಮಾನ್ಯ ವೈದ್ಯ, ಮತ್ತೊಬ್ಬ ಭವ ರೋಗದ ವೈದ್ಯ. ಸಾಮಾನ್ಯ ವೈದ್ಯರು ದೇಹಕ್ಕೆ ಹಿಡಿದ ಕಾಯಿಲೆಯನ್ನು ಮಾತ್ರ ನೋಡಿ ಗಿಡ ಮೂಲಿಕೆಗಳಿಂದ ಔಷಧಿಗಳನ್ನು ಸಿದ್ದಪಡಿಸಿ ಕೊಟ್ಟು ರೋಗವನ್ನು ವಾಸಿ ಮಾಡುವ ಪ್ರಯತ್ನದಲ್ಲಿ ಇರುತ್ತಾರೆ. ಆದರೆ ಭವ ರೋಗದ ವೈದ್ಯ ಭವದಲ್ಲಿ ಸಿಲುಕಿದ ಜೀವಕ್ಕೆ ವೈದ್ಯವನ್ನು ಮಾಡುತ್ತಾನೆ. ಇದರಿಂದ ಸರ್ವಾಂಗವೂ ನಿರೋಗಿಯಾಗುತ್ತದೆ. ಅಂದರೆ ದೇಹಕ್ಕೆ ಹಿಡಿದ ಅಜ್ಞಾನವನ್ನು ತೊಲಗಿಸಿ ಜ್ಞಾನ, ಮಾರ್ಗದೆಡೆಗೆ ನಮ್ಮನ್ನು ಮುಂದುವರೆಸುತ್ತಾನೆ. ಈತನ ಒಂದು ವಚನದಲ್ಲಿ "ಇಂತೀ ಪಂಚಪಥವನ್ನೈದುವ ನಾಡಿಯಲ್ಲಿ ಆಡುವ ಆತ್ಮನ ವಿವರದ ದೆಸೆಯನರಿದು, ಇಂತೀ ಐದು ಮುಚ್ಚಿ ಮೇಗಳ ಬ್ರಹ್ಮ ರಂಧ್ರದಲ್ಲಿಯೆಯ್ದಿದರೆಮ್ಮ ವೈದ್ಯರು. ನಾದ ಬಿಂದು ಕಳೆಗತೀತ ನೋಡಾ" ಎಂದು ಭವರೋಗದ ವೈದ್ಯ  ಮನಸ್ಸು, ದೇಹ, ಆತ್ಮ ಇವುಗಳಿಗೆ ಬಂದ ರೋಗವನ್ನು ವಾಸಿ ಮಾಡುವ ವೈದ್ಯ. ಈತ ಯಾವುದೇ ಗಿಡ ಮೂಲಿಕೆಗಳನ್ನು ನೀಡುವುದಿಲ್ಲ. ಔಷಧಿಗಳನ್ನು ನೀಡುವುದಿಲ್ಲ, ಈತ ಕೇವಲ ವೈದ್ಯನ ಪರಿಚಯ ಮಾಡಿಕೊಡುತ್ತಾನೆ. 'ನಮ್ಮಲ್ಲೇ ಅಡಗಿರುವ ಪಂಚೇಂದ್ರಿಯಗಳಿಗೂ ಪಂಚ ವೈದ್ಯರಿದ್ದಾರೆ. ಅವರೇ ನಿಮ್ಮ ಕಾಯಿಲೆಯನ್ನು ವಾಸಿಮಾಡುತ್ತವೆ ಎಂದು ವೈದ್ಯರ ಪರಿಚಯವನ್ನು ಮಾಡಿಕೊಡುತ್ತಾನೆ'.

ಪಂಚೇಂದ್ರಿಯಗಳು ಕಿವಿ, ಚರ್ಮ, ಕಣ್ಣು, ನಾಲಿಗೆ ಮತ್ತು ಮೂಗು, ಇವುಗಳಲ್ಲಿ ಕಿವಿ ಶಬ್ದ ಜ್ಞಾನವನ್ನುಂಟು ಮಾಡುತ್ತದೆ.ಚರ್ಮ ಸ್ಪರ್ಶವನ್ನು, ಕಣ್ಣು ರೂಪವನ್ನು, ನಾಲಗೆ ರಸವನ್ನು, ಮೂಗು ವಾಸನೆ ಗಂಧವನ್ನು ತಿಳಿಯಪಡಿಸುತ್ತದೆ.ಇವುಗಳಲ್ಲಿ ಪಂಚ ವೈದ್ಯರು ಇದ್ದಾರೆ. ಅವರು ಯಾವುದನ್ನು ನೋಡಬೇಕು, ಯಾವುದನ್ನು ಸ್ಪರ್ಶಿಸಬೇಕು, ಯಾವುದನ್ನು ಕೇಳಬೇಕು, ಯಾವುದನ್ನು ಸವಿಯಬೇಕು, ಯಾವುದನ್ನು ವಾಸನೆ

ನೋಡಬೇಕು ಎಂಬುದರ ಜ್ಞಾನವನ್ನು ತಿಳಿಸುವ ಪಂಚೇಂದ್ರಿಯಗಳಲ್ಲಿ ಎರಡು ರೀತಿಯ ಯೋಚನಾಲಹರಿಗಳು ಇರುತ್ತವೆ. ಒಂದು ಸಕಾರಾತ್ಮಕ ಮತ್ತು ಒಂದು ನಕಾರಾತ್ಮಕ ಇವೆರಡರಲ್ಲಿ ಅರಿವು ಜ್ಞಾನ ಎಂಬುದು ಪ್ರಮುಖ ಪಾತ್ರವಹಿಸುತ್ತದೆ. "ಶಬ್ದ ಆಕಾಶದ ಗುಣ, ಸ್ಪರ್ಶ ವಾಯುವಿನ ಗುಣ, ಶಬ್ದ ಸ್ಪರ್ಶ ರೂಪು ಅಗ್ನಿಯ ಗುಣ, ಶಬ್ದ ಸ್ಪರ್ಶ ರೂಪು ರಸ ಅಪ್ಪುವಿನ ಗುಣ, ಶಬ್ದ ಸ್ಪರ್ಶ ರೂಪು ರಸ ಗಂಧ ಸಹಿತ ಇವು ಐದು ಪೃಥ್ವಿಯ ಗುಣ ಇಂತೀ ಪಂಚಗುಣವನು ಒಂದೇ ಗುಣವ ಮಾಡಬಲ್ಲಡೆ ಕೂಡಲ ಚೆನ್ನಸಂಗಯ್ಯನಲ್ಲಿ ಶರಣನೆನಿಸುವನು."[7] ಎಂದು ಚೆನ್ನ ಬಸವಣ್ಣನವರು ತಮ್ಮ ವಚನದಲ್ಲಿ ಪಂಚಭೂತಗಳ ಬಗ್ಗೆ ತಿಳಿಸಿದ್ದಾರೆ. ಈ ಪಂಚಭೂತಗಳನ್ನು ತಮ್ಮ ಹಿಡಿತದಲ್ಲಿ ಇಟ್ಟಿಕೊಂಡು ಎಲ್ಲವೂ ಒಂದೇ ಗುಣವೆಂದು ಭಾವಿಸಿದವ ಶರಣನಾಗುತ್ತಾನೆ ಎಂದು ಹೇಳಿದ್ದಾರೆ. ಪಂಚಭೂತಗಳು ನಮ್ಮ ದೇಹದಲ್ಲಿವೇ ಅವುಗಳ ಹಿಡಿತ ನಮ್ಮ ಕೈಯಲ್ಲಿ ಅಂದರೆ ಜ್ಞಾನ ಕೈಯಲ್ಲಿ ಇದ್ದರೆ ನಾವು ಉತ್ತಮ ವ್ಯಕ್ತಿಗಳಾಗುತ್ತೆವೆ. ಮಾನವನ ಸರ್ವತೋಮುಖ ವಿಕಾಸವಾಗುತ್ತದೆ. ಒಂದು ಸಮಾಜದಲ್ಲಿ ವ್ಯಕ್ತಿಯ ನಡೆ ನುಡಿ ಹೇಗಿರಬೇಕು. ಯಾವ ರೀತಿಯ ಮೌಲ್ಯಗಳನ್ನು ಬೆಳೆಸಿಕೊಳ್ಳಬೇಕು. ಅಂತರಂಗದ ಪರಿಶುದ್ಧತೆಯನ್ನು ವಚನಕಾರರು ಪದೇ ಪದೇ ಹೇಳುತ್ತಾರೆ. ಅಂತರಂಗ ಶುದ್ಧಿಯಾಗಬೇಕಾದರೆ ಪಂಚೇಂದ್ರಿಯಗಳಿಗೆ ನಾವು ಕಡಿವಾಣ ಹಾಕಬೇಕು. ಪಂಚ ಇಂದ್ರೀಯಗಳಾದ ಕಣ್ಣು, ಕಿವಿ, ಮೂಗು, ನಾಲಗೆ, ಚರ್ಮ ಇವುಗಳ ಆಸೆಯನ್ನು ಬಿಡಬೇಕು ಆದ್ದರಿಂದ ವೈದ್ಯ ಸಂಗಣ್ಣ ಮೊದಲ ವಚನದಲ್ಲಿಯೇ ಪಂಚೇಂದ್ರಿಯಗಳ ಪರಿಚಯವನ್ನು ಮಾಡಿಕೊಡುತ್ತಾನೆ. ಅವು ನಮ್ಮ ದೇಹದಲ್ಲಿ ಎಲ್ಲೆಲ್ಲಿ ಇವೆ ಎಂಬುದನ್ನು ತಿಳಿಸಿದ್ದಾನೆ.

"ಅಂಗಾಲ ಮೇಲಣ ದೊಡ್ಡಂಗುಷ್ಟ, ಮಧ್ಯದಲ್ಲಿ ಪೃಥ್ವಿನಾಡಿ,

ನಾಭಿ ಮೂತ್ರನಾಳದ ನಾಲ್ಕಂಗುಲ ಮಧ್ಯದಲ್ಲಿ ಅಪ್ಪುನಾಡಿ,

ಉಡಸೂತ್ರ ನಾಭಿ ಮೊದಲಾದ

ಪಂಚಾಂಗುಲ ಮಧ್ಯದ ಮೇಲ್ದೆಸೆಯಲ್ಲಿ [ತೇಜನಾಡಿ],

ಇಡಾ ಪಿಂಗಳ ಮಧ್ಯದಲ್ಲಿ ವಾಯುನಾಡಿ,

ಸುಷುಮ್ನನಾಳದ ಅಂಗುಲ ನಡು ಮಧ್ಯದಲ್ಲಿ ಆಕಾಶಕೈದಿದನಾಡಿ,

ಇಂತೀ ಪಂಚಪಥವನೈದುವ ನಾಡಿಯಲ್ಲಿ ಆಡುವ

ಆತ್ಮನ ವಿವರದ ದೆಸೆಯನರಿದು,

ಇಂತೀ ಐದು ಮುಚ್ಚಿ ಮೇಗಳ ಬ್ರಹ್ಮ ರಂಧ್ರದಲ್ಲಿಯೆಯ್ದಿದರೆಮ್ಮ ವೈದ್ಯರು.

ನಾದ ಬಿಂದು ಕಳೆಗತೀತ ನೋಡಾ,

ಮರುಳ ಶಂಕರ ಪ್ರಿಯ ಸಿದ್ದರಾಮೇಶ್ವರ ಲಿಂಗವು."

– [ಸಂ.ವ.ಸಂ.– ೪ – ವ.ಸಂ.–೧೦೨]

ನಮ್ಮ ದೇಹದಲ್ಲಿರುವ ಪಂಚಭೂತಗಳು ಎಲ್ಲೆಲ್ಲಿ ಇವೆ ಎಂಬುದನ್ನು ಹೇಳುತ್ತಾರೆ. ಈ ಭೂಮಿಗೆ ಸಂಬಂಧಿಸಿದ್ದು ಪೃಥ್ವಿನಾಡಿ ಅದು ಅಂಗಾಲ ಮೇಲೆ ದೊಡ್ಡ ಅಂಗುಷ್ಟ ಮದ್ಯದಲ್ಲಿ ಇದೆ ಎಂದು ಹೇಳಿದ್ದಾರೆ. ಹೊಕ್ಕಳು ಮತ್ತು ಮೂತ್ರನಾಳದ ನಾಲ್ಕು ಅಂಗುಲ ಮಧ್ಯದಲ್ಲಿರುವ ಅಪ್ಪುನಾಡಿ ಇದು ಜಲಕ್ಕೆ ಸಂಬಂಧಿಸಿದ್ದು, ಇಲ್ಲಿ ಒಳ್ಳೆಯ ಮತ್ತು ಕೆಟ್ಟ ನೀರು ಎರಡೂ ಇರುತ್ತವೆ. ಉಡ ಸೂತ್ರ ಎಂದರೆ ಎದೆ ಭಾಗದಿಂದ ನಾಭಿಯ ಪಂಚಾಂಗುಲ ಮಧ್ಯದ ಮೇಲ್ದೆಸೆಯಲ್ಲಿ ತೇಜನಾಡಿ ಅಂದರೆ ಅಗ್ನಿ, ನಂತರ ಶ್ವಾಸಕೋಶದ ಎಡ ಮತ್ತು ಬಲ (ಇಡಾ ಪಿಂಗಳ) ಮಧ್ಯದಲ್ಲಿ ವಾಯುನಾಡಿ ನಂತರ ಕೊನೆಯದಾಗಿ ಈ ಮೇಲಿನ ಎಲ್ಲಾ ನಾಡಿಗಳಲ್ಲೂ ಹರಿಯುವ ಆತ್ಮವನ್ನು ಸುಷುಮ್ನ ನಾಳದ  ಅಂಗುಲ ನಡು ಮಧ್ಯದಲ್ಲಿ ಆಕಾಶಕ್ಕೆ ಎತ್ತಿ ಹಿಡಿದರು. ಇದು ಪಂಚ ಇಂದ್ರಿಯಗಳ ಪಥ(ದಾರಿ)ಯಲ್ಲಿ ಆಡುವ ಆತ್ಮನ ವಿವರದ ದೆಸೆಯಿಂದ ಈ ಪಂಚೇಂದ್ರಿಯಗಳನ್ನು ಒಂದೆಡೆ ಸೇರಿಸಿ ಎಲ್ಲವೂ ಬ್ರಹ್ಮರಂಧ್ರದಲ್ಲಿ ಇರಿಸಿದರು. ಆಗ ಅವುಗಳ ಹಿರಿಮೆ ಹೆಚ್ಚುತ್ತದೆ ವ್ಯಕ್ತಿ ಪರಿಶುದ್ಧತೆಯನ್ನು ಪಡೆದುಕೊಳ್ಳುತ್ತಾನೆ.

ವೈದ್ಯ ಸಂಗಣ್ಣ ಪಂಚ ಇಂದ್ರಿಯಗಳ ದಾರಿಯನ್ನು ತಿಳಿದವನು ನಮ್ಮಲ್ಲೇ ಇರುವಂತಹ ವೈದ್ಯ ಅವುಗಳನ್ನು ಸರಿದಾರಿಗೆ ತರಬೇಕು ಇಲ್ಲವಾದಲ್ಲಿ ರೋಗ ವಾಸಿಯಾಗುವುದಿಲ್ಲ ಎಂದು ಹೇಳುತ್ತಾರೆ. ವೈದ್ಯ ಸಂಗಣ್ಣ ತನ್ನ ಚಿಕಿತ್ಸೆಯಲ್ಲಿ ಎಲ್ಲೂ ಒಂದು ಮೂಲಿಕೆಯಾಗಲಿ, ಔಷಧಿಯಾಗಲಿ ನೀಡಿಲ್ಲ. ಈತ ಒಬ್ಬ ಭವರೋಗದ ವೈದ್ಯ, ಹುಟ್ಟು ಮತ್ತು ಸಾವಿನ ನಡುವೆ ಆಡುವ ಪಂಚೇಂದ್ರಿಯಗಳ ರಾಸಾಯನಿಕ ಕ್ರಿಯೆಗೆ ಮದ್ದನ್ನು ನೀಡುವ ವೈದ್ಯ ಈತ ಭವರೋಗದ ವೈದ್ಯ.ಆತ ಒಬ್ಬ ವೈದ್ಯನಾಗಿ ಎಲ್ಲಾ ಪಂಚ ಇಂದ್ರಿಯಗಳು ಎಲ್ಲಿ ಇವೆ, ಅವುಗಳ ಕಾರ್ಯ ಎಲ್ಲವನ್ನೂ ತಿಳಿಸುತ್ತಾ ಕೊನೆಗೆ ಆತ್ಮನ ದೆಸೆಯನ್ನು ಅರಿತು ವೈದ್ಯ ಮಾಡಬೇಕು.ನಮ್ಮಲ್ಲಿರುವ ಅರಿವೇ ಗುರು.ಅರಿವೇ ಶಿವ ಎಂದು ಸಂಗಣ್ಣ ತಿಳಿಸಿದ್ದಾನೆ. ನಮ್ಮಲ್ಲಿರುವ ಅರಿವಿಗೆ ನಾವು ಕೊಡಬೇಕು.  ಆಗ ನಮ್ಮ ಜ್ಞಾನದ ಅರಿವು ಕ್ರಿಯಾಶೀಲವಾಗಿರುತ್ತದೆ. ಆಗ ಪಂಚೇಂದ್ರಿಯಗಳಿಂದಾದ ರೋಗವನ್ನು ತಡೆಯುವ ಶಕ್ತಿ ನಮ್ಮ ಅರಿವಿಗೆ ಬರುತ್ತದೆ.ಈ ರೋಗಕ್ಕೆ ಸಾಮಾನ್ಯ ವೈದ್ಯ ಔಷಧವನ್ನು ನೀಡಲು ಸಾಧ್ಯವಿಲ್ಲ. ನಮ್ಮಲ್ಲಿರುವ ವೈದ್ಯರೇ ನಮ್ಮ ಆರೋಗ್ಯವನ್ನು ಕಾಪಾಡಬೇಕು. ಇದೇ ರೀತಿ ವೈದ್ಯ ಸಂಗಣ್ಣನ ಒಂದು ವಚನದಲ್ಲಿ ಇದೇ ವಿಚಾರಗಳನ್ನು ಹೇಳುತ್ತಾನೆ. ನಮ್ಮ ದೇಹ ಪಂಚೇಂದ್ರಿಯಗಳಿಂದ ಆಗಿದೆ. ಪಂಚೇಂದ್ರಿಯಗಳು ಪಂಚ ತತ್ವಗಳನ್ನು ಒಳಗೊಂಡಿದೆ. ಅವುಗಳಿಂದಾದ ದೇಹಕ್ಕೆ ರುಜೆಯೆನ್ನುವುದು

ಸರ್ವೇಸಾಮಾನ್ಯ ಅದಕ್ಕೆ ಚಿಕಿತ್ಸೆಯನ್ನು ಹೇಗೆ ಮಾಡಬೇಕು ಎಂಬುದರ ಬಗ್ಗೆ ವೈದ್ಯ ಸಂಗಣ್ಣ ಈ ಕೆಳಗಿನ ವಚನದಲ್ಲಿ ತಿಳಿಸಿದ್ದಾರೆ.

"ಐದು ತತ್ವಂಗಳಿಂದಾದ ದೇಹಕ್ಕೆ ರೋಗರುಜೆಯಹುದೇ?

ಕಾಯ ತತ್ವಂಗಳ ಗೊತ್ತಿನಲ್ಲಿ ನಿಂದು,

ಅವರವರ ಚಿಕಿತ್ಸೆಯಲ್ಲಿ ಹೊತ್ತು ನಿತ್ತರಿಸುವುದೇ ಕ್ರಮ.

ಅದೆಂತಂದಡೆ:

ಭಕ್ತಿ ನಿಷ್ಠೆ, ವಿಶ್ವಾಸ ನಿಷ್ಠೆ, ಜ್ಞಾನ ನಿಷ್ಠೆ.

ಇಂತಿ ಸದ್ಭಾವ ನೆಲೆಗೊಳ್ಳದ ಕಾರಣ,

ತನುವಿಂಗೆ ಅನುಪಾನವ ಪಾನವ ಮಾಡಬೇಕು.

ಮೇಲೆ ಅರಿದಡೆ, ಮನವು ಮನದಲ್ಲಿ ನಿಲಬೇಕು,

ಮರುಳ ಶಂಕರ ಪ್ರಿಯ ಸಿದ್ಧರಾಮೇಶ್ವರ ಲಿಂಗವ ನೋಡಗೂಡಬೇಕು."

– [ಸಂ.ವ.ಸಂ.– ೪ – ವ.ಸಂ.–೧೧೪]

ವೈದ್ಯ ಸಂಗಣ್ಣ ತಿಳಿಸುವಂತೆ ದೇಹವು ಐದು ತತ್ವಂಗಳಿಂದ ಆಗಿದೆ. ಭೂಮಿ, ಜಲ, ಅಗ್ನಿ, ವಾಯು, ಆಕಾಶ ಈ ಐದು ತತ್ವಗಳು ನಮ್ಮ ದೇಹವನ್ನು ಆವರಿಸಿಕೊಂಡಿವೆ. ಇವುಗಳ ರಾಸಾಯನಿಕ ಕ್ರಿಯೆಯಿಂದ ದೇಹಕ್ಕೆ ರೋಗ ಬರುತ್ತದೆ. ಅವುಗಳ ರೋಗ ವಾಸಿಮಾಡಲು "ಕಾಯ ತತ್ವಂಗಳ ಗೊತ್ತಿನಲ್ಲಿ ನಿಂದು" ಚಿಕಿತ್ಸೆಯನ್ನು ಮಾಡಬೇಕು. ಅಂದರೆ ದೇಹದ ಪಂಚ ಇಂದ್ರಿಯಗಳ ಸ್ವಭಾವ (ಕಾಯ ತತ್ವಂಗಳು)ವನ್ನು ಅರಿತು ಚಿಕಿತ್ಸೆಯನ್ನು ಮಾಡಬೇಕು ಅದು ಹೇಗೆಂದರೆ ಭಕ್ತಿ ನಿಷ್ಠೆಯಿಂದ, ವಿಶ್ವಾಸ ನಿಷ್ಠೆ ಮತ್ತು ಜ್ಞಾನನಿಷ್ಠೆಯಿಂದ ನಾವು ಚಿಕಿತ್ಸೆ ಮಾಡಿದಾಗ ನಮ್ಮ ದೇಹಕ್ಕೆ ಹಿಡಿದ ರುಜೆ ಹೋಗುತ್ತದೆ. ಯಾವುದೇ ವಿಷಯವನ್ನಾಗಲಿ ನಾವು ಭಕ್ತಿಯಿಂದ ಸ್ವೀಕರಿಸಬೇಕು. ವಿಶ್ವಾಸ ನಿಷ್ಠೆಯಿಂದ ಇದ್ದರೆ ಪಂಚೇಂದ್ರಿಯಗಳ ರಾಸಾಯನಿಕ ಕ್ರಿಯೆಗೆ ನಾವೇ ವೈದ್ಯ ಮಾಡಬಹುದೆಂದು ಸಂಗಣ್ಣ ಹೇಳುತ್ತಾರೆ. ಜ್ಞಾನ ನಿಷ್ಠೆಯಿಂದಲೂ ನಾವೂ ವೈದ್ಯವನ್ನು ಅನುಸರಿಸಬೇಕು ಆಗ ತನುವಿಗೆ ಅನುಪಾನವ ಮಾಡಬೇಕು. ಆಗ ಜ್ಞಾನವು ಅರಿದಡೆ ನಮ್ಮ ಮನ ಮನದಲ್ಲಿಯೇ ನಿಲಬೇಕು. ಐದು ತತ್ವಂಗಳಿಂದಾದ ದೇಹಕ್ಕೆ ಭಕ್ತಿ, ವಿಶ್ವಾಸ, ಜ್ಞಾನ ನಿಷ್ಠೆಯ ಸದ್ಭಾವದಲ್ಲಿ ನಿಲ್ಲಿಸಿ ದೇಹಕ್ಕೆ ಚಿಕಿತ್ಸೆಯನ್ನು ನೀಡಬೇಕು.ಆಗ ಜ್ಞಾನ ಮಾರ್ಗದಲ್ಲಿ ದೇಹ ಅರಿದಡೆ ದೇಹದ ರುಜೆಯನ್ನು ತಡೆಯಬಹುದು. ಆಗ ನಮ್ಮ

ಅಂಗದಲ್ಲಿ ಇರುವ ಲಿಂಗದ ಜೊತೆ ಒಡಗೂಡಬೇಕು. "ಶರಣರ ದೃಷ್ಟಿಯಲ್ಲಿ ಕಾಯವೇ ಇಷ್ಟಲಿಂಗ, ಅರಿವೆಂಬ ಮಹಾನುಭಾವನು ಪ್ರಾಣಲಿಂಗವೆಂಬ ಕಾಯದೊಂದಿಗೆ ತಾಯಿಯ ಗರ್ಭದಿಂದ ಹೊರ ಬರುತ್ತಾನೆ"[3] ವಚನಕಾರರು ತಮ್ಮ ದೇಹವೇ ಇಷ್ಟಲಿಂಗ ನಮ್ಮಲ್ಲಿರುವ ಜ್ಞಾನ ನಮ್ಮ ಪ್ರಾಣಲಿಂಗವೆಂಬ ದೇಹದಿಂದ ಹೊರಬರುತ್ತದೆ. ನಾವು ಮೊದಲು ನಮ್ಮಲ್ಲೇ ನೆಲೆಸಿರುವ ಲಿಂಗವನ್ನು ಅರಿಯಬೇಕು. ನಮ್ಮಲ್ಲಿರುವ ಲಿಂಗವನ್ನು ನಾವೇ ಅರಿಯಲು ಅಸಾಧ್ಯವಾದಾಗ ಈ ಕಾಯಕ್ಕೆ ರೋಗ ಎನ್ನುವುದು ಬರುತ್ತದೆ. ಆ ರೋಗದ ಹೊರೆಯನ್ನು ಕಳೆದು ಕೊಳ್ಳಲು ತನುವಿಗೆ ಪಾನವ (ಔಷಧ) ಮಾಡಿ ಲಿಂಗದಲಿ ಲೀನವಾಗಬೇಕು ಎಂದರೆ ನಮ್ಮಲ್ಲೇ ಇರುವ ಲಿಂಗದಲ್ಲಿ ನಾವು ಸೇರಿಕೊಳ್ಳಬೇಕೆಂದು ಹೇಳುತ್ತಾರೆ.

ವೈದ್ಯ ಸಂಗಣ್ಣ ತನ್ನ ವಚನಗಳಲ್ಲಿ ಶರೀರ ಶಾಸ್ತ್ರದ ಆಯಾಮಗಳನ್ನು ತಿಳಿಸುತ್ತಾನೆ. ದೇಹ ಹುಟ್ಟುವ ಮುನ್ನ ಸುಖದುಃಖಗಳ ಪರಿಚಯ ಇರುವುದಿಲ್ಲ. ಸತ್ತ ಮೇಲೂ ಸುಖ ದುಃಖಗಳ ಪರಿಚಯ ತನುವಿಗೆ ಇರುವುದಿಲ್ಲ. ಹುಟ್ಟಿ ಸಾಯುವ ಮಧ್ಯದಲ್ಲಿ ಜೀವನ ಸಂಸಾರವೆಂಬ ಜಂಜಾಟ, ತನು ಅಥವಾ ದೇಹ ತನ್ನಂತೆ ಇರುವ ಮತ್ತೊಂದು ತನುವಿನ ಪಂಚೇಂದ್ರಿಯಗಳು ಒಂದೇ ಎರಡರಲ್ಲಿನ ಅರಿವು ಒಂದೇ, ಲಿಂಗವೂ ಒಂದೇ ಅದೇ ಅರಿವಿನ ಜ್ಞಾನ ಅದನ್ನು ತಿಳಿಯಬೇಕೆಂದು ಸಂಗಣ್ಣ ತಿಳಿಸಿದ್ದಾರೆ. ನಮ್ಮ ತನುವಿನ ಪಂಚೇಂದ್ರಿಯಗಳ ರಾಸಾಯನಿಕ ಕ್ರಿಯೆಗೆ ಮೂಲ ಕಾರಣ ಜಿಹ್ವೇಂದ್ರಿಯ ಮತ್ತು ಗುಹ್ಯೇಂದ್ರಿಯಗಳು ಇವುಗಳನ್ನು ಹಿಡಿತದಲ್ಲಿ ಇಟ್ಟಿ ಕೊಂಡಾಗ ನಮ್ಮ ಅರಿವಿನ ಮಾರ್ಗ ಉತ್ತಮ ರೀತಿಯಲ್ಲಿ ಹೋಗುತ್ತದೆ. ಜಿಹ್ವೇಂದ್ರಿಯ ಮತ್ತು ಗುಹ್ಯೇಂದ್ರಿಯಗಳು ಇವುಗಳನ್ನು ಹಿಡಿತದಲ್ಲಿ ಇಟ್ಟಿ ಕೊಂಡಾಗ ನಮ್ಮ ಅರಿವಿನ ಮಾರ್ಗ ಉತ್ತಮ ರೀತಿಯಲ್ಲಿ ಹೋಗುತ್ತದೆ. ಗುಹ್ಯೇಂದ್ರಿಯ ಮತ್ತು ಜಿಹ್ವೇಂದ್ರಿಯಗಳ ಕಡೆ ಗಮನ ಹರಿಸಬಾರದೆಂದು ಹೇಳುತ್ತಾರೆ. ಅವುಗಳನ್ನು ನಮ್ಮಲ್ಲಿರುವ ಪಂಚ ವೈದ್ಯರಿಂದ ಚಿಕಿತ್ಸೆಯನ್ನು ನೀಡಬೇಕೆಂದು ಒಂದು ವಚನದಲ್ಲಿ ತಿಳಿಸಿದ್ದಾರೆ.

"ಜಿಹ್ವೇಂದ್ರಿಯವೆಂಬ ರೋಗ ಬಾಯಲ್ಲಿ ಹುಟ್ಟಿ,

ಗುಹ್ಯೇಂದ್ರಿಯವೆಂಬ ರೋಗ ಚಿತ್ತದಲ್ಲಿ ತತ್ತರಿಸುತ್ತಿದೆ ನೋಡಾ.

ಆಸೆಯೆಂಬ ರೋಗ ಸರ್ವಾಂಗದಲ್ಲಿ ಹೊಕ್ಕು,

ಸರ್ವರಿಗೆಲ್ಲಕ್ಕೂ ಪಾಷಂಡಿ ವೇಷಧಾರಿಗಳೆನಿಸುತ್ತಿದೆ ನೋಡಾ.

ಈ ರೋಗ ನಿರೋಗವಹುದಕ್ಕೊಂದು ಮದ್ದುಂಟು.

ಅದು ಬೇರು ಮೂರು, ಶಾಖೆ ಐದು, ಎಲೆ ಆರು, ಕೊನೆ ಇಪ್ಪತ್ತೈದು.

ಇಂತೀ ಗಿಡುವ ಸಹ ಮೂಲ ಸಹಿತ ತಂದು, ಕಂಗಳ ಕಲ್ಲಿನಲ್ಲಿ ಇಂಗಿಸಿ,

ಆನಂದಾಶ್ರುವೆಂಬ ಜಲವನೆರೆದು,

ಚಿತ್ತಶುದ್ಧವೆಂಬ ಗುಂಡಿನಲ್ಲಿ ಲಕ್ಷಿಸಿ ಅರೆಯಲಾಗಿ, ಮದ್ದು ನೀರೋಳಡಗಿತ್ತು.

ಕಲ್ಲು ಗುಂಡಿನಲ್ಲಿಗೆ ಸಾಧ್ಯವಲ್ಲದೆ ಹೋಯಿತ್ತು,

ಮರುಳ ಶಂಕರ ಪ್ರಿಯ ಸಿದ್ದರಾಮೇಶ್ವರ ಲಿಂಗದಲ್ಲಿಗೆ".

– [ಸಂ.ವ.ಸಂ. – ೪ – ವ.ಸಂ.–೧೧೮]

ಜಿಹ್ವೆಂದ್ರಿಯ ಮತ್ತು ಗುಹ್ವೇಂದ್ರಿಯಗಳನ್ನೂ ನಾವು ಹಿಡಿತದಲ್ಲಿ ಇಟ್ಟಿಕೊಳ್ಳಬೇಕು ಅವುಗಳನ್ನು ನಾವು ಗೆಲ್ಲಬೇಕು. ಅವು ಒಡ್ಡುವ ಆಸೆ ಆಮಿಷಗಳಿಗೆ ಒಳಗಾದರೆ ಜೀವನವೇ ಪತನಾಭಿಮುಖ –ವಾಗುತ್ತದೆ.ಈ ಕುರಿತು ಸ್ವಾಮಿ ಶಿವಾನಂದರು ಈ ರೀತಿ ಹೇಳಿದ್ದಾರೆ. "If you control the tongue you can control the sex" "ನೀವು ನಾಲಿಗೆಯನ್ನು ಜಯಿಸಿದರೆ ಕಾಮವನ್ನು ನಿಯಂತ್ರಿಸಬಹುದು"[3] ಎಂದು ವೈದ್ಯ ಸಂಗಣ್ಣ ಇದೇ ವಿಚಾರವನ್ನು ಇನ್ನೂ ಆಳಕ್ಕೆ ಇಳಿದು ಹೇಳುತ್ತಾರೆ.

"ಜಿಹ್ವೇಂದ್ರಿಯವೆಂಬ ರೋಗ ಬಾಯಲ್ಲಿ ಹುಟ್ಟಿ ಗುಹ್ಯೇಂದ್ರಿಯವೆಂಬ ರೋಗ ಚಿತ್ತದಲ್ಲಿ ತತ್ತರಿಸುತ್ತಿದೆ ನೋಡಾ" ಈ ಸಾಲಿನ ಅರ್ಥ ನಾಲಿಗೆಯ ಆಸೆ ಮತ್ತು ಗುಹ್ಯೇಂದ್ರಿಯದ ಕಾಮ ಇವೆರಡು ನಮ್ಮ ಮನಸ್ಸಿನಲ್ಲಿ ತತ್ತರಿಸುತ್ತಿದೆ. ಶೇಕಡಾ ೯೫ರಷ್ಟು ಜನರು ಇವೆರಡರಿಂದಲೇ ರೋಗಕ್ಕೆ ಒಳಗಾಗಿದ್ದಾರೆ. ಈ ವಿಷಯವನ್ನು ನೇರವಾಗಿ ತಿಳಿಸುವ ಧೈರ್ಯ ನಮ್ಮ ಈಗಿನ ವೈದ್ಯರಿಗೆ ಇಲ್ಲ. ಈ ವಿಷಯವನ್ನು ಸಂಗಣ್ಣ ೧೨ನೇ ಶತಮಾನದಲ್ಲಿ ತಿಳಿಸಿದ್ದರು. ಸಂಗಣ್ಣ ಈ ವಿಷಯವನ್ನು ಕುರಿತು ಸ್ಪಷ್ಟವಾಗಿ ತಿಳಿಸಿದ್ದಾರೆ. ರೋಗದ ಮೂಲ ನಾಲಿಗೆ ಎಂದು ಹೇಳುವುದಿಲ್ಲ ನಾಲಗೆ ಎನ್ನುವುದೇ ಒಂದು ದೊಡ್ಡ ಕಾಯಿಲೆ. ಅನೇಕ ಜನರಿಗೆ ತಮ್ಮ ನಾಲಿಗೆಯನ್ನು ನಿಯಂತ್ರಿಸುವುದು ತುಂಬಾ ಕಷ್ಟ. ಉದಾಹರಣೆಗೆ ಈಗಿನ ಸಂಧರ್ಭದಲ್ಲಿ ಎಷ್ಟೋ ಜನರಿಗೆ ಬಾಯಿ ಕ್ಯಾನ್ಸರ್ ಆಗುವುದನ್ನು ನೋಡಿದ್ದೇವೆ ಯಾವುದನ್ನು ತಿನ್ನಬಾರದೆಂದು ನಿಷೇಧ ಇರುತ್ತದೆಯೋ ಅದನ್ನೇ ಅಗಿದು ಕಾಯಿಲೆ ತಂದುಕೊಂಡಿರುತ್ತಾರೆ. ಹೊಗೆಸೊಪ್ಪು, ಪಾನ್ ಪರಾಕ್, ಬೀಡಾ ಹೀಗೆ ಅನೇಕ ವಿಷಯುಕ್ತ ಪದಾರ್ಥಗಳ ಸೇವನೆಯಿಂದ ಕಾಯಿಲೆ ಮತ್ತಷ್ಟು ಹೆಚ್ಚು ಮಾಡಿಕೊಳ್ಳುತ್ತಾರೆ. ಸಮಾಜದಲ್ಲಿ ಇರುವ ದೊಡ್ಡ ದೊಡ್ಡ ಸಮಾಜ ಸುಧಾರಕರು, ಪ್ರಸಿದ್ಧ ವ್ಯಕ್ತಿಗಳು, ಗುರುಗಳು, ಬೋಧಕರು, ವೈದ್ಯರು ಈ ತಿನ್ನುವ ಚಟದಿಂದ ಹೊರ ಬರಲಾಗದೆ ಕೊನೆಗೆ ರೋಗದಿಂದಲೇ ಸಾಯುವುದನ್ನು ನೋಡಿದ್ದೇವೆ. ಇವರಿಗೆ ತಮ್ಮ ಶರೀರಕ್ಕೆ ಯಾವ ಪದಾರ್ಥ ಆಗುವುದಿಲ್ಲವೆಂಬುದು ಚೆನ್ನಾಗಿ ಗೊತ್ತಿರುತ್ತದೆ. ಆದರೆ ಊಟಕ್ಕೆ ಕುಳಿತಾಗ ಏನೇ ಮಾಡಿದರೂ ಆ ಪದಾರ್ಥವನ್ನು ಬಿಡಲು ಸಾಧ್ಯವಾಗುವುದಿಲ್ಲ.

ಮತ್ತೊಂದು ಉದಾಹರಣೆ ನೋಡುವುದಾದರೆ ಮಧುಮೇಹಿ ರೋಗಿಗಳನ್ನು ಗಮನಿಸಿದ್ದೇವೆ. ಅವರು ಇನ್ಸುಲಿನ್ ಚುಚ್ಚುಮದ್ದನ್ನು ತೆಗೆದುಕೊಂಡರೂ ಸಿಹಿ ತಿಂಡಿಗಳನ್ನು ಪ್ರೀತಿಯಿಂದ ತಿನ್ನುತ್ತಲೇ ಇರುತ್ತಾರೆ. ಒಂದು ವೇಳೆ ತಮ್ಮ ಆಪ್ತರು, ಬಂಧುಗಳು ಅವರ ಆರೋಗ್ಯದ ದೃಷ್ಟಿಯಿಂದ ಸಿಹಿ ತಿಂಡಿಗಳನ್ನು ಕೊಡಲು ನಿರಾಕರಿಸಿದರೆ ಅವರ ಮೇಲೆ ಜಗಳವಾಡುವ ಸಂಧರ್ಭಗಳನ್ನು ಕಾಣುತ್ತೇವೆ. ಇದಕ್ಕೆ ಕಾರಣ ಅವರು ತಮ್ಮ ಜಿಹ್ವೇಂದ್ರಿಯವನ್ನು ಅವರ ಹಿಡಿತದಲ್ಲಿ ಇಟ್ಟಿಕೊಂಡಿಲ್ಲ. ಇದರಿಂದ ಕೊನೆಗೆ ಅವರ ದೇಹಕ್ಕೆ ಆಪತ್ತು ಒದಗುತ್ತದೆ.

ಆಧುನಿಕ ಕಾಲದಲ್ಲಿ ಜನರಿಗೆ ನಾಲಿಗೆಯನ್ನು ನಿಯಂತ್ರಿಸುವುದು ತುಂಬಾ ಕಷ್ಟ. ಭಾರತದಲ್ಲಿ ಮಧು ಮೇಹಿಗಳ ಸಂಖ್ಯೆ ದಿನೇ ದಿನೇ ತೀವ್ರವಾಗಿ ಹೆಚ್ಚುತ್ತಿದೆ. ಇದಕ್ಕೆ ಕಾರಣ ಹಿಂದಿನ ಕಾಲಕ್ಕಿಂತಲೂ ಹೆಚ್ಚು ರುಚಿ ಕಟ್ಟಾಗಿ ತಿನ್ನುವುದನ್ನು ರೂಢಿಸಿಕೊಂಡಿದ್ದಾರೆ. ರುಚಿ ರುಚಿಯಾಗಿ ತಿಂದರೆ ಸಹಜವಾಗಿಯೇ ಹೆಚ್ಚು ಊಟ ಹೊಟ್ಟೆ ಸೇರುತ್ತದೆ. ಜೊತೆಗೆ ಶ್ರಮರಹಿತ, ವ್ಯಾಯಾಮರಹಿತ ಜೀವನ, ಸಕ್ಕರೆ ರೋಗ ಸುಲಭವಾಗಿ ಬರುವಂತೆ ಮಾಡುತ್ತದೆ. ಇದೊಂದು ರೋಗವಲ್ಲ ನಾಲಿಗೆ ಚಟದಿಂದ ಪಾರಾಗಿ ಶರಣರು ಹೇಳುವಂತೆ ನಾಲಿಗೆಯನ್ನು ಗುರುಲಿಂಗವಾಗಿ ಮಾಡಿಕೊಳ್ಳಬಹುದು. ಈ ವಿಷಯಗಳಲ್ಲಿ ಶರಣರು ಮತ್ತು ಸರ್ವಜ್ಞ ಕವಿ ನಮಗೆ ಉತ್ತಮ ನಿದರ್ಶನ. ಅವರೇ ನಮಗೆ ಉತ್ತಮ ಮಾರ್ಗದರ್ಶನವನ್ನು ನೀಡಿದ್ದಾರೆ. ನಾಲಿಗೆಗೆ ನೇರವಾಗಿ ಸಂಬಂಧಿಸಿದ್ದು ಗುಹ್ಯೇಂದ್ರಿಯ ಅಂದರೆ ಜನನೇಂದ್ರಿಯದ ಆಸೆ ಮನದಲ್ಲಿ ಹುಟ್ಟಿ ಅದು ತನಗೆ ಬೇಕೆಂದು ಪರಿತಪಿಸುತ್ತಿದೆ. ಆದ್ದರಿಂದ "ಆಸೆಯೆಂಬ ರೋಗ ಸರ್ವಾಂಗದಲ್ಲಿ ಹೊಕ್ಕು ಸರ್ವರಿಗೆಲ್ಲಕ್ಕೂ ಪಾಷಂಡಿ ವೇಷಧಾರಿಗಳೆನಿಸುತ್ತಿದೆ ನೋಡಾ" ಈ ಕಾಮ ಎನ್ನುವ ಆಸೆ ಸರ್ವಾಂಗದಲ್ಲಿ ಹೊಕ್ಕು ಎಲ್ಲವನ್ನೂ ನಾಶಗೊಳಿಸುತ್ತ ಎಲ್ಲಕ್ಕೂ ಕೆಟ್ಟ ವೇಷಗಳನ್ನು ಧರಿಸುತ್ತಿದೆ. ಕೆಟ್ಟವ ಒಳ್ಳೆಯವನೆಂಬ ವೇಷ ಧರಿಸಿ ತನಗೆ ಬೇಕಾದದ್ದನ್ನು ಪಡೆಯುತ್ತಾನೆ. ಈ ರೀತಿಯ ಪಾಷಂಡಿ ವೇಷವನ್ನು ಧರಿಸಿ ಆಸೆಯ ವಿಷಯಕ್ಕಾಗಿ ತನ್ನ ವ್ಯಕ್ತಿತ್ವವನ್ನೇ ಕಳೆದು ಕೊಳ್ಳುವ ಸ್ಥಿತಿಗೆ ಇಳಿಯುತ್ತಾನೆ. ಮಹಾನ್ ಚೇತನ ಬುದ್ಧ ಹೇಳುತ್ತಾನೆ "ಆಸೆಯೇ ದುಃಖಕ್ಕೆ ಮೂಲ ಕಾರಣ" ಆದ್ದರಿಂದ ಆಸೆಯನ್ನು ತೊರೆಯಬೇಕು. ಆಸೆಯುಳ್ಳವ ಇನ್ನೊಬ್ಬರ ಹಂಗಿನಲ್ಲಿ ಬದುಕಬೇಕಾಗುತ್ತದೆ. ಆಸೆಯನ್ನು ತೊರೆದವನು ಈ ಜಗತ್ತಿನಲ್ಲಿ ಸ್ವಾತಂತ್ರ ವ್ಯಕ್ತಿಯಾಗಿ ಬಾಳುವನು. ಕೆಲವರು ಈ ರೀತಿ ಹೇಳುತ್ತಿರುತ್ತಾರೆ, ಆಸೆಗಳನ್ನು ಬಿಟ್ಟರೆ ಜೀವನದಲ್ಲಿ ಇನ್ನೇನಿದೆ? ಅದು ನಿಜ ಸಾಮಾನ್ಯ ಜನರಿಗೆ ಆಸೆಗಳೇ ಅವರ ಜೀವನವನ್ನು ಮುನ್ನಡೆಸುವಂತಹವು. ಜೀವನವನ್ನು ರೋಮಾಂಚನಗೊಳಿಸುವ ಸಚೇತಕ ಶಕ್ತಿಗಳಾಗುತ್ತವೆ. ಅವನು ಎಲ್ಲಾ ಆಸೆಗಳನ್ನು ಬಿಟ್ಟರೆ ನಿರುತ್ಸಾಹಿತನಾಗಿ ಜೀವನದ ಉತ್ಸಾಹವನ್ನು ಕಳೆದುಕೊಳ್ಳಬಹುದು. ಏನೋ ಬದುಕ ಬೇಕಲ್ಲಾ ಎಂದು ಭಾರವಾದ ಜೀವನವನ್ನು ನಡೆಸುತ್ತಾನೆ, ಆದರೆ ಇದು ವ್ಯಕ್ತಿಯ ಭ್ರಮೆ, ಆಸೆಯನ್ನು ಬಿಡುವುದು ಬೇಡ ಮನಸ್ಸು ಪಕ್ವವಾದಂತೆ ಆಸೆಗಳು ಕಳಚಿ ಬೀಳುತ್ತವೆ. ಇದು ನಿಜವಾದ ಸತ್ಯ. ವ್ಯಕ್ತಿ ತನ್ನನ್ನು ತಾನು ಅರಿತುಕೊಂಡಾಗ ತನ್ನಲ್ಲೇ ತನ್ಮಯವಾದ ಅರಿವನ್ನು ತಿಳಿದಾಗ ಅಲ್ಲಿ ಭವರೋಗದ ವೈದ್ಯ ಕೆಲಸ ಮಾಡುತ್ತಿದ್ದಾನೆ ಎಂದು ತಿಳಿಯಬಹುದು.

ಆಸೆಯುಳ್ಳ ವ್ಯಕ್ತಿ ಈ ಸಮಾಜದಲ್ಲಿ ಅನೇಕ ವೇಷಗಳನ್ನು ಹಾಕಬೇಕಾಗುತ್ತದೆ. ಯಾವ ವೇಷವು ಶಾಶ್ವತವಲ್ಲ. ವೇಷಗಳು ಬಯಲಾಗಲೇಬೇಕು, ಬಯಲಾದಾಗ ಮತ್ತು ಬಯಲಾಗದಿ –ದ್ದರೂ ದುಃಖ ಮಾತ್ರ ಕಂಡಿತ ಏಕೆಂದರೆ ನಮ್ಮಲ್ಲಿರುವ ಆಸೆಯಾದ ಕೆಲಸವನ್ನಾದರೂ ಮಾಡಿಸುತ್ತದೆ.ನಾವು ಯಾರಿಗೂ ತಿಳಿಯದಂತೆ ಒಂದು ವಸ್ತುವನ್ನು ಕಳ್ಳತನ ಮಾಡುತ್ತೇವೆ. 'ಯಾರಿಗೂ ತಿಳಿಯದಂತೆ' ಎನ್ನುವ ಮಾತಿನಲ್ಲಿ ನನ್ನಲ್ಲಿ ಇರುವ ಅರಿವಿಗೆ ಈ ವಿಷಯ ವೇದ್ಯವಾಗುತ್ತದೆ. ಅದು ಸದಾಕಾಲ ನಮ್ಮನ್ನು ಚುಚ್ಚುತ್ತಿರುತ್ತದೆ. ನೀನು ಮಾಡಿದ ತಪ್ಪನ್ನು ಎತ್ತಿ ತೋರಿಸುತ್ತಿದೆ. ನಮ್ಮ ತಪ್ಪಿನ ಅರಿವು ಆಗುವವರೆಗೆ ಅರಿವು ನಮ್ಮನ್ನು ಎಚ್ಚರಿಸುತ್ತಿರುತ್ತದೆ. "ಮನವರಿಯದ ಕಳ್ಳತನವಿಲ್ಲ" ನಮ್ಮ ಮನಸ್ಸಿಗೆ ತಿಳಿಯದಂತೆ ನಾವು ಏನು ಮಾಡಲು ಸಾಧ್ಯವಿಲ್ಲ. ನಮ್ಮಲ್ಲಿರುವ ಅರಿವಿಗೆ ನಾವು ಮಾಡುವುದು ಸರಿಯೋ ತಪ್ಪೋ ಎಲ್ಲವನು ಅದು ತಿಳಿದುಕೊಂಡಿರುತ್ತದೆ.ಈ ಮಾತು ಎಷ್ಟು ಸತ್ಯವನ್ನು ಹೊಂದಿದೆ ಎಂದರೆ ತನ್ನ ವೇಷದ ಅರಿವು ತಾನು ಮಾಡಿದ ತಪ್ಪಿನ ಅರಿವಾದಾಗ ತನ್ನಲ್ಲೇ ದುಃಖಪಡುತ್ತಾನೆ.

ಈ ರೋಗದಲಿ ಎಷ್ಟು ದಿನ ನರಳುವಿರಿ? ಈ ದೇಹಕ್ಕೆ ಹಿಡಿದ ರೋಗವನ್ನು ಕಳಚಲು ನಾನೊಂದು ಮದ್ದನ್ನು ಕಂಡು ಹಿಡಿದಿದ್ದೇನೆ ಎಂದು ವೈದ್ಯ ಸಂಗಣ್ಣ ವೈದ್ಯಕೀಯ ಪರಿಭಾಷೆಯಲ್ಲಿ ನಿರ್ವಚಿಸಿದ್ದನ್ನು ಕಾಣಬಹುದು.

> "ಈ ರೋಗ ನಿರೋಗವಹುದಕ್ಕೊಂದು ಮದ್ದುಂಟು ಅದು
>
> ಬೇರು ಮೂರು, ಶಾಖೆ ಐದು, ಎಲೆ ಆರು, ಕೊನೆ ಇಪ್ಪತ್ತೈದು
>
> ಇಂತಿ ಗಿಡವ ಮೂಲ ಸಹಿತ ತಂದು............"

"ಈ ವಚನದಲ್ಲಿ ಬಳಸಿದ ಶಬ್ದಗಳೆಲ್ಲವೂ ವಿಶಿಷ್ಟ ಅರ್ಥವನ್ನು ಕೊಡುತ್ತವೆ. ಮೂರು ಬೇರು ಎಂದರೆ:

| | | |
|---|---|---|
| ಇಷ್ಟಲಿಂಗ | – | ಸ್ಥೂಲ |
| ಪ್ರಾಣಲಿಂಗ | – | ಸೂಕ್ಷ್ಮ |
| ಭಾವಲಿಂಗ | – | ಕಾರಣ |

ಈ ತ್ರಿವಿಧ ಲಿಂಗಗಳು ಸ್ಥೂಲ, ಸೂಕ್ಷ್ಮ, ಕಾರಣಗಳಲ್ಲಿ ನೆಲೆಗೊಳ್ಳುತ್ತವೆ. ಇವುಗಳ ದರ್ಶನವಾಗಬೇಕೆಂದರೆ ಜ್ಞಾನ ಮಾರ್ಗದಿಂದ ಮಾತ್ರ ಸಾಧ್ಯ.

ಐದು ಶಾಖೆಗಳೆಂದರೆ ನಮ್ಮಲ್ಲಿರು ಶಕ್ತಿಗಳು, ಪಂಚಶಕ್ತಿಗಳು ಅಂಗವೆಂಬ ಲಿಂಗದಲ್ಲಿ ಉತ್ಪತ್ತಿಯಾದ ಪಂಚ ಕಲೆಗಳು ಇದರಲ್ಲಿ ಉತ್ಪತ್ತಿಯಾದ ಸಕಲರಿಗೂ ಸಹಕಾರಿಯಾದ:

- ❖ ಜ್ಞಾನಶಕ್ತಿ
- ❖ ಇಚ್ಛಾಶಕ್ತಿ
- ❖ ಕ್ರಿಯಾಶಕ್ತಿ
- ❖ ಆದಿಶಕ್ತಿ
- ❖ ಪರಾಶಕ್ತಿ

ಈ ಶಕ್ತಿಗಳಿಂದ ಲೋಕ ಕಲ್ಯಾಣಕ್ಕೆ ಸಹಕಾರಿಯಾಗಿವೆ ಮತ್ತು ವ್ಯಕ್ತಿಯ ಮಾನಸಿಕ ಮತ್ತು ಜಾಗತಿಕ ಬೆಳವಣಿಗೆಗೂ ಸಹಕಾರಿಯಾಗಿದೆ. ಆರು ಎಲೆಗಳು ಎಂದರೆ ಷಟ್‌ಸ್ಥಲಗಳು, ಭಕ್ತನು ಸಾಧಿಸಬೇಕಾದ ಭಕ್ತಸ್ಥಲ, ಮಹೇಶ್ವರ ಸ್ಥಲ, ಪ್ರಸಾದಿ, ಪ್ರಾಣಲಿಂಗಿ ಸ್ಥಲ, ಶರಣ ಸ್ಥಲ ಮತ್ತು ಐಕ್ಯ ಸ್ಥಲ ಎಂಬ ಮುಕ್ತಿ ಮಾರ್ಗವನ್ನು ತೋರಿಸುವಂತಹವು ಈ ಆರು ಹಂತಗಳು.

ಕೊನೆ ಇಪ್ಪತ್ತೈದು ಎಂದರೆ ಈ ದೇಹ ರೂಪುಗೊಂಡಿರುವುದು ಇಪ್ಪತ್ತೈದು ತತ್ವಗಳಿಂದ ಅವುಗಳಾವುವೆಂದರೆ:

೧. ಪಂಚ ಭೂತಗಳು:- ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶ

೨. ಪಂಚ ಕರ್ಮೇಂದಿಯಗಳು:- ವಾಕ್(ಬಾಯಿ), ಪಾಣಿ(ಹಸ್ತ), ಪಾದ, ಗುದ, ಗುಹ್ಯ

೩. ಪಂಚ ಜ್ಞಾನೇಂದ್ರಿಯಗಳು:- ಮೂಗು, ನಾಲಿಗೆ, ಕಣ್ಣು, ಚರ್ಮ, ಕಿವಿ

೪. ಪಂಚ ಅಂತಃಕರಣಗಳು:- ಚಿತ್ತ, ಬುದ್ಧಿ, ಅಹಂಕಾರ, ಮನ, ಜ್ಞಾನ

೫. ಪಂಚ ಪ್ರಾಣಗಳು:- ಪ್ರಾಣ, ಅಪಾನ, ವ್ಯಾಸಿ, ಉಪಾನ, ಸಮಾನ"[೩]

ಇವೆಲ್ಲವೂ ಮಾನವ ದೇಹದ ರಚನೆಗೆ ಕಾರಣವಾಗಿವೆ. ಇಷ್ಟನ್ನೆಲ್ಲ ಒಳಗೊಂಡ ಕಾಯ ಎನ್ನುವ ಗಿಡವನ್ನು ಮೂಲಸಹಿತ ತರಬೇಕು. ಅಂದರೆ ಸೃಷ್ಟಿಗೆ ಮೂಲವಾದ ಪ್ರಣವ ಅಥವಾ ಓಂಕಾರ ಸಹಿತ ಗುರು ಕರುಣೆಯಿಂದ ದೊರೆತ ಇಷ್ಟ ಲಿಂಗವೇ ಆ ಗಿಡ ಅದನ್ನು ಕಂಗಳ ಕಲ್ಲಿನಲ್ಲಿ ಇಂಗಿಸಿ ಕಂಗಳ ಕಲ್ಲು ಎಂದರೆ ಕಣ್ಣುಗಳೇ ಲಿಂಗವೆಂಬ ಮದ್ದನ್ನು ಹಾಕುವ ಒರುಳು ಅದರಲ್ಲಿ ಇಂಗಿಸಿ ಎಂದರೆ ಕಣ್ಣಿನಲ್ಲಿ ತುಂಬಿಕೊಂಡು ಲಿಂಗವನ್ನು ಪೂಜಿಸಬೇಕು. ಅದು ಆನಂದಾಶ್ರು ಎಂದರೆ ಆನಂದ ಬಾಷ್ಪಗಳನ್ನು ಸುರಿಸಿ ಮನವೆಂಬ ಗುಂಡಿಯಲ್ಲಿ ಲಿಂಗವನ್ನು ಇಟ್ಟು ಅರೆಯಬೇಕು. ಮನ ಈ ಸ್ಥಿತಿಗೆ ಬಂದಾಗ ನಮ್ಮ ಈ ಶರೀರದ ರುಜೆ ಅಲ್ಲೇ ಕಳೆದು ಹೋಗುತ್ತದೆ. ನಮ್ಮ ಅಂಗವನ್ನೇ ಲಿಂಗವಾಗಿ ಮಾಡಿಕೊಳ್ಳಬೇಕು. ಇಲ್ಲಿ ಶಂಕರಾಚಾರ್ಯರ ಮಾತು ನೆನಪಿಗೆ ಬರುತ್ತದೆ ಆತ ಹೇಳಿದ "ಅಹಂ ಬ್ರಹ್ಮಾಸ್ಮಿ" ಎಂಬ ತತ್ವ ವೈದ್ಯ ಸಂಗಣ್ಣನ ವಚನಗಳಲ್ಲಿ ಕಾಣಬಹುದು. ಈತ ವೈಜ್ಞಾನಿಕವಾಗಿ ತಿಳಿಸಿ ಕೊಟ್ಟಿದ್ದಾನೆ, ನಾನೇ ಅರಿವು, ಅರಿವೇ ಗುರು, ಗುರುವೇ ಲಿಂಗ ಎಂದು ಆದ್ದರಿಂದ ನಾನೇ ಶಿವ ನಾನೆಲಿಂಗ ಎಂಬ ನಿಲುವಿಗೆ ವೈದ್ಯ ಸಂಗಣ್ಣ ಬರುತ್ತಾನೆ. ಈತ ಸಾಮಾನ್ಯ ವೈದ್ಯರಿಗೆ ಭವರೋಗ ವೈದ್ಯನನ್ನು ಪರಿಚಯ ಮಾಡಿಕೊಟ್ಟಿದ್ದಾನೆ.

ವೈದ್ಯ ಸಂಗಣ್ಣನ ವಚನಗಳು ಅಪರೂಪವಾದವು ಇವು ಮಾನವನ ಜೀವನದ ಅದಮ್ಯ ಬೆಳಕನ್ನು ತರುವಂತಹವು. ಇವುಗಳನ್ನು ಸರಿಯಾದ ರೀತಿಯಲ್ಲಿ ಅರ್ಥ ಮಾಡಿಕೊಳ್ಳಬೇಕು. ಈತ ಹೇಳಿದ ಜಿಹ್ವೇಂದ್ರಿಯ ಮತ್ತು ಗುಹ್ಯೇಂದ್ರಿಯಗಳ ಆಸೆಯಿಂದ ಮನುಷ್ಯ ದುಃಖಕ್ಕೆ ಇಡಾಗುತ್ತಾನೆ. ಆದ್ದರಿಂದ ಪಾರಾಗಲು ಮನುಷ್ಯ ತನ್ನನ್ನು ತಾನು ಅರಿತುಕೊಳ್ಳಬೇಕು.ತನ್ನಲ್ಲಿರು ಲೋಪದೋಷಗಳನ್ನು ಸರಿಪಡಿಸಿಕೊಳ್ಳಬೇಕು. ನಾವು ಜ್ಞಾನ ಮಾರ್ಗದೆಡೆಗೆ ಸಾಗುತ್ತಾ ಹೋದರೆ ಎಲ್ಲವೂ ಕಳೆದು ಹೋಗುತ್ತವೆ. ನಮ್ಮಲ್ಲಿನ ಅರಿವು ಮಾತ್ರ ಉಳಿಯುತ್ತದೆ.

ವೈದ್ಯಕೀಯ ಚಿಕಿತ್ಸೆಯನ್ನು ಹೇಗೆ ಮಾಡಬೇಕು ಮತ್ತು ಯಾರಿಗೆ ಮಾಡಬೇಕೆಂದು ಸಂಗಣ್ಣ ತಿಳಿಸುತ್ತಾನೆ. ಸಾಮಾನ್ಯ ವೈದ್ಯ ನೀಡುವ ಔಷಧಗಳು ಈ ಮೂರು ಮೂಲಿಕೆ ಎಂದರೆ ಗುರು, ಲಿಂಗ, ಜಂಗಮ ಇವರಿಗೆ ನೀಡುವುದರಿಂದ 'ಭಕ್ತಂಗೆ ನಿಷ್ಠಾಪರಂಗೆ, ವಿರಕ್ತಂಗೆ ರುಜೆ ಎನ್ನುವುದು ಹೋಗುತ್ತದೆ. ಈ ತನುವಿಗೆ ಚಿಕಿತ್ಸೆ ಮಾಡಿದರೂ ಯಾವುದೇ ದೋಷವಾಗುವುದಿಲ್ಲ ಎಂದು ಕೆಳಗಿನ ವಚನದಲ್ಲಿ ತಿಳಿಸಿದ್ದಾರೆ.

"ನವ ಪಾಷಾಣ ರಸ ಮುಂತಾದ ಔಷಧಿಗಳೆಲ್ಲವೂ

ಈ ಮೂರು ಮೂಲಿಕದೊಳಗು, ಇವು ಮರ್ತ್ಯದ ಜೀವರ ಚಿಕಿತ್ಸೆ,

ಭಕ್ತಂಗೆ, ನಿಷ್ಠಾಪರಂಗೆ, ಸುಚಿತ್ತ ನಿರ್ಮಲ ವಿರಕ್ತಂಗೆ,

ರೋಗ ರುಜೆಯಡರಿಸಿದಲ್ಲಿ ತನುವಿಂಗೆ ಕ್ರೀ ಮಾಡಿದಡೂ ದೋಷವಿಲ್ಲ.

ಅದೆಂತೆಂದಡೆ:

ಉಷ್ಣಕ್ಕೆ ಶೈತ್ಯ ನೆರವಣಿಗೆಯಾದಂತೆ,

ಪಂಚ ಭೌತಿಕದಿಂದಾದ ಶರೀರಕ್ಕೆ ಚಿಕಿತ್ಸೆ,

ಅರಿವು ತಲೆದೋರಿದ ರೇತಕ್ಕೆ ಸಾವಧಾನದಲ್ಲಿ ತ್ರಿವಿಧದ ಬಿಡುಗಡೆ.

ತ್ರಿವಿಧ ಕಿತ್ತು ವಸ್ತುವನೊಡಗೂಡಿ ಎಯ್ದಿದವಂಗೆ

ರೋಗದಡಿಯಲ್ಲಿ ಸತ್ತವನಲ್ಲ,

ಮರುಳ ಶಂಕರ ಪ್ರಿಯ ಸಿದ್ಧರಾಮೇಶ್ವರ ಲಿಂಗದಡಿಯೊಳಗಡಗಿದವಾ.

– [ಸಂ.ವ.ಸಂ. –೪ ವ.ಸಂ.–೧೨೦]

ಇನ್ನೊಂದು ಅರ್ಥದಲ್ಲಿ ಹೇಳುವುದಾದರೆ ಮನುಷ್ಯನ ದೇಹದಲ್ಲಿನ ಮೂರು ಅಂಶಗಳು ರಾಜಸ, ತಾಮಸ, ಸಾತ್ವಿಕ ಈ ಮೂರು ಮೂಲಿಕೆಗಳಿಗೆ ನವ ಪಾಷಾಣ ರಸವನ್ನು ನೀಡಿ ಚಿಕಿತ್ಸೆ ನೀಡುವುದು ಮರ್ತ್ಯ ಲೋಕದ ಚಿಕಿತ್ಸೆ. ಇಲ್ಲಿ ಭಕ್ತಂಗೆ ತನ್ನ ಭಕ್ತಿಯಿಂದಲೇ ಚಿಕಿತ್ಸೆ ನೀಡಬೇಕು.ಆತನ ಕಾಯಕವನ್ನು ಅರಿತುಕೊಂಡು ಚಿಕಿತ್ಸೆ ನೀಡಿದರೆ ನಿಷ್ಠಾಪರಂಗೆ ಹಾಗೆಯೇ ಸುಚಿತ್ತ ನಿರ್ಮಲ ವಿರಕ್ತಂಗೆ ರುಜೆ ಎನ್ನುವುದು ಕಾಣಿಸಿಕೊಂಡರೆ ಆ ತನುವಿಗೆ ಚಿಕಿತ್ಸೆ ನೀಡಿದರೂ ದೋಷವಿಲ್ಲ. ಆ ಚಿಕಿತ್ಸೆ ಹೇಗಿರಬೇಕೆಂದರೆ ಉಷ್ಣವಾದಾಗ ಶೈತ್ಯ ಹೇಗೆ ನೆರವಾಗುತ್ತದೋ ಹಾಗೆ ರೋಗಿಗೆ ಚಿಕಿತ್ಸೆಯೂ ನೆರವಾಗಬೇಕು. ಪಂಚಭೂತಗಳಿಂದಾದ ಶರೀರಕ್ಕೆ ಯಾವುದೇ ಚಿಕಿತ್ಸೆ ಹಿಡಿಯುವುದಿಲ್ಲ. ಅದಕ್ಕಾಗಿ ಆತನಲ್ಲಿರುವ ತ್ರಿವಿಧ ಅಂದರೆ ರಾಜಸ, ತಾಮಸ, ಸಾತ್ವಿಕ ಇವುಗಳಿಂದ ಬಿಡುಗಡೆಗೊಳಿಸಿ ತನ್ನಲ್ಲಿರುವ ಅಹಂಕಾರ ಗುಣ, ತಾನು ಶ್ರೇಷ್ಠನೆಂಬ ಸಾತ್ವಿಕ ಗುಣ ಎಲ್ಲವೂ ದೇವರ ಇಚ್ಛೆ ಎಂದು ಮತ್ತೊಬ್ಬರ ಮೇಲೆ ಹೊರಸಿ ತಾನು ಸುಮ್ಮನಿರುವ ತಾಮಸ ಗುಣ ಇವೆಲ್ಲವೂ ಸಹ ಪಂಚೇಂದ್ರಿಯಗಳ ರಾಸಾಯನಿಕ ಕ್ರಿಯೆ ಇದನ್ನು ಭವ ವೈದ್ಯನ ಮೂಲಕ ಚಿಕಿತ್ಸೆಯನ್ನು ಕೊಟ್ಟು ದೇಹದ ತ್ರಿವಿಧಗಳನ್ನು ಕಿತ್ತು ಹಾಕಿದಾಗ ಅಂದರೆ, ತನು, ಧನ, ಮನವೆಂಬ ಅಹಂ ಅನ್ನು ಕಳಚಿದಾಗ ಕಾಯದ ರೋಗ ಸತ್ತು ಹೋಗುತ್ತದೆ. ಮರುಳ ಶಂಕರ ಪ್ರಿಯ ಸಿದ್ದರಾಮೇಶ್ವರ ಲಿಂಗದಡಿಯೊಳಡಗಿ ಕೊಂಡಾಗ ತಾನೇ ಲಿಂಗವಾಗಿ ಅರಿವಿನ ಗುರಿ ತಲುಪಲು ಸಾಧ್ಯವಾಗುತ್ತದೆ ಎಂದು ಸಂಗಣ್ಣ ತಿಳಿಸಿದ್ದಾರೆ.

ವೈದ್ಯ ಸಂಗಣ್ಣ ಭವರೋಗದ ವೈದ್ಯನಿಗೂ ಮತ್ತು ಸಾಮಾನ್ಯ ವೈದ್ಯನಿಗೂ ಇರುವ ವ್ಯತ್ಯಾಸವನ್ನು ತಿಳಿಸಿದ್ದಾರೆ. ವೈದ್ಯಕೀಯ ಚಿಕಿತ್ಸೆಯನ್ನು ಭವರೋಗಿಗಳಿಗೆ ಹೇಗೆ ಮಾಡಬೇಕು ಎಂಬುದನ್ನು ಒಂದು ವಚನದಲ್ಲಿ ತಿಳಿಸಿಕೊಡುತ್ತಾನೆ. ಈಗಿನ ಪಂಡಿತ ವರ್ಗವನ್ನು ವಿಡಂಬನೆ ಮಾಡಿದ್ದಾರೆ. ನಾಡಿಯ ಗತಿಯನ್ನು ಕುರಿತು ಚರ್ಚಿಸಿದ್ದಾರೆ. ಒಂದು ಶರೀರಕ್ಕೆ ನಾಡಿಗಳು ಯಾವ ರೀತಿ ಕೆಲಸ ಮಾಡಬೇಕು ಎಂಬುದನ್ನು ತಿಳಿಸಿಕೊಡುತ್ತಾರೆ.

"ವಾತ ಪಿತ್ತ ಶ್ಲೇಷ್ಮಂಗಳಿಂದ ವ್ಯಾದಿ ಬಂದಿತ್ತೆಂದು ನುಡಿವರು,

ಪಂಡಿತ ವರ್ಗಂಗಳೆಲ್ಲರು.

ಕರಣನಾಳದ ನಾಡಿಯ ಮುಟ್ಟಿ ನೋಡಿ,

ವಾಯುಗತಿ, ತಮಂಧಗತಿ, ತಾರುಗತಿ, ತ್ರಯಗತಿ, ಚತುರ್ಗತಿ, ಪಂಚಗತಿ,

ಇಂತೀ ಐದಂಗುಲಿಗೈದು, ನಾಳದ ನಾಡಿ ಸೂತ್ರಗಳ ಬೇಧವನರಿದೆವೆಂದು,

ದೀಪನ ಪಚ ಪೈತ್ಯ ಶ್ಲೇಷ್ಮವಿದೆಯೆಂದು

ಆತ್ಮನ ನಿಹಿತವನರಿಯದ ತೂತ ವೈದ್ಯನಲ್ಲ.

ಆತ್ಮನ ಹಂಸನು ಷಢಾಧಾರವ ಮುಟ್ಟಿ, ಅಷ್ಟದಳ ಕಮಲವ ಮೆಟ್ಟಿ,

ಮಿಕ್ಕಾದ ದ್ವಾರಂಗಳಲ್ಲಿ ತಟ್ಟಿ ಮುಟ್ಟದೆ ಹೋಹ

ಬೇಧವ ಬಲ್ಲಡೆ, ನಾಡಿಯಲಾಡುವ ಆತ್ಮನ ಬೇಧವ ಬಲ್ಲವ.

ಆತ್ಮನ ಸೋಧಿಸಿ ತಿಳಿದಡೆ, ರುಜೆ ರೋಗವಳಿಯಿತ್ತಲ್ಲಿಯೆ,

ಮರುಳ ಶಂಕರ ಪ್ರಿಯ ಸಿದ್ದರಾಮೇಶ್ವರ ಲಿಂಗದಲ್ಲಿ".

– [ಸಂ.ವ.ಸಂ.– ೪ ವ.ಸಂ.–೧೨೫]

ಸಾಮಾನ್ಯ ಪಂಡಿತ ವರ್ಗಗಳು ವಾತ, ಪಿತ್ತ, ಶ್ಲೇಷ್ಮಂಗಳು ಬಂದರೆ ರೋಗ ಬಂದಿದೆ ಎಂದು ನುಡಿವರು 'ಕರಣ ನಾಳದ ನಾಡಿಯ ಮುಟ್ಟಿ ನೋಡಿ ವಾಯುಗತಿ, ತಮಂಧಗತಿ, ತಾರುಗತಿ, ಚತುರ್ಗತಿ, ಪಂಚತಿ ಈ ಐದು ಗತಿಗಳಲ್ಲಿ ಹರಿಯುವ ನಾಡಿ ಸೂತ್ರಗಳ ಬೇದವನ್ನು ತಿಳಿದು ಅವುಗಳಿಗೆ ಕಾರಣವನ್ನು ನೀಡುತ್ತಾ ದೇಹದಲ್ಲಿ ಸೇವಿಸಿದ ಆಹಾರ ಸರಿಯಾದ ಜೀರ್ಣ ಕ್ರಿಯೆಗೆ ಒಳಪಟ್ಟಿಲ್ಲ. "ಕರಳು ಬಹಳ ಸಂವೇದನಾಶೀಲವಾಗಿದೆ. ವ್ಯಕ್ತಿಗೆ ವೈರಾಣು, ರೋಗಾಣುಗಳಿಂದ ಸೋಂಕು ತಗುಲಿದರೆ ಕರುಳಿನ ಒಳಪದರಿಗೆ ಊತವಾಗಿ ಸ್ರವಿಸಲ್ಪಟ್ಟ ದ್ರವದಿಂದ ನೀರು ಕರುಳಿನಲ್ಲಿ ಹೀರಲ್ಪಡದೇ ವ್ಯಕ್ತಿಗೆ ಬೇಧಿ ಆಗುವುದು."[೪] ಇದರಿಂದ ಸಾಮಾನ್ಯ ವೈದ್ಯ ದೀಪನ, ಪಚನ, ಪೈತ್ಯ ಶ್ಲೇಷ್ಮೆವಿದೆಯೆಂದು ಹೇಳುತ್ತಾನೆ. ಈತ ಆತ್ಮದ ನಿಹಿತವನ್ನು ಅರಿಯುವುದಿಲ್ಲ ಆದ್ದರಿಂದ ವೈದ್ಯ ಸಂಗಣ್ಣ ಈ ರೀತಿಯ ವೈದ್ಯರನ್ನು "ತೂತುವೈದ್ಯ"ರು ಎಂದು ವಿಡಂಬನಾತ್ಮಕವಾಗಿ ಹೇಳಿದ್ದಾರೆ. ಒಬ್ಬ ಉತ್ತಮ ವೈದ್ಯನಾದವನು ರುಜೆಗೆ ಕಾರಣವೇನೆಂಬುದನ್ನು ಆತ್ಮನ ದೆಸೆಯಿಂದ ಅರಿತುಕೊಳ್ಳಬೇಕು, ಏಕೆಂದರೆ ವ್ಯಾದಿಗೆ ಕಾರಣವೇನೆಂಬುದನ್ನು ಕೇವಲ ದೇಹವನ್ನು ತಿಳಿದರೆ ಸಾಲದು, ಆತ್ಮ ಮತ್ತು ಮನಸ್ಸುಗಳ ಎರಡರ ರಾಸಾಯನಿಕ ಕ್ರಿಯೆಯನ್ನು ತಿಳಿದು, ಅವುಗಳ ಬೇದವನ್ನು ಅರಿತು ಚಿಕಿತ್ಸೆ ಮಾಡಬೇಕೆಂದು ವೈದ್ಯ ಸಂಗಣ್ಣ ತಿಳಿಸಿದ್ದಾರೆ. ಆತ್ಮವು ನಮ್ಮ ದೇಹದ ಷಢಾದಾರ ಅಥವಾ ಷಡ್ಚಕ್ರಗಳಾದ ಮೂಲಾಧಾರ, ಸ್ವಾಧಿಷ್ಟಾನ ಮಣಿಪೂರಕ, ಅನಾಹುತ, ವಿಶುದ್ದಿ, ಆಜ್ಞೇಯವೆಂಬ ಷಢಾದಾರಗಳುನ್ನು ಮುಟ್ಟಿ ಎಲ್ಲವನ್ನು ತಿಳಿದುಕೊಂಡಾಗ ರುಜೆಯ ಬೇಧವನ್ನು ಅರಿತು ನಾಡಿಯಲ್ಲಿ ಆಡುವ ಆತ್ಮವನ್ನು ಅರಿತು ವ್ಯಾಧಿಯಿಂದ ಆತ್ಮವನ್ನು ಬೇರ್ಪಡಿಸಿ ಆತ್ಮವನ್ನು ಶುದ್ದಿ ಮಾಡಿದಾಗ ವ್ಯಾಧಿ ಅಲ್ಲಿಯೇ ಮಾಯವಾಗುತ್ತದೆ. ಆತ್ಮವನ್ನು ಅರಿತುಕೊಳ್ಳಬೇಕು ಅದರಲ್ಲಿಯ ಬದಲಾವಣೆಗೆ ಕಾರಣವೇನೆಂಬುದನ್ನು ತಿಳಿದು ಚಿಕಿತ್ಸೆ ಮಾಡಬೇಕು ಇಂತಹ ವೈದ್ಯ ಯಾರೆಂದರೆ ಅವನು ಭವರೋಗದ ವೈದ್ಯ ಸಂಗಣ್ಣ ತನ್ನನ್ನು ತಾನು ಅರಿತುಕೊಂಡಿದ್ದಾನೆ. ಈತ ಸತ್ಯವನ್ನು ತಿಳಿದು ಸುಖ ಪಡುವ ಶರಣನಾಗಿದ್ದಾನೆ. ಜ್ಞಾನಿ, ಸಂತ, ನಿರ್ಭಯ

ಸ್ಥಿತಿಯಲ್ಲಿ ಇರುವ ಮನಃಸ್ಥಿತಿಯನ್ನು ಬೆಳೆಸಿಕೊಳ್ಳುವವರು ನಮ್ಮ ಆದ್ಯ ವಚನಕಾರರು ಶರಣರು. ಆದಯ್ಯ ಶರಣರು ಒಂದು ವಚನದಲ್ಲಿ ಹೀಗೆ ಹೇಳುತ್ತಾರೆ.

"ತನ್ನ ತಾನ ಅರಿಯದ ಮುನ್ನ ತನ್ಮಯವಾದ ಅರಿವು

ತನ್ನ ತಾನ ಅರಿದ ಬಳಿಕ ಅರಿವು ತನ್ಮಯವೆಂದೇ ಅರಿತ ಅರಿವು

ತನ್ನ ಇರುವಿನ ಅರಿವೇ ಕರಿಗೊಂಡ ಬಳಿಕ

ತಾನೇ ಸೌರಾಷ್ಟ್ರ ಸೋಮೇಶ್ವರ"

[ಬಸವರಾಜ ಸ್ವಾಮಿಗಳ ಧ್ವನಿ ಸುರುಳಿ]

ಎಂದು ಆದಯ್ಯ ಶರಣರು ತುಂಬಾ ಅರ್ಥಪೂರ್ಣವಾಗಿ ಹೇಳಿದ್ದಾರೆ. ಮೊದಲು ತನ್ನನ್ನು ತಾನು ಅರಿಯಬೇಕು. ಆಗ ತನ್ನಲೇ ತನ್ಮಯವಾದ ಅರಿವಿನ ಪ್ರಜ್ಞೆ ತನಗಾಗುತ್ತದೆ. ತನ್ನಲೇ ಇರುವ ಅರಿವನ್ನು ತಿಳಿಯದೆ ಎಲ್ಲಾ ಕಡೆ ಹುಡುಕಲು ಹೋದರೆ ಪ್ರಯೋಜನವಿಲ್ಲ. ತನ್ನಲ್ಲಿ ಇರುವ ಅರಿವು ತಿಳಿದ ಬಳಿಕ ಅದೇ ನಿನಗೆ ದಾರಿಯನ್ನು ತೋರಿಸುತ್ತದೆ. ನನ್ನ 'ಅರಿವೇ ಕರಿಗೊಂಡ ಬಳಿಕ ತಾನೇ ಸೌರಾಷ್ಟ್ರ ಸೋಮೇಶ್ವರ' ನನ್ನಲ್ಲಿಯ ಅರಿವು ನನಗೆ ತಿಳಿದ ಬಳಿಕ ಅರಿವು ಲಿಂಗವಾಯಿತ್ತು. ನಾನೇ ಲಿಂಗ ಶಿವ ಎನ್ನುವುದನ್ನು ಆದಯ್ಯ ಶರಣರು ತಿಳಿಸಿಕೊಟ್ಟರು.

ಇದನ್ನೇ ವೈದ್ಯ ಸಂಗಣ್ಣನು ಜ್ಞಾನದ ಅರಿವನ್ನು ತಿಳಿಸಿಕೊಟ್ಟು ಯಾವುದೇ ಔಷದಿಕೊಡದೆ ಜ್ಞಾನದ ಮೂಲಕ ಆತನನ್ನು ನಿರೋಗಿಯನ್ನಾಗಿ ಮಾಡಿದ ವೈದ್ಯ ಸಂಗಣ್ಣ. ಸರ್ವ ಅಂಗಗಳಿಗೂ ತಗಲಿದ ಕಾಯಿಲೆಯನ್ನು ಕಳೆಯುವ ವೈದ್ಯ ಮಾಡಿದರು. ಆತ ಒಬ್ಬ ವೈದ್ಯನಾಗಿ ವೈದ್ಯನ ಪರಿಚಯ ಮಾಡಿಕೊಟ್ಟರು. ನಮ್ಮ ದೇಹವನ್ನು ಜ್ಞಾನ, ಅಜ್ಞಾನ ಎಂಬ ಎರಡು ಅಂಶಗಳು ಆವರಿಸಿಕೊಂಡಿವೆ. ಅರಿವಿಗೆ ಅಜ್ಞಾನವೆಂಬ ಕತ್ತಲು ಕವಿದಿದೆ.ಈ ಅಜ್ಞಾನವನ್ನು ಸುಜ್ಞಾನ ನಮ್ಮ ಹಿತವನ್ನು ಬಯಸುವುದೆಂದು ನಂಬಿ ಅದನ್ನು ನಮ್ಮದಾಗಿಸಿ ಕೊಂಡಿದ್ದೇವೆ. ಆದ್ದರಿಂದ ನಮ್ಮಲ್ಲಿ ಅಡಗಿರುವ ಅರಿವಿನ ಗುಣ ಹೊರ ಬರಲು ನಮ್ಮ ದೇಹ ಪ್ರತಿಕ್ರಿಯಿಸುತ್ತಿಲ್ಲ. ಇಂತಹ ಕಾಯಿಲೆಯನ್ನು ಸರಿಪಡಿಸುವ ವೈದ್ಯವನ್ನು ಮಾಡಿದವನು ವೈದ್ಯ ಸಂಗಣ್ಣ.

ಮನಸ್ಸು ಎನ್ನುವುದು ಅಜ್ಞಾನ ಅದು ಕತ್ತಲೆಯಿಂದ ಕೂಡಿರುತ್ತದೆ.ಅದಕ್ಕೆ ಬಯಕೆಯಾಗಿ ದೇವರನ್ನು ಪೂಜಿಸುತ್ತದೆ. ದೇವರಿಗೆ ದೇವಾಲಯಗಳನ್ನು ಕಟ್ಟಿಸಿ, ವಸ್ತ್ರಗಳನ್ನು, ಆಭರಣಗಳನ್ನು ತೊಡಿಸಿ ಉತ್ಸವಗಳನ್ನು ಮಾಡಿ ಮನಸ್ಸು ಸೃಷ್ಟಿಸಿದ ಅಜ್ಞಾನಕ್ಕೆ ದೇಹದಲ್ಲೇ ಅಡಗಿರುವ ಅರಿವು ಸಹಾಯ ಮಾಡುತ್ತಿದೆ. ಮನ ಇದೆಲ್ಲವೂ ದೇಹದಿಂದಲೇ ಮಾಡುತ್ತದೆ. ದೇವಾಲಯ ಕಟ್ಟಿದ್ದು ಅಂಗವೇ, ದೇವರನ್ನು ನಿರ್ಮಿಸಿದ್ದು ಅಂಗವೇ ಅದನ್ನು ಭ್ರಮೆಯಿಂದ ಪೂಜಿಸಿದ್ದು ಕೂಡ ಅಂಗವೇ, ನಮ್ಮಲ್ಲಿ ತುಂಬಿ ಹೋಗಿರುವ ಅಜ್ಞಾನವನ್ನು

ಹೊರದೊಡಿಸಿದಾಗ ಮಾತ್ರ ಈ ಎಲ್ಲ ಕೆಲಸಗಳು ನಿಲ್ಲುತ್ತವೆ. ತದ ನಂತರ ನಮ್ಮಲ್ಲಿನ ಅರಿವಿನ ಪ್ರಜ್ಞೆ ನಮಗೆ ಆಗುತ್ತದೆ.

ನಮ್ಮ ದೇಹ ಒಂದೇ ಅದರಲ್ಲಿ ಜ್ಞಾನ ಮತ್ತು ಮನಸ್ಸುಗಳ ಆವಾಸ ಸ್ಥಾನವನ್ನು ಮಾಡಿಕೊಂಡಿವೆ. ಇವು ಒಂದನ್ನು ನೋಡಿ ಜ್ಞಾನ ಕೆಟ್ಟದ್ದು ಎಂದರೆ ಮನಸ್ಸು ಒಳ್ಳೆಯದು ಎಂದು ಹೇಳುತ್ತದೆ. ಇವುಗಳಿಗೆ ನಮ್ಮ ಪಂಚೇಂದ್ರಿಯಗಳ ಬೆಂಬಲ ಯಾವುದಕ್ಕೆ ಹೆಚ್ಚಾಗಿ ಸಿಗುತ್ತದೋ ಅದು ಗೆಲ್ಲುತ್ತದೆ. ಮತ್ತೊಂದು ಸೋಲುತ್ತದೆ. ನಮ್ಮ ಜ್ಞಾನ ಮತ್ತು ಮನಸ್ಸುಗಳು ದೇಹಕ್ಕೆ ಇಟ್ಟ ಹೆಸರುಗಳು ಶ್ರೀಮಂತ, ಬಡವ, ರಾಜ, ಕಳ್ಳ, ಕಾಮೂಕ ಈ ರೀತಿ ಹೆಸರುಗಳಿಂದ ಕರೆದು ದೇಹವನ್ನು ಹೀಯಾಳಿಸುತ್ತ ಅಂಗದಲ್ಲಿಯೇ ವಾಸ ಮಾಡಿದೆ. ಈ ದೇಹವನ್ನು ವಾಸಸ್ಥಾನವಾಗಿ ಮಾಡಿಕೊಂಡ ಅಜ್ಞಾನಕ್ಕೆ ಪಂಚೇಂದ್ರಿಯಗಳಲ್ಲಿ ಇರುವ ಪಂಚ ವೈದ್ಯರಿಂದ ಚಿಕಿತ್ಸೆಯನ್ನು ಮಾಡಿಸುವ ಕ್ರಮವನ್ನು ವೈದ್ಯ ಸಂಗಣ್ಣ ತಿಳಿಯಪಡಿಸುತ್ತಾನೆ.

**ಕೊನೆ ಟಿಪ್ಪಣಿ:**

೧. ಡಾ. ಎಸ್.ವಿದ್ಯಾಶಂಕರ – ವೀರಶೈವ ಪಾರಿಭಾಷಿಕ ಪದಕೋಶ

ಪುಟ ಸಂಖ್ಯೆ – ೩೦೪

೨. ಬಸವರಾಜ ಸ್ವಾಮಿ – ಬಯಲು ಬೀಜಗಳು

ಪುಟ ಸಂಖ್ಯೆ– IX, X

೩. ಶ್ರೀ ಬಸವನಂದ ಸ್ವಾಮೀಜಿ – ಆರೋಗ್ಯಾಮೃತ

ಪುಟ ಸಂಖ್ಯೆ – ೪೧, ೪೪

೪. ಎಸ್.ಬಿ.ಪಾಟೀಲ (ಸತ್ತಿ) – ದೇಹವೇ ದೇಗುಲ

ಪುಟ ಸಂಖ್ಯೆ – ೧೨೧

## ಅಧ್ಯಾಯ-೩

## ವೈದ್ಯ ಸಂಗಣ್ಣನ ವಚನಗಳಲ್ಲಿ ಅಂತರಂಗ ಮತ್ತು ಬಹಿರಂಗ ಚಿಕಿತ್ಸೆ

"ವೈದ್ಯಕೀಯ ವೃತ್ತಿ ಮಾಡುತ್ತಿದ್ದ ವೈದ್ಯ ಸಂಗಣ್ಣ ವ್ಯಕ್ತಿಯ ಬಹಿರಂಗ ಚಿಕಿತ್ಸೆಯೊಂದಿಗೆ ಅಂತರಂಗದ ಚಿಕಿತ್ಸೆಯೂ ನಡೆಯುವುದು ತೀರ ಅವಶ್ಯ. ಇದರಿಂದ ಆತನ ಆಚಾರ-ವಿಚಾರಗಳು ಪರಿಶುದ್ಧಗೊಳ್ಳುತ್ತವೆ. ತನ್ನ ಪರಿಶುದ್ಧ ಕಾಯಕದಿಂದ ಮೈಮನಗಳ ಮಲಿನವನ್ನು ಹಸನುಗೊಳಿದವನು ಕಾಯಕ ಜೀವಿ ವೈದ್ಯ ಸಂಗಣ್ಣ. ವೈದ್ಯಶಾಸ್ತ್ರ ಹಾಗೂ ಶರೀರ ಶಾಸ್ತ್ರಗಳನ್ನು ಚೆನ್ನಾಗಿ ತಿಳಿದುಕೊಂಡವನಾಗಿದ್ದ."[೧] ಈತನಿಗಿಂತ ಮೊದಲೇ ಬಸವಣ್ಣನವರು ಅಂತರಂಗ ಮತ್ತು ಬಹಿರಂಗ ಶುದ್ಧಿಯ ಬಗ್ಗೆ ತಿಳಿಸಿದ್ದರೂ ವೈದ್ಯ ಸಂಗಣ್ಣನವರು ಶರೀರ ಮತ್ತು ಮನಸ್ಸಿನ ಸಿದ್ಧಿ ಕ್ರಿಯೆ ಬಗ್ಗೆ ಹೇಳಿದ್ದಾರೆ. ಬಸವಣ್ಣನವರು ಈ ವಚನದಲ್ಲಿ ಸ್ಪಷ್ಟ ಪಡಿಸಿದ್ದಾರೆ.
ಬಸವಣ್ಣನವರು ಅಂತರಂಗ ಮತ್ತು ಬಹಿರಂಗ ಶುದ್ದಿಯನ್ನು ಈ ವಚನದಲ್ಲಿ ಸ್ಪಷ್ಟವಾಗಿ ತಿಳಿಸಿದ್ದಾರೆ.

"ಕಳಬೇಡ, ಕೊಲಬೇಡ ಹುಸಿಯ ನುಡಿಯಲುಬೇಡ,
ಮುನಿಯಬೇಡ, ಅನ್ಯರಿಗೆ ಅಸಹ್ಯಪಡಬೇಡ, ತನ್ನ
ಬಣ್ಣಿಸಬೇಡ, ಇದಿರ ಹಳಿಯಲು ಬೇಡ, ಇದೇ
ಅಂತರಂಗ ಶುದ್ದಿ ! ಇದೇ ಬಹಿರಂಗ ಶುದ್ದಿ !
ಇದೇ ನಮ್ಮ ಕೂಡಲ ಸಂಗನನೊಲಿಸುವ ಪರಿ".

ಸಾಮಾಜಿಕ ಜೀವನದ ಕಟು ಟೀಕೆ, ವಿಡಂಬನೆಯನ್ನು ಬಸವಣ್ಣನವರ ವಚನಗಳಲ್ಲಿ ಕಾಣಬಹುದು.ಬ್ರಾಹ್ಮಣ, ವೈಶ್ಯ, ಶೂದ್ರ, ಕ್ಷತ್ರಿಯ ಈ ನಾಲ್ಕು ವರ್ಗಗಳಲ್ಲಿ ಮೇಲು ಕೀಳು ಎಂಬ ಭಾವವನ್ನು ಕಾಣುತ್ತೇವೆ. ಇಂತಹ ಅಸಮಾನತೆಗಳ ವಿರುದ್ಧ ಧ್ವನಿ ಎತ್ತಿದರು ಸುಳ್ಳು, ಮೋಸ, ವಂಚನೆ ಕಪಟಗಳನ್ನು ಬಯಲಿಗೆಳೆದು ಅವರಿಗೆ ಸರಿಯಾದ ಮಾರ್ಗವನ್ನು ಸೂಚಿಸಿದರು. ತಾವೆಲ್ಲರು ಸತ್ಯದ ದಾರಿಯಲ್ಲಿ ಹೋದರೆ ಅದೇ ಅಂತರಂಗ ಮತ್ತು ಅದೇ ಬಹಿರಂಗ ಶುದ್ಧಿ ಎಂದು ತಿಳಿಸಿಕೊಟ್ಟರು. ನಮ್ಮ ಅಂತರಂಗದಲ್ಲಿ ದೇವರ ಇರುವಿಕೆಯನ್ನು ತಿಳಿಸುತ್ತಾರೆ. ದೇವರು ಎಂದರೆ ನಮ್ಮಲ್ಲಿ ಇರುವ ಅರಿವು ಇದೇ ವಿಚಾರವನ್ನು ವೈದ್ಯ ಸಂಗಣ್ಣನು ವೈಜ್ಞಾನಿಕ ಹಿನ್ನೆಲೆಯಲ್ಲಿ ವ್ಯಕ್ತ ಪಡಿಸಿದ್ದಾರೆ.ಐದು ತತ್ವಂಗಳಿಂದಾದ ದೇಹಕ್ಕೆ ರೋಗ ರುಜೆಯಹುದೇ? ಕಾಯ ತತ್ವಂಗಳ ಗೊತ್ತಿನಲ್ಲಿ ನಿಂದು ಅವರವರ ಚಿಕಿತ್ಸೆಯಲ್ಲಿ ಹೊತ್ತು ನಿತ್ತರಿಸಿವುದೇ ಕ್ರಮ ಎಂದು ತನ್ನ ವಚನಗಳ ಮೂಲಕ ಬಹಿರಂಗದ ಜೊತೆಗೆ ಅಂತರಂಗ ಶುದ್ದಿಯನ್ನು ಕುರಿತು ಹೇಳುತ್ತಾನೆ.

ಅಂತರಂಗ ಮತ್ತು ಬಹಿರಂಗಗಳು ಉತ್ತಮವಾಗಿರಬೇಕೆಂದರೆ ನಮ್ಮ ಆರೋಗ್ಯದ ಸ್ಥಿತಿ ಉತ್ತಮವಾಗಿ ಇರಬೇಕು. "ಆರೋಗ್ಯ ಎಂಬ ಪದದಲ್ಲಿ ಆರು+ಯೋಗ್ಯ ಎಂದು ವಿಭಾಗ ಮಾಡಿ ಐದು ಪಂಚೇಂದ್ರಿಯಗಳು ಮತ್ತು ಆರನೆಯದ ಮನಸ್ಸು ಇವು ಯೋಗ್ಯವಾಗಿರುವುದೇ ಆರೋಗ್ಯ ಪಂಚೇಂದ್ರಿಯಗಳು ಯೋಗ್ಯ ಸ್ಥಿತಿಯಲ್ಲಿದ್ದರೆ ಮಾತ್ರ ನಾವೆಲ್ಲ ಆರೋಗ್ಯ ಎಂದು ಭಾವಿಸಿದ್ದೇವೆ. ವಾಸ್ತವದಲ್ಲಿ ನಮ್ಮ ಮನಸ್ಸಿನ ಆರೋಗ್ಯದ ಬಗ್ಗೆ ಅಷ್ಟೊಂದು ಕಾಳಜಿ ವಹಿಸಿರುವುದಿಲ್ಲ ಆದರೆ ಎಲ್ಲ ರೀತಿಯ ದೈಹಿಕ ಆರೋಗ್ಯಕ್ಕೆ ಮನಸ್ಸೇ ಮುಖ್ಯವೆಂಬ ಸತ್ಯವನ್ನು ಮರೆಯುತ್ತೇವೆ."[೨] ಆದರೆ ೧೨ನೇ ಶತಮಾನದಲ್ಲಿ ಬಾಳಿದ ಅನೇಕ ವಚನಕಾರರು ಮನಸ್ಸು ಮತ್ತು ದೇಹದ ಬಗ್ಗೆ ವಿಶೇಷ ಕಾಳಜಿ ವಹಿಸಿದರು. ಅಂದಿನ ವಚನಕಾರರು ಸಮಾಜದಲ್ಲಿ ತುಳಿತಕ್ಕೆ ಒಳಗಾದ ಜನಾಂಗದವರ ಬಗ್ಗೆ ಧೈರ್ಯ ತುಂಬುವ ಕೆಲಸ ಮಾಡುತ್ತಿದ್ದರು. ವೈದ್ಯ ಸಂಗಣ್ಣನ ಒಂದು ವಚನ 'ಕಣ್ಣು ಕಳೆದ ಮತ್ತೆ ಅಂಜನಕ್ಕೆ ತಿಳಿವುದೇ? ಆತ್ಮನಿದ್ದಲ್ಲಿ ಅರಿಯದೆ ಹಸು ಸತ್ತ ಮತ್ತೆ ಮೋಕ್ಷವರಸ ಉಂಟೆ?' ಎಂದು ಮನಸ್ಸು ಮತ್ತು ಜ್ಞಾನದ ಕುರಿತು ವೈದ್ಯ ಸಂಗಣ್ಣ ಹೇಳುತ್ತಾ ಅದೇ ವಿಚಾರವನ್ನು ಬಸವಣ್ಣ ಈ ಕೆಳಗಿನ ವಚನದಲ್ಲಿ ಮನಸ್ಸು ಮತ್ತು ಅರಿವು ಎರಡೂ ಸಹ ನಮ್ಮ ದೇಹವನ್ನು ಹೊಕ್ಕು ಅವು ತಮ್ಮದೇ ಆದ ರೀತಿಯಲ್ಲಿ ಕಾಯವನ್ನು ನಡೆಸಿಕೊಳ್ಳುತ್ತವೆ ಎಂದು ಬಸವಣ್ಣ ಈ ರೀತಿ ವ್ಯಕ್ತಪಡಿಸಿದ್ದಾರೆ.

"ಜನಿತಕ್ಕೆ ತಾಯಾಗಿ ಹೆತ್ತಳು ಮಾಯೆ
ಮೋಹಕ್ಕೆ ಮಗುವಾಗಿ ಹುಟ್ಟಿದ್ದಳು ಮಾಯೆ
ಕೂಟಕ್ಕೆ ಸ್ತ್ರಿಯಾಗಿ ಕೂಡಿದಳು ಮಾಯೆ
ಇದಾವ ಪರಿಯಲ್ಲಿ ಕಾಡಿತ್ತು ಮಾಯೆ
ಈ ಮಾಯೆಯ ಕಳೆವಡೆ ಎನ್ನಳವಲ್ಲಿ
ನೀವೆ ಬಲ್ಲಿರಿ ಕೂಡಲ ಸಂಗಮದೇವಾ!"

ಮನವೆಂಬ ಮಾಯೆ ನಿರ್ಧರಿಸಿದ ಶಬ್ದಗಳನ್ನು ಅರಿವಿನಿಂದ ನೋಡಲು ಹೋದರೆ ಅರ್ಥ ಕಳೆದುಕೊಳ್ಳುತ್ತೇವೆ. ಗಂಡು-ಹೆಣ್ಣು ಎನ್ನುವ ಶಬ್ದವನ್ನು ಕಳೆದುಕೊಂಡು ದೇಹ, ದೇಹದ ಅರಿವು ಎಂಬ ಅರ್ಥದ ಸ್ವರೂಪದಲ್ಲಿ ನಿಲ್ಲುತ್ತದೆ."[೩]

ಈ ಮೇಲಿನ ವಚನದ ಅರ್ಥ ಒಂದು ದೇಹದ ಜನನಕ್ಕೆ ತಾಯಿ ತಂದೆ, ಮೋಹಕ್ಕೆ ಮಗುವಾಗಿ, ಕೂಟಕ್ಕೆ ಸ್ತ್ರೀ ಪುರುಷನಾಗಿ ದೇಹಕ್ಕೆ ಮಾಯೆ ಕಾಡುತ್ತದೆ.ಈ ಮಾಯೆಯನ್ನು ಕಳೆಯುವುದು ಮನದಿಂದ

ಸಾಧ್ಯವಿಲ್ಲ ದೇಹದ ಅರಿವು ಮಾತ್ರ ಅದನ್ನು ಕಳಚಿ ಹಾಕಲು ಸಾಧ್ಯ ಶರಣರು, ಸಾಧು ಸಂತರು, ಸತ್ಪುರುಷರು ದೇಹದ ಶಾಶ್ವತ ಸುಖಕ್ಕಾಗಿ ವೈಜ್ಞಾನಿಕ ಕೆಲಸ ಮಾಡಿದರು ಅಂತಹವರಲ್ಲಿ ವೈದ್ಯ ಸಂಗಣ್ಣನವರು ಪ್ರಮುಖರು.

ನಮ್ಮ ದೇಹದಲ್ಲಿ ಮನಸ್ಸು ಒಂದು ಸೂಕ್ಷ್ಮವಾದ ಅಂಗ.ಈ ಮನಸ್ಸಿಗೆ ನಮ್ಮ ದೇಹ ಹೊದಿಕೆ ಇದ್ದ ಹಾಗೆ ಅಥವಾ ಕವಚದ ಹಾಗೆ ಮನಸ್ಸು ನಮ್ಮ ಶರೀರದ ಸೂಕ್ಷ್ಮ ಅಂಗ. ಮನಸ್ಸು ಅಂತರಂಗದ ಪ್ರತೀಕ, ಶರೀರ ಬಹಿರಂಗದ ಪ್ರತೀಕ, ಮನಸ್ಸು ಮತ್ತು ದೇಹ ಎರಡೂ ಒಂದು ಮತ್ತೊಂದರ ಮೇಲೆ ಪರಿಣಾಮ ಬೀರುತ್ತವೆ. ಈ ಕಾರಣದಿಂದಲೇ ಕೆಲವು ವೇಳೆ ಶರೀರದ ಅಸ್ವಸ್ಥತೆ ಮನಸ್ಸಿನ ಮೇಲೂ ಮನಸ್ಸಿನ ಅಸ್ವಸ್ಥತೆ ಶರೀರದ ಮೇಲೆ ಬೀಳುವುದು ನೋಡಿದ್ದೇವೆ. ದೇಹ ಮತ್ತು ಮನಸ್ಸಿನ ನಡುವೆ ಇರುವ ಅಂತರವನ್ನು ಕಳಚಿದಾಗ ಅಪಾಯಗಳು ಆಗುವುದಿಲ್ಲ. ಇಂತಹ ಸಂದರ್ಭದಲ್ಲಿ ವೈದ್ಯ ಸಂಗಣ್ಣ 'ನಾನಾ ರೋಗಂಗಳು ಬಂದು ದೇಹವ ಹಿಡಿದಲ್ಲಿ ಶಿವಾರ್ಚನೆಯ ಬೆರಕೊಳ್ಳಿ....' ಆಗ ಅಂತರಂಗ ಮತ್ತು ಬಹಿರಂಗಗಳನ್ನು ಸರಿಯಾಗಿ ನೋಡಿಕೊಳ್ಳಬಹುದು ಎಂದು ವಚನಕಾರರೆಲ್ಲರೂ ಈ ಎರಡರ ಶುದ್ದಿಗಾಗಿ ಕಾಯಕದಲ್ಲಿ ತೊಡಗಿದ್ದರು.

೧೨ನೇ ಶತಮಾನದಲ್ಲಿ ವಚನಸಾಹಿತ್ಯ ವೈದಿಕ ಮತದ ವರ್ಣಾಶ್ರಮ ವ್ಯವಸ್ಥೆಗೆ ವಿರುದ್ಧವಾಗಿ ನಿಂತಿತ್ತು ಜಾತಿ, ಭೇದಗಳನ್ನು ನಿರಾಕರಿಸಿತ್ತು. ಯಾವುದೇ ಜಾತಿ ವ್ಯವಸ್ಥೆ ಇರಬಾರದು ನಾವೆಲ್ಲರೂ ಒಂದೇ ಎಂಬ ವಾಕ್ಯದ ಮೇಲೆ ನಿಂತಿದ್ದರು. ವಚನಕಾರರು ಸಂಸ್ಕೃತ ಭಾಷೆಗೆ ಪ್ರಾಮುಖ್ಯತೆ ನೀಡಲಿಲ್ಲ. ನಮ್ಮ ದೇಸಿ ಭಾಷೆಗಳಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡಿದ್ದರು. ಇಲ್ಲಿ ಹೆಣ್ಣು ಗಂಡು ಎಂಬ ಬೇಧವಿರಲಿಲ್ಲ. ಅವನು ತಮ್ಮಲ್ಲಿರುವ ಶಿವನನ್ನು ಹುಡುಕುವ ಹಂಬಲದಲ್ಲಿದ್ದರು. ನಮ್ಮನ್ನು ನಾವು ದೃಢವಾಗಿ ನಂಬಿರಬೇಕು ಶಿವ ಎಂದರೆ ಲಿಂಗ, ಲಿಂಗವೇ ಅಂಗ, ನಮ್ಮ ದೇಹ ಈ ನೆಲೆಯಲ್ಲಿ ಅವರು ನಂಬಿಕೆಯಿಟ್ಟು ಆತ್ಮಾರ್ಪಣದಿಂದ ತಲ್ಲೀನರಾಗುವವರೋ ಅವರೇ ಭಕ್ತರು ಅವರೇ ಮುಕ್ತಿಯನ್ನು ಪಡೆಯುವವರು. ಅಂತರಂಗ ಶುದ್ದವಿಲ್ಲದವರಿಗೆ ಶುದ್ದ ಭಕ್ತಿ ದೊರೆಯುವುದಿಲ್ಲ ಆದ್ದರಿಂದ ಅಂತರಂಗದ ಮೇಲೆ ಆಗುವ ಬಹಿರಂಗದ ಪರಿಣಾಮವನ್ನು ಕಡಿಮೆ ಮಾಡಲು ನಮ್ಮ ಪಂಚೇಂದ್ರಿಯಗಳ ರಾಸಾಯನಿಕ ಕ್ರಿಯೆಯನ್ನು ಕಡಿಮೆ ಮಾಡಬೇಕು ಎಂಬುದರ ಬಗ್ಗೆ ವೈದ್ಯ ಸಂಗಣ್ಣ ಈ ರೀತಿ ಹೇಳಿದ್ದಾರೆ. 'ಪಂಚ ಭೌತಿಕದಿಂದಾದ ಶರೀರಕ್ಕೆ ಚಿಕಿತ್ಸೆ ಅರಿವು ತಲೆದೋರಿದ ರೇತಕ್ಕೆ ಸಾವಧನದಲ್ಲಿ ತ್ರಿವಿಧದ ಬಿಡುಗಡೆ ತ್ರಿವಿಧ ಕಿತ್ತು ವಸ್ತುವ ನೋಡಗೂಡಿ ಎಯ್ದಿದವಂಗೆ ರೋಗದಡಿಯಲ್ಲಿ ಸತ್ತವನಲ್ಲ....'ಅಂತರಂಗ ಶುದ್ದಿಯಾಗ ಬೇಕಾದರೆ ಪಂಚಭೂತಗಳಿಂದಾದ ಭೌತಿಕ ಶರೀರಕ್ಕೆ ಚಿಕಿತ್ಸೆಯನ್ನು ಗುರು, ಲಿಂಗ, ಜಂಗಮರಿಂದ ಕೊಡಿಸಿದರೆ ಕಾಯಿಲೆ ಅಲ್ಲಿಯೆ ಸಾಯುತ್ತದೆಎಂದಿದ್ದಾರೆ. ಭಗವಂತನು ಕಪಟಿಗಳಿಗೆ ಒಲಿಯುದಿಲ್ಲ ಆದುದರಿಂದ ಎಲ್ಲಾ ವಚನಕಾರರು ಅಂತಮುರ್ಖಿಗಳಾಗಿ ಅಂತರಂಗದಲ್ಲಿ ಹುದುಗಿದ್ದ ಲೋಪಗಳನ್ನು ಹುಡುಕಿ ಅವುಗಳನ್ನು ಸುಡುವ ಪ್ರಯತ್ನ ಮಾಡಿದರು. ಈ ಹೇಳಿಕೆಯ ಪ್ರಮುಖ ಅರ್ಥ ಮೊದಲು ನಮ್ಮ ಅಂತರಂಗದ ಲೋಪದೋಷಗಳನ್ನು ನಾವೇ ಅರಿತುಕೊಳ್ಳಬೇಕು ಮತ್ತು ಅವುಗಳನ್ನು ನಾವೇ ಸುಟ್ಟು ಹಾಕಬೇಕು. ಆಗ ಅಂತರಂಗ ಶುದ್ದಿಯಾಗುತ್ತದೆ ಎಂದು ವೈದ್ಯಸಂಗಣ್ಣ ಹೇಳಿದ್ದಾರೆ, ಈ

ಅರಿವನ್ನು ವೈದ್ಯ ಸಂಗಣ್ಣನ ವಚನದಲ್ಲಿ ಸ್ಪಷ್ಟವಾಗಿ ಆಚರಣೆಗೆತಂದಿದ್ದಾರೆ. ಆತ್ಮ ಜ್ಞಾನವನ್ನು ಪಡೆಯುವುದು ಸುಲಭದ ಕೆಲಸವಲ್ಲ ಅದನ್ನು ಪಡೆಯಲು ನಮ್ಮಲ್ಲಿ ಭಕ್ತಿಯನ್ನು ಹೊಂದಿ ಅಂತರಂಗ ಶುದ್ದಿ ಮಾಡಿಕೊಳ್ಳುವ ಮೂಲಕ ನಿರ್ಮಲ ಅಥವಾ ಪರಿಶುದ್ಧ ಜ್ಞಾನಕ್ಕೆ ಅವಕಾಶವನ್ನು ಕೊಟ್ಟವರಾಗುತ್ತೇವೆ. ಆದ್ದರಿಂದ ಪಂಚ ಇಂದ್ರಿಯಗಳ ವಿಕಾರಗಳನ್ನು ತಡೆದು ಮನಸ್ಸನ್ನು ಸ್ಥಿರಪಡಿಸಿದರೆ ಆತ್ಮಜ್ಞಾನ ಪಡೆಯುವುದಕ್ಕೆ ಸಹಾಯಕವಾಗುತ್ತದೆ ಆತ್ಮಜ್ಞಾನದಿಂದ ಸತ್ಯದ ಸ್ವರೂಪವನ್ನು ತಿಳಿಯುತ್ತೇವೆ. ಮನಸ್ಸು ಪ್ರಶಾಂತವಾಗಿರುತ್ತದೆ. ಏಕಾಗ್ರಚಿತ್ತದಿಂದ ನಮ್ಮನ್ನು ನಾವು ಅರಿತುಕೊಳ್ಳಬಹುದು ನಮಗೆ ಮುಸುಕಿರುವ ಮಾಯೆಯೆಂಬ ತೆರೆಯನ್ನು ಸರಿಸಿ ತನ್ನ ಸ್ವರೂಪವನ್ನು ಕಂಡುಕೊಳ್ಳುವುದು ಪರಮ ಗುರಿಯ ಸಾಧನೆಯಾಗುತ್ತದೆ. ಆದುದರಿಂದ ಇಲ್ಲಿ ಪರಮಾತ್ಮನ ಕರುಣೆ ಅನುಗ್ರಹ ಎಂಬುವುದು ಇಲ್ಲ, ಪರಮಾತ್ಮನಿಗೆ ಪೂಜೆ ನೈವೇದ್ಯಗಳ ಮೊರೆ ಇಡುವ ಅವಶ್ಯಕತೆ ಇಲ್ಲ, ದಾಸೋಹಗಳ ಹರಿದಾಟಗಳೂ ಇಲ್ಲ, ದೇವರು ಪ್ರತ್ಯಕ್ಷವಾಗಿ ನಮಗೆ ಮುಕ್ತಿ ಕೊಡುವನೂ ಎಂಬ ನಂಬಿಕೆಯೂ ಇಲ್ಲ. ತನ್ನಲ್ಲಿ ಇರುವ ಬಂಧನಗಳನ್ನು ಕಳಚಿಕೊಂಡು ತಾನು ತಾನಾಗಿಯೇ ಮುಕ್ತಿ ಪಡೆಯುವುದು.

ವೈದ್ಯ ಸಂಗಣ್ಣನು ಸಹ ಇದೇ ವಿಚಾರವನ್ನು ಆತನ ವಚನಗಳಲ್ಲಿ ಹೇಳುತ್ತಾನೆ. ಈತ ಇನ್ನೊಂದು ಅಂಶವನ್ನು ವಿವರಿಸಿದ್ದಾನೆ. ಬಹಿರಂಗ ಚಿಕಿತ್ಸೆಯು ಅಂತರಂಗ ಚಿಕಿತ್ಸೆಯ ಮೇಲೆ ಪರಿಣಾಮ ಬೀರುತ್ತದೆ. ಬಹಿರಂಗ ಚಿಕಿತ್ಸೆ ಎಷ್ಟು ಮುಖ್ಯವೋ ಅಂತರಂಗ ಚಿಕಿತ್ಸೆಯೂ ಅಷ್ಟೇ ಮುಖ್ಯ ಎಂದು ತಿಳಿಸಿದ್ದಾರೆ. ವೈದ್ಯ ಸಂಗಣ್ಣನ ವಚನಗಳಲ್ಲಿ ಅಂತರಂಗ (ಆತ್ಮ) ಚಿಕಿತ್ಸೆ ಮಾಡಬೇಕಾದರೆ ಮೊದಲು ಬಹಿರಂಗ (ಶರೀರ) ಚಿಕಿತ್ಸೆ ಮಾಡಬೇಕು ಎಂದು ಹೇಳಿದ್ದಾರೆ. ಈತನ ಒಂದು ವಚನವನ್ನು ಗಮನಿಸಬಹುದು.

"ಅಪ್ಪು ತನುವಿನ ಶ್ರೇಷ್ಠವಾಗಲಾಗಿ, ವಾತ ಪಿತ್ತ ಶ್ಲೇಷ, ಒಲಿಯಿತ್ತು
ಮಜ್ಜೆ ಮಾಂಸ ನರ ಅಸ್ಥಿಗಳಲ್ಲಿ ಭೇಧಿಸಿತ್ತು.
ಆ ವೇದನೆಯಿಂದ ಸರ್ವಾಂಗವ ದಹಿಸಿ, ದ್ವಾರದ್ವಾರಂಗಳಲ್ಲಿ ಮುಚ್ಚಿ,
ಅಗ್ನಿಯ ಗುಣ ಒಂದು, ಅಪ್ಪುವಿನ ಗುಣವೈದು,
ಇಂತೀ ಗುಣ ಶರೀರದಲ್ಲಿ ಲಕ್ಷಿಸಲಾಗಿ ಜೀರ್ಣಿಸದೆ,
ಆ ಜೀವನ ಪ್ರಮಾಣಿಸಿ ಕಲ್ಪನೆ ತೀರಾವನ್ನಕ್ಕ ದೇಹದ ದರ್ಪಗೆಡಿಸಿ
ಇಪ್ಪುದ ಸೋದಿಸಿಕೊಂಡು, ತ್ರೈಮಲ ಲಕ್ಷಣವ ಸೋದಿಸಿಕೊಂಡು,
ವೈದ್ಯ ಪ್ರಯೋಗದಿಂದ ಆತ್ಮನ ಭೇದಿಸಿಕೊಂಡು,

ಹಂಸನು ಇಹ ಇರವೆಂಬ ತೆರನ ತಿಳಿದು,

ರಸನಾಲಗೆಯಲ್ಲಿ, ಗಂಧ ನಾಸಿಕದಲ್ಲಿ, ರೂಪುಕಂಗಳಲ್ಲಿ,

ಶಬ್ದ ಕಿವಿಗಳಲ್ಲಿ, ಸ್ಪರುಶನ ಕೈಗಳಲ್ಲಿ,

ಇಂತಿ ಪಂಚೇಂದ್ರಿಯಂಗಳಲ್ಲಿ ಉಷ್ಣ ಶೈಕ್ಯವಪ್ಪುದನರಿದು,

ನಾಲಿಗೆಯಲ್ಲಿ ದ್ರವವನರಿದು,

ನಾಸಿಕದಲ್ಲಿ ಗಂಧವ ಸೂಸುವ ವಾಯುಶೈತ್ಯವನರಿದು,

ಕರ್ಣವಾಸದಲ್ಲಿ ಶಬ್ದ ಸೂತ್ರಗೆಟ್ಟು,

ನೇತ್ರದಲ್ಲಿ ಕಪೋತ ಸಿಕ್ಕಿ, ಶ್ವೇತವಿಹಿತನಾಗಿ ಗರ್ಭಿಕರಿಸಿದ ಮತ್ತೆ

ವೈದ್ಯದಲೇತರ ಗುಣ.

ಇಂದ್ರಿಯ ಗುಣ ರೋಗಕ್ಕೆ ಜ್ಞಾನ ವೈದ್ಯ ನೋಡಾ,

ಮರುಳ ಶಂಕರ ಪ್ರಿಯ ಸಿದ್ದರಾಮೇಶ್ವರಾ." ॥

(ಸಂ.ವ. ಸಂ.೪ – ವ. ಸಂ– ೧೦೮)

ಅಪ್ಪು ತನುವಿಗೆ ಶ್ರೇಷ್ಠವಾಗುತ್ತದೆ ಇಡೀ ದೇಹದಲ್ಲಿ ಅಪ್ಪು ಅಂದರೆ ಜಲದಿಂದ ಕೂಡಿರುವು –ದರಿಂದ ಜಲವ ಬಿಟ್ಟು ತನು ಇರಲಾರದು ಆದುದರಿಂದು ಅಪ್ಪು ತನುವಿಗೆ ಶ್ರೇಷ್ಠವಾಗಿ ವಾತ, ಪಿತ್ತ, ಶ್ಲೇಷ್ಮಂಗಳನು ಒಲಿಯಿತ್ತು. ಇಡೀ ದೇಹದ ಮಾಂಸ, ನರ, ಅಸ್ಥಿಗಳನ್ನು ಜಲ ಆವರಿಸಿದೆ. ಆ ವೇದನೆಯಿಂದ ಸರ್ವಾಂಗವೂ ದಹಿಸುತ್ತದೆ. ಜಲ ಎನ್ನುವುದು ಒಂದು ಸುಜಲ ಮತ್ತೊಂದು ಕಲುಷಿತ ನೀರು ಎರಡೂ ನಮ್ಮ ದೇಹದಲ್ಲಿ ಸೇರಿ ಕಲುಶಿತವಾಗಿ ದೇಹವನ್ನು ವೇದಿಸುತ್ತದೆ. ಅದನ್ನು ಸುಡಲು ಅಗ್ನಿಯ ಗುಣ ಒಂದು ಮತ್ತು ಜಲದ ಗುಣ ಐದು ಒಟ್ಟು ಆರು ಅರಿಷಡ್ವರ್ಗಗಳು ಎಂದರೆ ಮನುಷ್ಯನ ಮನಃಶ್ಯಾಂತಿಯನ್ನು ಕದಡುವ, ಸ್ವಾಸ್ಥ್ಯಕ್ಕೆ ಪ್ರತಿಬಂಧಕ ರೂಪವಾಗಿರುವ ಭಾವನೆಗಳನ್ನು ಶತ್ರುಗಳೆಂದು (ಅರಿ) ಬಗೆದು ಅವನ್ನು ಆರು ಗುಂಪಾಗಿ ವರ್ಗೀಕರಣ ಮಾಡುತ್ತಾರೆ. ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯ ಇವೇ ಅರಿಷಡ್ವರ್ಗಗಳು ಇವನ್ನು ಕಾಮ ಕ್ರೋಧ, ಲೋಭ ಮೋಹ, ಮದ ಮಾತ್ಸರ್ಯ ಎಂದು ಮತ್ತೆ ವಿಂಗಡಿಸುವರು ಜೀವನ ಪ್ರೀತಿ ಹೊಂದಿದವನು ಈ ಆರನ್ನೂ ಜಯಿಸಿರಬೇಕು. ಇವು ಮನುಷ್ಯನಲ್ಲೇ ಇರುವ ಶತ್ರುಗಳಂತೆ ಇವುಗಳನ್ನು ಗೆದ್ದರೆ ಲೋಕವನ್ನೇ ಗೆದ್ದಂತೆ.ಕೋಪ, ಅಸೂಯೆ, ದ್ವೇಷ ಮುಂತಾದ ದುರ್ಗುಣಗಳಿಂದ ತನಗೂ ಹಾನಿ ಇತರರಿಗೂ

ಹಾನಿ ದೇಹದ ಎಲ್ಲಾ ಕಾಯಿಲೆಗಳಿಗೂ ಕಾರಣ. ಇಂತಹ ಅರಿಷಡ್ವರ್ಗಗಳನ್ನು ತಡೆದು ಸುಂದರ ಸುಖಕರ ಸುಸಂಸ್ಕೃತ ಸಮಾಜವನ್ನು ಕಟ್ಟಬೇಕು. ಈ ಅರಿಷಡ್ವರ್ಗಗಳು ದೇಹದಲ್ಲಿ ಹೊಕ್ಕಿ ದೇಹದ ಸ್ವಾಸ್ಥ್ಯವನ್ನು ಹಾಳು ಮಾಡುತ್ತಿವೆ. ಇವುಗಳನ್ನು ದೇಹದಿಂದ ದೂರಮಾಡಲು ದೇಹದ ದರ್ಪವನ್ನು ಕೆಡಿಸಲು ಆತ್ಮವನ್ನು ಅರಿಯಬೇಕು ಆತ್ಮದಲ್ಲಿ ಅರಿಯುವ ಪಂಚ ಇಂದ್ರಿಯಗಳ ಪಥವನ್ನು ತಿಳಿದುಕೊಳ್ಳಬೇಕು ರಸದ ರುಚಿಯನ್ನು ನಾಲಿಗೆ ತಿಳಿಸುತ್ತದೆ. ಗಂಧದ ವಾಸನೆಯನ್ನು ಮೂಗು ತಿಳಿಸುತ್ತದೆ. ರೂಪವನ್ನು ಕಣ್ಣಗಳು ತೋರಿಸುತ್ತವೆ. ಶಬ್ದವನ್ನು ಕಿವಿಯಿಂದ ತಿಳಿಯುತ್ತದೆ. ಸ್ಪರ್ಶವನ್ನು ಕೈಗಳಿಂದ ತಿಳಿಯಬಹುದು. ಇಂತಿ ಪಂಚೇಂದ್ರಿಯಗಳ ಪಥವನ್ನು ಅರಿಯಲು ಇವೆಲ್ಲವೂ ಸಹಾಯಕವಾಗುತ್ತದೆ. ಇವೆಲ್ಲವೂಗಳಿಗೂ ಅಜ್ಞಾನ ಎನ್ನುವ ಅಂದಕಾರ ಹಿಡಿದಿದ್ದರಿಂದ ಅವುಗಳಿಗೆ ವೈದ್ಯವನ್ನು ಮಾಡದೆ ದೇಹಕ್ಕೆ ವೈದ್ಯ ಮಾಡುವ ವೈದ್ಯರು ಯಾವ ಮಾತ್ರ.ಅದುದರಿಂದ ಇಂದ್ರಿಯ ಗುಣಗಳ ರೋಗಕ್ಕೆ ಜ್ಞಾನ ವೈದ್ಯನಿದ್ದಾನೆ. ಅವನನ್ನು ಕಾಣುವ ಹಂಬಲಕ್ಕೆ ನನ್ನ ದೂಡು ಮರುಳ ಶಂಕರ್ ಪ್ರಿಯ ಸಿದ್ದರಾಮೇಶ್ವರಾ ಎಂದು ವೈದ್ಯ ಸಂಗಣ್ಣ ಹೇಳುತ್ತಾರೆ.

ವಚನ ಸಾಹಿತ್ಯದಲ್ಲಿ ಅಂತರಂಗದ ಶುದ್ದತೆಯ ಬಗ್ಗೆ ಹೆಚ್ಚಾಗಿ ಹೇಳುತ್ತಾರೆ. ವೈದ್ಯ ಸಂಗಣ್ಣ ಅಂತರಂಗ ಮತ್ತು ಬಹಿರಂಗ ಎರಡೂ ವಿಚಾರಗಳ ಕುರಿತು ಹೇಳುತ್ತಾರೆ. ವ್ಯಕ್ತಿಯ ಏಕಾಗ್ರತೆ ಹಾಗೂ ಮನಸ್ಸಿನ ಸಮತೋಲನವನ್ನು ಕಾಯ್ದುಕೊಳ್ಳಲು ದೇಹ ಶುದ್ದಿ ಅಗತ್ಯ.ದೇಹ ಶುದ್ದಿ ನಂತರ ಮನಸ್ಸಿನ ಶುದ್ದಿ ಅತ್ಯಂತ ಅಮೂಲ್ಯವಾದದ್ದು ಯಾರು ತಮ್ಮ ಮನಸ್ಸನ್ನು ನಿಯಂತ್ರಿಸುವರೋ ಅವರು ಜಗತ್ತನ್ನೇ ನಿಯಂತ್ರಿಸಬಲ್ಲರೆಂದು ನಾಣ್ಣುಡಿಯುಂಟು.

"ಬಾಹ್ಯ ಕ್ರಿಯೆಗಳನ್ನು ಶುದ್ಧಗೊಳಿಸುವ ಗುರುವಿನಿಂದ ಧಾರಣ ಮಾಡಿದ ಇಷ್ಟ ಲಿಂಗವನ್ನಲ್ಲದೆ ಅನ್ಯದೇವತಾರ್ಚನೆ ಮಾಡದಿರುವುದು. ಸತ್ಯ ಶುದ್ದ ಕೆಲಸವನ್ನು ಮಾಡುತ್ತ, ಸಕಲ ಪ್ರಾಣಿಗಳಲ್ಲಿ ಪಾತ್ರವನ್ನರಿತು ಹಿತವನ್ನುಂಟು ಮಾಡುವುದು. ಶಿವಲಾಂಛನ ದಾರಿಗಳನ್ನು ಪರಶಿವನೆಂದು ಭಾವಿಸಿ ತನನ್ನು ಅರ್ಪಿಸಿಕೊಳ್ಳುವುದು. ಅಷ್ಟಾವರಣಗಳನ್ನು ಕುರಿತು ಅನ್ಯರು ನಿಂದೆ ಮಾಡಿದಲ್ಲಿ ಆ ಸ್ಥಳವನ್ನು ಬಿಡುವುದು ಹಾಗೂ ಶಿವಶರಣರು ಹಿರಿಯರು ತಾನು ಕಿರಿಯ ಎಂಬ ಭಾವನೆಯಿಂದ ಅವರನ್ನು ಸೇವಿಸುವುದು ಎಂಬ ಐದು ಪ್ರಕಾರದ ಆಚಾರಗಳು ಬಾಹ್ಯ ಕ್ರಿಯೆಯನ್ನು ಶುದ್ದಗೊಳಿಸುವ ಮೂಲಕ ಬಹಿರಂಗ ಚಿಕಿತ್ಸೆಯನ್ನು ಮಾಡಬೇಕು. ಹಾಗೆಯೇ ಅಂತರಂಗ ಕ್ರಿಯೆಗಳನ್ನು ಶುದ್ದಗೊಳಿಸುವ ಕ್ರಿಯಾಚಾರ, ಜ್ಞಾನಾಚಾರ, ಭಾವಾಚಾರ, ಸತ್ಯಾಚಾರ, ನಿತ್ಯಾಚಾರ, ಧರ್ಮಾಚಾರ, ಮತ್ತು ಸರ್ವಾಚಾರ ಸಂಪತ್ತಿನಾಚಾರ ಎಂಬ ಏಳು ಬಗೆಯ ನೇಮಗಳು ಅವು ಅರಿವನ್ನು ಪಡೆದ ಭಕ್ತನು ನಿತ್ಯಕರ್ಮಗಳನ್ನು ಮಾಡುತ್ತ ಗುರುಲಿಂಗ ಜಂಗಮಾರಾಧನೆಯನ್ನು ಮಾಡುವುದು. ಶಿವಶರಣ ಗಣಗಳಲ್ಲಿ ಷಡ್ವಿಧ ಭಕ್ತಿಯಿಂದ ಕೂಡಿದ್ದ ಅವರ ವಚನಾನುಭವಗಳನ್ನು ಹೊಂದಿ ಅದರಂತೆ ಆಚರಿಸುವುದು. ಅರಿಷಡ್ವರ್ಗಗಳನ್ನು ದೂರ ಮಾಡಿ ಸದಾಚಾರದಿಂದಿರುವುದು. ಕೊಟ್ಟ ಭಾಷೆಯನ್ನು ಕೊನೆಯವರೆಗೂ ನಡೆಸಿಕೊಡುವುದು. ಲಿಂಗಾಣತಿಯಿಂದ ಬಂದುದನ್ನು ಸ್ವೀಕರಿಸುತ್ತ ಪ್ರಸಾದದಲ್ಲಿ ಸುಖಿಸುವುದು. ಪ್ರಣವ ಮೊದಲಾದ ಮಹಾ ಮಂತ್ರಗಳಲ್ಲಿ ಭಕ್ತಿಯಿಂದ

ಕೂಡಿರುವುದು ಮತ್ತು ಷಟ್ಸ್ಥಲಮಾರ್ಗದಲ್ಲಿ ನಡೆದು ನಿರವಯವನ್ನು ಸಾಧಿಸುವುದು ಎಂಬ ಏಳು ಪ್ರಕಾರದ ಆಚಾರಗಳು ಅಂತರಂಗ ಶುದ್ದಿಯನ್ನು ಮಾಡುತ್ತವೆ."[೪] ಇದು ಸಾಮಾನ್ಯವಾಗಿ ಎಲ್ಲ ವಚನಕಾರರು ಹೊಂದಿರುವ ಆದ್ಯಾತ್ಮಿಕ ಚಿಂತನೆ. ಇದನ್ನೇ ವೈದ್ಯ ಸಂಗಣ್ಣನು ಬಹಿರಂಗ ಚಿಕಿತ್ಸೆ ಮೊದಲು ಮಾಡಬೇಕು ದೇಹ ಪರಿಶುದ್ದವಾಗಿದ್ದರೆ ಮನಸ್ಸು ಪರಿಶುದ್ದವಾಗಿರುತ್ತದೆ. ಅಂತರಂಗದಲ್ಲಿ ಏನಾದರೂ ಸಮಸ್ಯೆಗಳಿದ್ದರೆ ಬಹಿರಂಗವು ಸುಸ್ಥಿತಿಯಲ್ಲಿ ಇರಲೂ ಸಾಧ್ಯವಿಲ್ಲ ಇವೆರಡರ ನಡುವೆ ಅವಿನಾಭಾವ ಸಂಬಂಧವನ್ನು ಕಲ್ಪಿಸುತ್ತಾನೆ. ಪಂಚ ತತ್ವಂಗಳಿಂದಾದ ದೇಹಕ್ಕೆ ಯಾವ ರೀತಿ ಚಿಕಿತ್ಸೆ ಮಾಡಬೇಕು ಹೇಗೆ ಅವುಗಳ ನಡುವಿನ ಸಂಬಂಧವನ್ನು ಕಂಡು ಹಿಡಿಯುವುದು ಎಂದು ವಚನದಲ್ಲಿ ಸಂಗಣ್ಣ ವಿವರಿಸಿದ್ದಾರೆ.

"ಐದು ತತ್ತ್ವಂಗಳಿಂದಾದ ದೇಹಕ್ಕೆ ರೋಗ ರುಜೆಯಹುದೆ?

ಕಾಯ ತತ್ವಂಗಳ ಗೊತ್ತಿನಲ್ಲಿ ನಿಂದು,

ಅವರವರ ಚಿಕಿತ್ಸೆಯಲ್ಲಿ ಹೊತ್ತು ನಿತ್ತರಿಸುವುದೆ ಕ್ರಮ.

ಅದೆಂತೆದಡೆ:

ಭಕ್ತಿ ನಿಷ್ಠೆ, ವಿಶ್ವಾಸ ನಿಷ್ಠೆ, ಜ್ಞಾನ ನಿಷ್ಠೆ,

ಇಂತಿ ಸದ್ಭಾವ ನೆಲೆಗೊಳ್ಳದ ಕಾರಣ,

ತನುವಿಂಗೆ ಅನುಪಾನವ ಪಾನವ ಮಾಡಬೇಕು.

ಮೇಲೆ ಅರಿದಡೆ, ಮನವು ಮನದಲ್ಲಿ ನಿಲಬೇಕು.

ಮರುಳ ಶಂಕರ ಪ್ರಿಯ ಸಿದ್ದರಾಮೇಶ್ವರ ಲಿಂಗವ ನೋಡಗೂಡಬೇಕು"

[ಸಂ.ವ. ನಂ.೪ – ವ.ಸಂ–೧೧೪]

ಐದು ತತ್ತ್ವಂಗಳಿಂದಾದ ಅಂದರೆ ಪೃಥ್ವಿ, ಅಗ್ನಿ, ವಾಯು, ಜಲ, ಆಕಾಶ ಇವುಗಳಿಂದಾದ ದೇಹಕ್ಕೆ ರೋಗವೆನ್ನುವುದು ಸಾಮಾನ್ಯ ಅಂತಹ ರೋಗಕ್ಕೆ ಅವರವರ ಕೆಲಸದಲ್ಲಿ ಅವರವರ ವ್ಯಕ್ತಿತ್ವಕ್ಕೆ ಸಮನಾಗಿ ನಾವು ಚಿಕಿತ್ಸೆಯನ್ನು ಮಾಡಬೇಕು. ಆ ಚಿಕಿತ್ಸೆ ಎನ್ನುವುದು ಭಕ್ತಿ ನಿಷ್ಠೆಯಿಂದ, ವಿಶ್ವಾಸ ನಿಷ್ಠೆಯಿಂದ ಮತ್ತು ಜ್ಞಾನನಿಷ್ಠೆಯಿಂದ ಚಿಕಿತ್ಸೆ ಮಾಡಬೇಕು.ಭಕ್ತಿನಿಷ್ಠೆ ಎನ್ನುವುದು ನಾವು ನಮ್ಮಲ್ಲಿರುವ ಅರಿವನ್ನು ನಾವು ಭಕ್ತಿ ಮಾಡಬೇಕು ವಿಶ್ವಾಸವಿಡಬೇಕು ಆಗ ತನುವನ್ನು ಮುಟ್ಟಿ ಅದಕ್ಕೆ ಔಷದವನ್ನು ಕೊಡಬೇಕಾಗುತ್ತದೆ.ಮೇಲೆ ಅರಿದಡೆ ಮನಸ್ಸು ಮನಸ್ಸಿನಲ್ಲಿ ನಿಲಬೇಕು.ಆಗ ನಮ್ಮ ಜ್ಞಾನದ ಅರಿವು ನಮಗೆ ಆಗಿದೆ ಎಂಬುದನ್ನು ತಿಳಿಯಬಹುದು.ನಮ್ಮ ದೇಹವು ಪಂಚೇಂದ್ರಿಯಗಳಿಂದ ಆಗಿದ್ದು ಅವುಗಳಲ್ಲಿ ನಡೆಯುವ ರಾಸಾಯನಿಕ

ಕ್ರಿಯೆಯಿಂದ ಅಂತರಂಗ ಮತ್ತು ಬಹಿರಂಗ ಎರಡರಲ್ಲೂ ಬೇದವನ್ನು ಕಾಣುತ್ತೇವೆ. ಈ ಬೇದದ ನಿಹಿತವನ್ನು ಅರಿಯ ಬೇಕಾದರೆ ಮೊದಲು ನಮ್ಮನ್ನು ನಾವು ತಿಳಿದುಕೊಳ್ಳಬೇಕು ಆಗ ಮಾತ್ರ ಅಂತರಂಗ ಮತ್ತು ಬಹಿರಂಗ ಶುದ್ಧಿಯಾಗುತ್ತದೆ.

"ಅಷ್ಟೋತ್ತರ ಶತವ್ಯಾಧಿಗಳ ಧರಿಸಿಕೊಂಡಿಪ್ಪುದು ಆತ್ಮನೊ, ಘಟನೊ?

ಆತ್ಮನೆಂದಡೆ ಸಾಯದು ಚಿತ್ತ,

ಘಟವೆಂದಡೆ ಆತ್ಮನಿಲ್ಲದೆ ಅರಿಯದು ದೇಹ.

ಇಂತೀ ಒಂದು ಕಳೆದು, ಒಂದಕ್ಕೆ ಔಷಧಿಯ ಕೊಟ್ಟಿಹನೆಂದಡೆ,

ಆ ಎರಡರ ಸಂಗದಿಂದ ರುಜೆ ಪ್ರಮಾಣು.

ಇಂತೀ ಶರೀರಾತ್ಮ ಆದಿಯಾಗಿ ಬಂದ ವ್ಯಾದಿಗೆ

ನಾನೊಂದು ಔಷಧಿಯ ಭೇದವ ಹೇಳಿಹೆ.

ಆಧಾರದಲ್ಲಿಪ್ಪ, ಮೂಲಿಕೆಯ ಬೇರನರದು, ಐದಿಂದ್ರಿಯವ ಕೂಡಿಕೊಂಡು,

ಮೂರು ಮುಟ್ಟಿದ ತಟ್ಟೆಯಲ್ಲಿ ಬೇಗ ತೆಗೆದುಕೊಳ್ಳಿ.

ಆ ಮದ್ದು ವಾಂತಿಗೆ ಸಲ್ಲ, ವಿರೋಚನವಿಲ್ಲ,

ನಾನಾ ವೈದ್ಯರ ಭೇದಗಾಹಿನ ಕ್ರಮವಲ್ಲ,

ಇದು ಸಿದ್ದಾಂತ ಮೂಲಿಕೆ, ಇದ ಸಾದಿಸಿಕೊಳ್ಳಿ,

ಎಂದೆಂದಿಗೂ ರುಜೆಯಲ್ಲ, ಸಂದು ಸಂಶಯವಿಲ್ಲ,

ಮರುಳ ಶಂಕರ ಪ್ರಿಯ ಸಿದ್ದರಾಮೇಶ್ವರ ಲಿಂಗದಲ್ಲಿ."

[ಸಂ.ವ.ಸಂ-೪. ವ.ಸಂ-೧೧೦]

ಎಂಟು ಸಾವಿರ ವ್ಯಾದಿಗಳನ್ನು ಧರಿಸಿಕೊಂಡಿರುವುದು ಆತ್ಮನೋ ಇಲ್ಲವೇ ದೇಹವೋ ವ್ಯಾದಿ ಎನ್ನುವುದು ಆತ್ಮಕ್ಕೆ ಬಂದಿರುವುದೋ ಇಲ್ಲವೇ ದೇಹಕ್ಕೋ ಎಂಬುದು ಆತ್ಮ ಇಲ್ಲದೆ ಸಾಯದು ಮನಸ್ಸು, ಆತ್ಮವಿಲ್ಲದ ಹೋಗದು ದೇಹ, ಆತ್ಮ ಮತ್ತು ದೇಹಕ್ಕೆ ಒಂದನ್ನು ಬಿಟ್ಟು ಮತ್ತೊಂದಕ್ಕೆ ಔಷಧಿಯನ್ನು ಕೊಟ್ಟರೆ ಆ ದೇಹ ಮತ್ತು ಆತ್ಮಕ್ಕೆ ರೋಗ ಬರುತ್ತದೆ. ಆದ್ದರಿಂದ ಶರೀರಕ್ಕೆ ಬಂದ ವ್ಯಾದಿಗೆ ವೈದ್ಯ ಸಂಗಣ್ಣ ಒಂದು ಮದ್ದನ್ನು ಹೇಳುತ್ತಾರೆ. 'ಆಧಾರದಲ್ಲಿಪ್ಪ ಮೂಲಿಕೆಯ ಬೇರನರದು ಐದಿಂದ್ರಿಯವ ಕೂಡಿಕೊಂಡು' ಅಂದರೆ ಈ

ದೇಹವು ಜ್ಞಾನದ ಅರಿವನ್ನು ತಿಳಿದು ಪಂಚ ಇಂದ್ರಿಯಗಳಿಂದ ಕೂಡಿಕೊಂಡು ಮೂರು ಮುಟ್ಟದ ತಟ್ಟೆಯಲ್ಲಿ ಅಂದರೆ ರಾಜಸ, ತಾಮಸ ಸಾತ್ವಿಕ ಗುಣಗಳು ಮುಟ್ಟದ ತಟ್ಟೆಯಲ್ಲಿ ಬೇಗ ತೆಗೆದುಕೊಳ್ಳಿ ಈ ಔಷಧ ವಾಂತಿ ಬರುವುದಿಲ್ಲ, ಬೇದಿ ಆಗುವುದಿಲ್ಲ, ನಾನು ವೈದ್ಯರನ್ನು ಅರಿತುಕೊಳ್ಳುವ ಅವಶ್ಯಕತೆ ಇಲ್ಲ. ಇದು ಭವ ರೋಗದ ವೈದ್ಯನ ಸಿದ್ಧಾಂತ ಮೂಲಿಕೆ. ಈ ಮೂಲಿಕೆಯನ್ನು ಸಾಧಿಸಿಕೊಂಡರೆ ಎಂದಿಗೂ ರುಜೆ ಅನ್ನುವ ಮಾತೆ ಬರುವುದಿಲ್ಲ ಎಂದು ವೈದ್ಯ ಸಂಗಣ್ಣ ಹೇಳಿದ್ದಾರೆ.

ವೈದ್ಯ ಸಂಗಣ್ಣನ ವಚನಗಳಲ್ಲಿ ಅರಿವಿನ ರೂಪವನ್ನು ತಿಳಿಸುತ್ತಾನೆ. ಈ ಅರಿವಿನ ಜ್ಞಾನವನ್ನು ತಿಳಿಯಲು ಪಂಚೇಂದ್ರಿಯಗಳಲ್ಲಿರುವ ಪಂಚ ವೈದ್ಯರನ್ನು ತಿಳಿಸುತ್ತಾರೆ. ಅಂದರೆ ನಮ್ಮ ಪಂಚೇಂದ್ರಿಗಳಾದ ಕಣ್ಣು, ಕಿವಿ, ಮೂಗು, ನಾಲಗೆ, ಚರ್ಮ ಇವುಗಳಲ್ಲಿ ಕಣ್ಣು ಒಂದು ವಸ್ತುವನ್ನು ನೋಡಬಾರದು ಎಂದು ಜ್ಞಾನ ಹೇಳುತ್ತದೆ.ಆದರೆ ಮನಸ್ಸು ಪದೇ ಪದೇ ಅದನ್ನೇ ಮಾಡಿಸುತ್ತದೆ.ಚರ್ಮ ಸ್ಪರ್ಶವನ್ನು ಬಯಸುತ್ತದೆ. ಅಲ್ಲಿಯೂ ಒಂದು ಮುಟ್ಟಬಾರದು ಎಂದು ಹೇಳಿದರೆ ಮತ್ತೊಂದು ಮುಟ್ಟುವಂತೆ ಪ್ರೋತ್ಸಾಹ ನೀಡುತ್ತದೆ ಹೀಗೆ ಒಂದು ಸಕಾರಾತ್ಮಕ ಪ್ರತಿಕ್ರಿಯೆಯನ್ನು ತೋರಿಸಿದರೆ ಮತ್ತೊಂದು ನಕಾರಾತ್ಮಕ ಪ್ರತಿಕ್ರಿಯೆಯನ್ನು ತೋರಿಸುತ್ತದೆ. ಇವೆರಡರ ನಡುವೆ ಇರುವ ಅಂತರ ಮತ್ತು ಅವೆರಡೂ ಯಾವುದು ಸರಿ ಯಾವುದು ತಪ್ಪು ಎನ್ನುವ ಪರಿಕಲ್ಪನೆಯನ್ನು ನಮ್ಮಲ್ಲಿ ಇರುವ ಅರಿವು ತಿಳಿಸಿಕೊಡುತ್ತದೆ. ಇದೇ ಪಂಚ ವೈದ್ಯರ ಕೆಲಸ ಅರಿವನ್ನು ಸಾಕ್ಷಾತ್ಕಾರಗೊಳಿಸುವಂತಹದ್ದು ಎಂದು ಮೊದಲಿಗೆ ಪರಿಚಯಿಸಿಕೊಟ್ಟವರು ವೈದ್ಯ ಸಂಗಣ್ಣ.

ತನ್ನ ಎಲ್ಲ ವಚನಗಳಲ್ಲಿ ವೈಜ್ಞಾನಿಕ ನೆಲೆಯ ಮೂಲಕ ಸಮಾಜ ಆಚಾರ ವಿಚಾರ ಸಂಪ್ರದಾಯಗಳನ್ನು ತೊಡೆದು ಹಾಕುವ ಪ್ರಯತ್ನ ಮಾಡಿದರು. ಬಹಿರಂಗ ಶುದ್ಧಿಯಿಂದ ಅಂತರಂಗ ಶುದ್ಧಿ ಸಾಧ್ಯ ಎಂದು ಹೇಳಿದರು.

ಈ ಮೇಲಿನ ವಚನದಲ್ಲಿ ದೇಹ ಮತ್ತು ಆತ್ಮಗಳ ಕುರಿತು ವಿವರಣೆಯನ್ನು ನೀಡುತ್ತಾನೆ. ಇದೇ ವಿಷಯವನ್ನು ಚೆನ್ನ ಬಸವಣ್ಣ ತನ್ನ ವಚನದಲ್ಲಿ ಈ ರೀತಿ ಹೇಳಿಕೊಂಡಿದ್ದಾನೆ.

"ಎಡದ ಕೈಯಲು ನಿಗಳವನಿಕ್ಕಿ

ಬಲದ ಕೈಯ ಕಡಿದು ಕೊಂಡಡೆ

ನೋಯದಿಪ್ಪುದೆ ಪ್ರಾಣಲಿಂಗವೊಂದಾಗಿ

ದೇಹ ಬೇರಿಲ್ಲ ಪಂಚಭೂತಂಗಳೇ

ಪಂಚಾಂಶ ಪಂಚೀಕೃತಿಯ ನೈದಿ ದೇಹಮಾಯ್ತು"[೫]

ಈ ವಚನದಲ್ಲಿ ಎಡ ಭಾಗಕ್ಕೆ ಎಷ್ಟು ಪ್ರಾಮುಖ್ಯತೆ ಇದೆಯೋ ಅಷ್ಟೇ ಪ್ರಾಮುಖ್ಯತೆ ಬಲ ಭಾಗಕ್ಕೂ ಇದೆ ಒಂದನ್ನು ಕತ್ತರಿಸಿ ಮತ್ತೊಂದು ಸರಿ ಇದೆಯೂ ಎಂದರೆ ನೋವಾಗದೆ ಇರುತ್ತದೆಯೇ ಇಲ್ಲಿ ಎಡ ಬಲ ಎನ್ನುವ ಬೇಧವಿಲ್ಲ. ದೇಹ, ಆತ್ಮ ಎನ್ನುವ ಬೇದವೂ ಇಲ್ಲ ಒಂದಕ್ಕೊಂದು ಅವಿನಾಭಾವ ಸಂಬಂಧವನ್ನು ಹೊಂದಿವೆ. ಪಂಚಭೂತಗಳು ಸೇರಿ ಪಂಚೀಕೃತವಾಗಿ ದೇಹವಾಗಿ ನಿರ್ಮಾಣವಾಗಿದೆ. ದೇಹವೂ ಮೂರು ಬಗೆಯ ಶರೀರಗಳನ್ನೊಳಗೊಂಡಿದೆ.

೧) ಸ್ಥೂಲ ಕಾಯ

೨) ಸೂಕ್ಷ್ಮ ಕಾಯ

೩) ಕಾರಣ ಕಾಯ

ಕಣ್ಣಿಗೆ ಕಾಣುವಂತಹದ್ದು ಸ್ಥೂಲ ಕಾಯ, ಕಣ್ಣಿಗೆ ಕಾಣಿಸದೇ ಇರುವುದು ಸೂಕ್ಷ್ಮ ಕಾಯ, ಬೇರೊಂದು ಜೀವದ ಹುಟ್ಟಿಗೆ ಕಾರಣವಾಗುವುದು ಕಾರಣ ಕಾಯ.ಈ ದೇಹವು ಪಂಚೇಂದ್ರಿಯಗಳಿಂದ ತನ್ನ ಇರುವನ್ನು ಕಂಡುಕೊಳ್ಳುತ್ತದೆ. ಈ ದೇಹ ಶಾಶ್ವತವಲ್ಲ ಇದು ಅಳಿಯುತ್ತದೆ ಈ ದೇಹದಲ್ಲಿರುವ ಚೈತನ್ಯ. ಇದು ನಮ್ಮ ದೇಹದ ಒಡೆಯ ಅದು ಶಾಶ್ವತ ಚಿರನೂತನ, ಇದಕ್ಕೆ ಅಳಿವಿಲ್ಲ ಎಂದು ದೇಹ ಮತ್ತು ಆತ್ಮಗಳ ಪ್ರಾಮುಖ್ಯತೆಯನ್ನು ಹೇಳುತ್ತಾರೆ. ಹಾಗೆಯೇ ವೈದ್ಯ ಸಂಗಣ್ಣನ ಮತ್ತೊಂದು ವಚನದಲ್ಲಿ ಶರೀರದ ಬಗ್ಗೆ ಗುರು ಲಿಂಗ ಜಂಗಮಗಳ ಬಗ್ಗೆ ಹೇಳುತ್ತಾ ಘಟ ಮತ್ತು ಆತ್ಮಗಳ ಕುರಿತು ಹೇಳುತ್ತಾನೆ.

"ಅಸ್ಥಿ ಮಾಂಸ ಶುಕ್ಲ ಶೋಣಿತವುಳ್ಳನ್ನಕ್ಕ
ಆರಿಗೂ ಆದಿವ್ಯಾಧಿಯ ತಾಪತ್ರಯದ ತನುತ್ರಯದ ಕೂಟಸ್ಥ ಬಿಡದು
ರೋಗವನರಿದು ವೈದ್ಯವ ಮಾಡಿಹೆನೆಂದಡೆ,
ತನು ಪ್ರಮಾಣು, ಪೈತ್ಯಪ್ರಮಾಣು, ವಾತ ಪ್ರಮಾಣು,
ಶ್ಲೇಷ್ಮ ಪ್ರಮಾಣು, ಆತ್ಮ ತತ್ವ ಪ್ರಮಾಣು, ಚಂದ್ರ ಸೂರ್ಯ ಬಿಂದು ಪ್ರಮಾಣು,
ಮಿಕ್ಕಾದ ಸರ್ವಾಂಗ ಪ್ರಮಾಣ ಹೇಳಿಹೆನೆಂದಡೆ,
ಮರೀಚಿಕಾ ಜಲದಂತೆ, ಸುರ ಚಾಪದಂತೆ,
ಆಕಾಶದ ಪರಿಬಣ್ಣದಂತೆ, ಇಂತೀ ಶರೀರದ ತೆರ.
ಅಲ್ಪಾಂತರ ತಿರುಗುವನ್ನಕ್ಕರ ಶರೀರ ಸಿಕ್ಕುಹುದಲ್ಲದೆ,

ಮತ್ತೆಯೂ ಆತ್ಮನ ಕಟ್ಟಿಕೊಂಡಿಹೆನೆಂದಡೆ ಸತ್ವವುಂಟೆ?
ವ್ಯಾಧಿಯಲ್ಲಿ ಹೊಂದುವ ತೆರನಾದಡೆ,
ಬ್ರಹ್ಮಂಗೆ ಸೃಷ್ಠಿಯಿಲ್ಲ, ವಿಷ್ಣುವಿಂಗೆ ಸ್ಥಿತಿ ಇಲ್ಲ, ರುದ್ರಂಗೆ ಲಯವಿಲ್ಲ,
ಇಂತೀ ಕರ್ಮಕಾಂಡದಲ್ಲಿ ಪ್ರಾಪ್ತಿ, ವರ್ಮಕಾಂಡದಲ್ಲಿ ಸರ್ವ,
ಜ್ಞಾನ ಕಾಂಡದಲ್ಲಿ ತ್ರಿವಿಧವಳಿದ ಮಹದೊಡಗುಟ,
ಇಂತೀ ಜಗದಲ್ಲಿ ಒಂದನಹುದು, ಒಂದನಲ್ಲಾ ಎಂದಡೆ,
ಅಮೃತಕ್ಕೂ ಸುರಾಪಾನಕ್ಕೂ ಸರಿಯೆಂದು ಮಾರುವವನ ತೆರದಂತೆ,
ಆಕಾಶ ತೆರನನು ನೋಡಿ ಸುಖಿಯಾಗಿ,
ತನ್ನನರಿವರಲ್ಲಿ ಮನಮುಕ್ತವಾಗಿ ಉಭಯವಳಿದು ಒಳಗೂಡಬೇಕು.
ಮರುಳ ಶಂಕರ ಪ್ರಿಯ ಸಿದ್ದರಾಮೇಶ್ವರಲಿಂಗ ಕಳುಹಿದಂತೆ ಮಾಡಿ,
ಭಕ್ತಿಗೆ ಖೋಡಿ ಇಲ್ಲದೆ ಸತ್ಯವನೊಡಗೂಡಬೇಕು,"

[ಸಂ.ವ. ಸಂ–೪ – ವ.ಸಂ–೧೧೧]

ಈ ಮೇಲಿನ ವಚನದಲ್ಲಿ ವೈದ್ಯ ಸಂಗಣ್ಣ ಶರೀರಕ್ಕೆ ಒದಗುವ ಕಾಯಿಲೆಗಳ ಬಗ್ಗೆ ಹೇಳುತ್ತಾನೆ. ಅಸ್ಥಿ ಮಾಂಸ ಶುಕ್ಲ ಶೋಣಿತವುಳ್ಳನ್ನಕ್ಕ ಆರಿಗೂ ಆದಿವ್ಯಾಧಿಯ ತಾಪತ್ರಯದ ತನುತ್ರಯದ ಕೂಟಸ್ಥ ಬಿಡದು ಅಂದರೆ ಈ ಶರೀರ ಅಸ್ಥಿ ಮಾಂಸಗಳಿಂದ ಮತ್ತು ಗುಹ್ಯೇಂದ್ರಿಯಗಳಿಂದ ಕೂಡಿದ್ದು ಇವುಗಳಿಗೆ ವ್ಯಾದಿ ಬರುವುದು ಸುಲಭ.ಇವು ಪಂಚೇಂದ್ರಿಯಗಳ ರಾಸಾಯನಿಕ ಕ್ರಿಯೆಗೆ ಬೇಗ ಒಳಗಾಗುತ್ತವೆ. ಆದ್ದರಿಂದ ಇವುಗಳು ಶರೀರ ಮತ್ತೊಂದು ಶರೀರವನ್ನು ಆಕರ್ಷಿಸುವ ಹಾಗೆ ಮಾಡುತ್ತದೆ.ಇದು ವ್ಯಾದಿಯೇ ಎಂದು ಹೇಳುತ್ತಾರೆ.ಇವು "ತನುತ್ರಯದ" ಕೂಟಸ್ಥ ಬಿಡದು. ಅಂದರೆ "ಸ್ಥೂಲ ತನು, ಸೂಕ್ಷ್ಮ ತನು ಮತ್ತು ಕಾರಣ ತನು ಎಂಬ ಮೂರು ಬಗೆಯ ಶರೀರ ಭೇದಗಳು: ಪಂಚಭೂತಗಳಿಂದಾದ ಸ್ಥೂಲ ಶರೀರ ಪಂಚೇಂದ್ರಿಯ, ಪಂಚ ವಿಷಯ, ವಾಯು ಪಂಚಕ, ಮನ ಬುದ್ಧಿಗಳನ್ನೊಳಗೊಂಡ ಸೂಕ್ಷ್ಮ ಶರೀರ ಉಳಿದ ಶರೀರಗಳಲ್ಲಿ ಚೈತನ್ಯವನ್ನುಂಟು ಮಾಡುವಂಥ ಮೂಲಾತ್ಮವುಳ್ಳ ಕಾರಣ ಶರೀರ ಎಂಬ ಮೂರು ಬಗೆಯ ಶರೀರಗಳು"[೬] ಇವುಗಳಿಗೂ ರುಜೆ ಎನ್ನುವುದು ಬಿಡುವುದಿಲ್ಲ. ಇದಕ್ಕೆ ಬಂದ ರೋಗವನ್ನು ಅರಿತು ವೈದ್ಯವ ಮಾಡಿದರೆ ಮರೀಚಿಕಾಜಲದಂತೆ ಯಾವುದಕ್ಕೂ ವೈದ್ಯ ಮಾಡಲು ಸಾದ್ಯವಿಲ್ಲ. ರೋಗವನ್ನು ಅರಿತು ಚಿಕಿತ್ಸೆ ನೀಡಬಾರದು ರೋಗಕ್ಕೆ ಕಾರಣವಾದದ್ದನ್ನು ಮೊದಲು ಚಿಕಿತ್ಸೆಗೆ ಒಳಗುಪಡಿಸಬೇಕು. ಇದು ಶರೀರಕ್ಕೆ ನಾವು ನೀಡುವ

ಸರಿಯಾದ ವೈದ್ಯ 'ಶರೀರವನ್ನು ಬಿಟ್ಟು ಆತ್ಮವನ್ನು ಕಟ್ಟಿಕೊಂಡರೆ ಅದರಲ್ಲಿ ಸತ್ವವಿರುವುದಿಲ್ಲ. ದೇಹ ಮತ್ತು ಆತ್ಮಗಳ ಎರಡನ್ನು ಸೇರಿಸಿ ಅದಕ್ಕೆ ಚಿಕಿತ್ಸೆಯನ್ನು ನೀಡಬೇಕು ಬ್ರಹ್ಮನಿಗೆ ಸೃಷ್ಠಿ ಇಲ್ಲ, ವಿಷ್ಣುವಿಗೆ ಸ್ಥಿತಿ ಇಲ್ಲ, ಶಿವನಿಗೆ ಲಯವಿಲ್ಲ ಹಾಗೇ ನಮ್ಮಲ್ಲಿರುವ ತ್ರಿವಿಧಗಳಾದ ಗುರು, ಲಿಂಗ, ಜಂಗಮರಿಗೂ ಸೃಷ್ಠಿ, ಸ್ಥಿತಿ, ಲಯಗಳ ಅಡ್ಡಿ ಇರುವುದಿಲ್ಲ.' ಇದೊಂದು ಮಹದೊಡಗೂಟ ಎಂದು ವೈದ್ಯ ಸಂಗಣ್ಣ ತಿಳಿಸಿದ್ದಾರೆ. ಇಲ್ಲಿ ಬ್ರಹ್ಮ, ವಿಷ್ಣು, ರುದ್ರರಿಗೆ ಸರಿಸಮನಾದವರು ಗುರು, ಲಿಂಗ, ಜಂಗಮ ನಮ್ಮ ತನುವಲ್ಲೇ ಈ ಎಲ್ಲರೂ ಇದ್ದಾರೆ ಆದ್ದರಿಂದ ಈ ಜಗತ್ತಿನಲ್ಲಿ ಒಂದನ್ನು ಬಿಟ್ಟು ಮತ್ತೊಂದು ಇಲ್ಲಿ ಅಮೃತ ಮತ್ತು ಸುರಪಾನ ಎರಡೂ ಒಂದೇ ಎನ್ನುವ ರೀತಿ ನಮ್ಮ ದೇಹದಲ್ಲಿ ಮನಸ್ಸು ಮತ್ತು ಅರಿವೆಂಬ ಜ್ಞಾನ ಅಡಗಿದೆ. ಇವುಗಳನ್ನು ಅವರವರ ಮನಸ್ಥಿತಿಗೆ ಅನುಗುಣವಾಗಿ ಅವರೇ ಅರಿತುಕೊಳ್ಳಬೇಕು.

"ವಚನ ಸಾಹಿತ್ಯದಲ್ಲಿ ಬಹುವಾಗಿ ಬಳಸಿರುವ ಈ ತ್ರಿವಿಧ ಎನ್ನುವ ಪದಕ್ಕೆ ಸಂದರ್ಭಾನು ಸಾರವಾಗಿ ಅನೇಕ ಬಗೆಯ ವಿಶೇಷಾರ್ಥಗಳು ಬರುತ್ತವೆ. ಅವಗಳಲ್ಲಿ ಕೆಲವನ್ನು ಇಲ್ಲಿ ಕೊಡಲಾಗಿದೆ.

- ತ್ರಿವಿಧ ಎಂದರೆ ಮೂರು ಬಗೆ ಅಥವಾ ಮೂರು ಪ್ರಕಾರ.
- ಗುರು, ಲಿಂಗ, ಜಂಗಮ: ತನುವ ಕೊಟ್ಟ ಗುರವನೊಲಿಸಬೇಕು, ಮನವ ಕೊಟ್ಟು ಲಿಂಗವನೊಲಿಸಬೇಕು, ಧನವ ಕೊಟ್ಟು ಜಂಗಮನೊಲಿಸಬೇಕು.
- ಲಿಂಗ, ಜಂಗಮ, ಪ್ರಸಾದಿ: ಲಿಂಗ ಮನವನ್ನು, ಜಂಗಮ ಧನವನ್ನು ಪ್ರಸಾದಿ ತನುವನ್ನು ಆಶ್ರಯಿಸುವುದು.
- ತನು, ಮನ, ಧನ: ತನುವ ಕೊಟ್ಟು ತನುಬಯಲಾಯಿತು ಮನವ ಕೊಟ್ಟು ಮನ ಬಯಲಾಯಿತ್ತು. ಧನವ ಕೊಟ್ಟು ಧನ ಬಯಲಾಯಿತ್ತು. ಈ ತ್ರಿವಿಧವನು ಕೊಟ್ಟು ಕೂಡಲ ಚೆನ್ನ ಸಂಗಯ್ಯನಲ್ಲಿ ಬಸವಣ್ಣಂಗೆ ಬಯಲ ಸಮಾಧಿಯಾಯಿತು ಎಂದು ಚೆನ್ನ ಬಸವಣ್ಣ ಹೇಳಿದ್ದಾರೆ."[2]

ಈ ರೀತಿ ತ್ರಿವಿಧದ ಬಗ್ಗೆ ಅನೇಕ ವಚಗಳಲ್ಲಿ ಶರಣರು ಬಳಸುತ್ತಾರೆ. ಇವುಗಳನ್ನು ಗೆಲ್ಲಬೇಕು. ಎಲ್ಲವೂ ಒಂದೇ ಎನ್ನುವ ಭಾವನೆ ಬರಬೇಕು.ತನುವನ್ನು ಶುದ್ದವಾಗಿ ಇಟ್ಟಿಕೊಂಡು ಇಷ್ಟಲಿಂಗವನ್ನು ಪೂಜಿಸಬೇಕು. ಮನಶುದ್ದವಾಗಿ ಪ್ರಾಣಲಿಂಗವನ್ನು ಧ್ಯಾನಿಸಬೇಕು.ಆಗ ತ್ರಿವಿಧಗಳನ್ನು ಅರಿದು ಜ್ಞಾನ ಮಾರ್ಗ ಸುಲಭವಾಗುತ್ತದೆ. ತ್ರಿವಿಧವನ್ನು ಕುರಿತು ವೈದ್ಯ ಸಂಗಣ್ಣ ಇವು ದೋಷಗಳೆಂದು ಕರೆದಿದ್ದಾನೆ. ದೇಹ ಇವುಗಳಲ್ಲಿ ತೊಳಲಾಡುತ್ತಿದೆ ಅದಕ್ಕೆ ನಾನು ಮದ್ದು ತಂದೆ ಎಂದು ಈ ವಚನದಲ್ಲಿ ಹೇಳುತ್ತಾನೆ. "ತ್ರಿದೋಷದ ಗುಣದಿಂದ ನಾನಾ ಬಹುತಾ ಪತ್ರಯದ ವ್ಯಾದಿಯ ಚಿಕಿತ್ಸೆಯ ನಾರು ಅರಿಯರಲ್ಲಾ....." ತ್ರಿದೋಷಗಳಿಂದ ಬಂದ ವ್ಯಾದಿ

ಯನ್ನು ಯಾರು ತಿಳಿಯಲು ಸಾಧ್ಯ ಎಂದು ಹೆಳುತ್ತಾ ಇವುಗಳಿಂದ ಮುಕ್ತಿಯನ್ನು ಪಡೆಯಬೇಕೆಂದು ವೈದ್ಯ ಸಂಗಣ್ಣ ತಿಳಿಸಿದ್ದಾರೆ.

"ದೇಹ ಮತ್ತು ಮನಸ್ಸುಗಳು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ ಎಂಬ ಮಾತಿದೆ.ನಾಣ್ಯದ ಯಾವ ಮುಖ ಸವಕಲಾದರೂ ಚಲಾವಣೆಗೆ ಬರಲಾರದು ಅಂತೆಯೇ ದೈಹಿಕ ಮತ್ತು ಮಾನಸಿಕ ಆರೋಗ್ಯಗಳೆರಡೂ ಮನುಷ್ಯನಿಗೆ ಅತ್ಯವಶ್ಯಕವಾಗಿವೆ. ಪ್ರಾಚೀನ ಕಾಲದಿಂದಲೂ ನಮ್ಮ ಭಾರತೀಯ ಪರಂಪರೆಯಲ್ಲಿ ಅಂತರಂಗ ಸುಖಕ್ಕೆ ಹೆಚ್ಚಿನ ಪ್ರಾಧಾನ್ಯವಿತ್ತಿದ್ದಾರೆ.ಬಾಹ್ಯಾಡಂಬರದ ಆಚರಣೆಗಳಗಿಂತಲೂ ಮಾನಸಿಕವಾದುದಕ್ಕೆ ಆದ್ಯತೆ ಕೊಟ್ಟಿದ್ದಾರೆ.ಮನುಷ್ಯನ ಎಲ್ಲಾ ಚಿಂತನೆಗಳಿಗೆ ಮೂಲ ಮನಸ್ಸು.ನಾವು ಮನಸ್ಸು ಮಾಡಿದರೆ ಈ ಪ್ರಪಂಚದಲ್ಲಿ ಏನನ್ನಾದರೂ ಸಾಧಿಸಬಹುದು.ಮನುಷ್ಯನ ಮನಸ್ಸಿಗೆ ಪ್ರಚಂಡ ಶಕ್ತಿಯಿದೆ.ಇದನ್ನು ಆತ್ಮ ಶಕ್ತಿ ಎನ್ನುತ್ತಾರೆ ಮನಃಶಕ್ತಿ, ಇಚ್ಚಾಶಕ್ತಿ, ಕ್ರಿಯಾಶಕ್ತಿ, ಜ್ಞಾನಶಕ್ತಿ ಎಲ್ಲದಕ್ಕೂ ಆತ್ಮಶಕ್ತಿಯೇ ಕಾರಣ."[೮]

ನಮ್ಮ ಅಂತರಂಗದಲ್ಲಿ ಆತ್ಮವು ತನ್ಮಯವಾಗಿರುತ್ತದೆ ಅದನ್ನು ಅರಿತಾಗ ಆತ್ಮಸುಖ ಸಿಗುತ್ತದೆ, ಆತ್ಮ ಪರಿಶುದ್ಧವಾಗಿದ್ದರೆ ನಾವು ಯಾವುದಕ್ಕೂ ಅಂಜಬೇಕಾಗಿಲ್ಲ. ಬಹಿರಂಗ ಶುದ್ದಿಯಿಂದ ಅಂತರಂಗವನ್ನು ಶುದ್ದಿಯಾಗಿ ಇಟ್ಟುಕೊಳ್ಳಬೇಕು.ವೈದ್ಯ ಸಂಗಣ್ಣನ ವಚನದಲ್ಲಿ ಆತ್ಮ ಮತ್ತು ದೇಹಕ್ಕೆ ಹಿಡಿದ ರುಜೆಯನ್ನು ಕಳೆಯಲು ತಾನು ಮದ್ದನ್ನು ಕಂಡು ಹಿಡಿದಿರುವ ಹಾಗೆ ಹೇಳುತ್ತಾನೆ. ಆ ಮದ್ದಿನ ಬಳಕೆ ಹೇಗೆ ಮಾಡಬೇಕೆಂದು ಹೇಳುತ್ತಾನೆ.

"ಕಣ್ಣು ಕಳೆದ ಮತ್ತೆ ಅಂಜನಕ್ಕೆ ತಿಳಿವುದೆ?
ಆತ್ಮನಿದ್ದಲ್ಲಿ ಅರಿಯದೆ ಹಸು ಸತ್ತ ಮತ್ತೆ ಮೋಕ್ಷವನರಸ ಉಂಟೆ?
ಎಚ್ಚರಿಕೆ ತನಗಿದ್ದಲ್ಲಿ ನಾನೊಂದು ನಿಶ್ಚಯದ ಮದ್ದ ತಂದೆ.
ಆ ಮದ್ದಿನ ಭೇದ್ ಘಟಕ್ಕೆ ಕೇಡಿಲ್ಲ,
ಆತ್ಮಂಗೆ ಭವವಿಲ್ಲ, ಅರಿವಿಂಗೆ ತುದಿ ಮೊದಲಿಲ್ಲ,
ಇದು ನಿರಿಗೆ ಕೊಳ ಬಲ್ಲಡೆ,
ಗುರುವಿಂಗೆ ತನು, ಲಿಂಗಕ್ಕೆ ಮನ, ಜಂಗಮಕ್ಕೆ ಧನ.
ರೋಗ ಹೋಯಿತ್ತು, ಬೇಗ ಅರಿದುಕೊಳ್ಳಿ,
ಮರುಳಶಂಕರ ಪ್ರಿಯ ಸಿದ್ದರಾಮೇಶ್ವರಲಿಂಗ ಸಾಕ್ಷಿಯಾಗಿ".

[ಸ. ವ. ಸಂ-೪ ವ. ಸಂ. ೧೧೬]

ಕಣ್ಣಿಗೆ ತಿಳಿಯದ ಅರಿವು ಅಂಜನವನ್ನು ಹಾಕಿ ನೋಡಿದರೆ ತಿಳಿಯುತ್ತದೆಯೇ?ಆತ್ಮ ದೇಹದಲ್ಲಿ ಇದ್ದಾಗ ಅರಿತರೆ ಅದಕ್ಕೆ ಬೆಲೆಯುಂಟು. ಹಸು ಸತ್ತ ಮೇಲೆ ಮೋಕ್ಷವನ್ನು ಅರಿಸಲು ಹೋದರೆ ಪ್ರಯೋಜನವಿಲ್ಲ. ಅಂದರೆ ದೇಹದಿಂದ ಆತ್ಮ ಬೇರ್ಪಡೆಯಾದರೆ ದೇಹ ಮೋಕ್ಷ ಅರಿಸಲು ಸಾಧ್ಯವಿಲ್ಲ. ನಿನಗೆ ಎಚ್ಚರಿಕೆ ಇದ್ದರೆ ನಿಶ್ಚಯದ ಮದ್ದನ್ನು ನಾನು ತರುತ್ತೇನೆ. ಆ ಮದ್ದಿನ ಬೇಧದಿಂದ ದೇಹಕ್ಕೆ ಕೇಡಿಲ್ಲ.ಆತ್ಮಕ್ಕೆ ಹುಟ್ಟು ಸಾವುಗಳಿಲ್ಲ, ಅರಿವಿಗೆ ತುದಿ ಮೊದಲಿಲ್ಲ ಇಂತಹ ಮದ್ದನ್ನು ನಮ್ಮ ದೇಹಕ್ಕೆ ಸೇರ್ಪಡೆ ಮಾಡಿಕೊಳ್ಳಲು ಗುರುವಿಗೆ ತನುವನ್ನು, ಲಿಂಗಕ್ಕೆ ಮನ, ಜಂಗಮಕ್ಕೆ ಧನವನ್ನು ಕೊಟ್ಟು ಅವುಗಳ ಅರಿವನ್ನು ಸಾಧಿಸಿಕೊಳ್ಳಬೇಕು, ಇದರಿಂದ ರೋಗ ಹೋಗುತ್ತದೆ ಬೇಗ ಜ್ಞಾನ ಮಾರ್ಗವನ್ನು ಅರಿತುಕೊಳ್ಳಿ ಎಂದು ವೈದ್ಯ ಸಂಗಣ್ಣ ಕರೆ ಕೊಡುತ್ತಾನೆ.

ವಚನ ಮೊದಲಲ್ಲಿ ಕಣ್ಣಿನ ವೈಶಿಷ್ಟ್ಯವನ್ನು ಹೇಳುತ್ತಾ ಮುಖದಲ್ಲಿ ಕಣ್ಣುಗಳು ಅತ್ಯಂತ ಆಕರ್ಷಣೆ ಹೊಂದಿರುವ ಅಂಗಗಳಾಗಿವೆ. ಒಂದು ಅರ್ಥದಲ್ಲಿ ಕಣ್ಣು ಎನ್ನುವುದು ಕೇವಲ ನೋಡುವುದು ಎನ್ನುವ ಸಂಕುಚಿತ ಅರ್ಥವನ್ನು ಹೊಂದಿದೆ. ಹಾಗೆಯೇ ವಿಶಾಲ ಅರ್ಥದಲ್ಲಿ ಕಣ್ಣು ಎನ್ನುವುದು ಅರಿವಿನ ಕಣ್ಣು ಎಂದು ಅರ್ಥೈಯಿಸಬಹುದು. ಹೊಳೆಯುವ ಸುಂದರ ಕಣ್ಣುಗಳನ್ನು ಕಮಲದಲಗಳು ಹೂವುಗಳಿಗೆ ಹೋಲಿಸುತ್ತಾರೆ. ಕಣ್ಣುಗಳ ನೊಟವು ಸಹ ಅತ್ಯಂತ ಪ್ರಭಾವ ಬೀರುವುದು ತೇಜಸ್ಸು ಆಕೃತಿ, ಬಣ್ಣ, ಕಣ್ಣು ಪಾಪೆ ಸಹ ವೈಶಿಷ್ಟ್ಯತೆಗೆ ಕಾರಣವಾಗಿದೆ.ಇಂತಹ ವೈಶಿಷ್ಟ್ಯತೆಗೆ ಕಾರಣವಾದ ಕಣ್ಣು ಕಳೆದರೆ ಮತ್ತೆ ಅಂಜನಕ್ಕೆ ಕಾಣಿಸುತ್ತದೆಯೇ ಎಂದು ಕೇಳುತ್ತಾರೆ. ದೇಹ ಮತ್ತು ಆತ್ಮಗಳ ಮಹತ್ವವನ್ನು ತಿಳಿಸುತ್ತಾರೆ. ದೇಹ ಇಲ್ಲದೆ ಆತ್ಮಕ್ಕೆ ಸಾಕ್ಷಾತ್ಕಾರ ಪಡೆಯಲು ಸಾಧ್ಯವಿಲ್ಲ ಎಂದು ಹೇಳುತ್ತಾರೆ. ಅದೇ ರೀತಿ ತ್ರಿವಿಧವಾದ ಗುರು ಲಿಂಗ ಜಂಗಮದ ಮಹತ್ವವನ್ನು ತಿಳಿಸುತ್ತದೆ. ತನುವ ಕೊಟ್ಟು ಗುರುವನೊಲಿಸಬೇಕು, ಮನವ ಕೊಟ್ಟು ಲಿಂಗನೊಲಿಸಬೇಕು, ಧನವ ಕೊಟ್ಟು ಜಂಗಮನನೊಲಿಸಬೇಕು. ಇದರಿಂದ ನಮ್ಮ ದೇಹ ಪ್ರಶಾಂತತೆಯ ಸ್ಥಿತಿಗೆ ಬರುತ್ತದೆ. ಆಗ ನಮ್ಮ ದೇಹದಲ್ಲೇ ಇರುವ ಅರಿವಿನ ಜ್ಞಾನ ನಮಗೆ ಅರ್ಥವಾಗುತ್ತದೆ ಇದನ್ನು ನಾವು ಬೇಗ ತಿಳಿದುಕೊಳ್ಳಬೇಕು ಇದರಿಂದ ನಮ್ಮ ದೇಹದ ಎಲ್ಲಾ ಕ್ರಿಯೆಗಳು ಸಕ್ರಿಯವಾಗಿ ಸಕಾರಾತ್ಮಕತೆಯನ್ನು ಪಡೆದುಕೊಳ್ಳುತ್ತವೆ. ತ್ರಿವಿದ ದಾಸೋಹವನ್ನು ಮಾಡಬೇಕು.ಗುರು, ಲಿಂಗ, ಜಂಗಮಕ್ಕೆ ತನು, ಮನ, ಧನ ಕೊಟ್ಟು ಸೇವೆಯ ಮಾಡಬೇಕು. ಇದೇ ತ್ರಿವಿಧ ದಾಸೋಹ ಇದನ್ನು ಅರಿತು ಕೊಂಡರೆ ನಮಗೆ ಒಳ್ಳೆಯ ಜ್ಞಾನದ ಮಾರ್ಗ ದರ್ಶನವಾಗುತ್ತದೆ.ಅದರಿಂದ ನಮ್ಮ ನಿಜದ ಅರಿವು ನಮಗಾಗುತ್ತದೆ ನಮ್ಮನ್ನು ನಾವು ಅರಿತುಕೊಂಡಾಗ ಸತ್ಯದ ದರ್ಶನವಾಗುತ್ತದೆ. ಅಂತರಂಗ ಶುದ್ದಿಯಾಗುತ್ತದೆ ಮತ್ತು ಬಹಿರಂಗ ಚೆನ್ನಾಗಿರುತ್ತದೆ ಇವೆರಡೂ ಒಂದನ್ನೊಂದು ಬಿಟ್ಟು ಇರುವುದಿಲ್ಲ. ಇವುಗಳಲ್ಲಿ ಅವಿನಾಭಾವ ಸಂಬಂಧವನ್ನು ಕಾಣುತ್ತೇವೆ. ವೈದ್ಯ ಸಂಗಣ್ಣ ತನ್ನ ಎಲ್ಲಾ ವಚನಗಳಲ್ಲಿ ವೈಜ್ಞಾನಿಕ ದೃಷ್ಟಿಕೋನದಲ್ಲಿ ರಚನೆ ಮಾಡಿದ್ದಾರೆ.

"ತ್ರಿದೋಷದ ಗುಣದಿಂದ ನಾನಾ ಬಹುತಾಪತ್ರಯದ

ವ್ಯಾಧಿಯ ಚಿಕಿತ್ಸೆಯನಾರು ಅರಿಯರಲ್ಲಾ!

ತನುವಿಂಗೆ ವಾತ, ಪೈತ್ಯ, ಶ್ಲೇಷ್ಮ, ಆತ್ಮಂಗೆ ಆಣವ, ಮಾಯಾ, ಕಾರ್ಮಿಕ,

ಇಂತೀ ತ್ರಿವಿಧ ಮಲತ್ರಯದ ರೋಗರುಜೆಯಡಸಿ,

ಬಂಧನದಲ್ಲಿ ಸಾವುತ್ತಿದೆ ಅಂಗ.

ಈ ರೋಗ ನಿರೋಗವಹುದಕ್ಕೆ ನಾ ಮೂರು ಬೇರ ತಂದೆ.

ಒಂದ ಅಂಗದಲ್ಲಿ ಮರ್ದಿಸಿ, ಒಂದು ಆತ್ಮನಲ್ಲಿ ಮಥನಿಸಿ,

ಒಂದು ಅರಿವಿನಲ್ಲಿ ಪಾನವ ಮಾಡಿ, ಈ ರೋಗ ಹರಿವುದು

ಇದಕ್ಕನುಪಾನ ಇದಿರೆಡೆಯಿಲ್ಲ,

ಮರುಳ ಶಂಕರ ಪ್ರಿಯ ಸಿದ್ಧರಾಮೇಶ್ವರಲಿಂಗ ಸಾಕ್ಷಿಯಾಗಿ."

[ಸಂ.ವ.ಸಂ–ವ.ಸಂ–೧೧೯]

ತ್ರಿವಿಧಗಳಿಗೆ ಎಸಗುವ ದೋಷದ ಗುಣದಿಂದ ನಾನಾ ವ್ಯಾಧಿಗಳು ಬರುತ್ತವೆ. ಅವುಗಳಿಗೆ ಚಿಕಿತ್ಸೆಯನ್ನು ಮಾಡಲು ಆರಿಗೂ ಸಾಧ್ಯವಾಗುವುದಿಲ್ಲ. ಈ ದೇಹಕ್ಕೆ ವಾತ, ಪೈತ್ಯ, ಶ್ಲೇಷ್ಮ ಇವುಗಳಿಂದ ದೇಹ ರುಜೆಗೆ ಒಳಗಾಗುತ್ತಿದೆ. ಅದೇ ರೀತಿ ಆತ್ಮಕ್ಕೆ ಆಣವ, ಮಾಯಾ, ಕಾರ್ಮಿಕ ಎಂಬ ತ್ರಿವಿಧ ಮಲಗಳು ದೇಹಕ್ಕೆ ಹಿಡಿದು ದೇಹದ ಕಾಯಿಲೆಗೆ ಕಾರಣವಾಗುತ್ತಿವೆ. ತ್ರಿಮಲಗಳಾದ "ಆಣವ, ಮಾಯಿಕ ಮತ್ತು ಕಾರ್ಮಿಕ ಎಂಬ ತ್ರಿವಿಧ ಮಲಗಳಲ್ಲಿ ಒಂದಾದ ಆಣವ ಜೀವನಲ್ಲಿ ಅಣುತ್ವ ಭಾವನೆಯನ್ನು ಉಂಟಾಗಿಸುವುದು, ಮಾಯೆ: ಜೀವನಿಗೆ ಅಂಟಿಕೊಳ್ಳುವ ಆಣವ, ಮಾಯಾ ಮತ್ತು ಕಾರ್ಮಿಕ ಮಲಗಳೆಂಬ ತ್ರಿವಿಧ ಮಲಗಳಲ್ಲಿ ಒಂದು ಪರಶಿವನನ್ನು ಮರೆತು ತಾನು ತನ್ನವರು ಎಂಬುದರ ಮೇಲೆ ಉಂಟಾಗುವ ವ್ಯಾಮೋಹ."[೯] ಇವುಗಳು ತ್ರಿವಿಧಗಳಿಗೆ ದೋಷ ತರುವಂತಹ ಪಂಚ ಇಂದ್ರಿಯಗಳ ರಾಸಾಯನಿಕ ಕ್ರಿಯೆಯೂ ಇವುಗಳಿಗೆ ಕಾರಣ, ಇವುಗಳ ಬಂಧನದಲ್ಲಿ ಕಾಯ ಸಾಯುತ್ತಿದೆ. ಈ ರೋಗ ನಿರೋಗವಾಗು ವದಕ್ಕೆ ನಾನು ಮೂರು ಬೇರ ತಂದೆ ಅವು ಗುರು, ಲಿಂಗ, ಜಂಗಮ ಗುರುವನ್ನು ಅಂಗದಲ್ಲಿ ಮರ್ದಿಸಿದೆ.ಲಿಂಗವನ್ನು ಆತ್ಮನಲ್ಲಿ ಮರ್ದಿಸಿದೆ. ಜಂಗಮನನ್ನು ಅರಿವಿನಲ್ಲಿ ಪಾನವ ಮಾಡಿದಾಗ ರೋಗ ಕಳೆದು ಹೋಗುತ್ತದೆ ಇದಕ್ಕೆ ಮತ್ತೆ ಔಷಧದ ಅವಶ್ಯಕತೆ ಇರುವುದಿಲ್ಲ. ಮರಳಶಂಕರ ಪ್ರಿಯ ಸಿದ್ದರಾಮೇಶ್ವರಲಿಂಗ ಸಾಕ್ಷಿಯಾಗಿ ಎಂದು ವೈದ್ಯ ಸಂಗಣ್ಣ ತಿಳಿಸಿದ್ದಾರೆ.

ಈ ವಚನದಲ್ಲಿ ತ್ರಿದೋಷವೆಂಬ ಬಹಿರಂಗ ಕ್ರಿಯೆಗಳನ್ನು ಹೇಳುತ್ತಾ ತನು ಮನ ಧನವೆಂಬ ಮೂರು ಅಂಶಗಳ ಕುರಿತು ಹೇಳುತ್ತಾನೆ. ಇವುಗಳಿಗೆ ಅನುಪಾನವಾಗಿ ನಮ್ಮಲ್ಲೇ ಅಡಗಿರುವ ಆಂತರಂಗಿಕ ಗುರು, ಲಿಂಗ, ಜಂಗಮನನ್ನು ಅರಿವಿನ ಮೂಲಕ ಅರಿತುಕೊಳ್ಳುವ ಅಂತಃರಂಗ ಚಿಕಿತ್ಸೆಯ ಬಗ್ಗೆಯೂ ಹೇಳುತ್ತಾನೆ. "ದೇಹದಲ್ಲಿ ಅಂಗಗಳ ಸಹಾಯವನ್ನು ಬಿಟ್ಟು ಮನಸ್ಸು ವಿಶೇಷವಾದ ಕೆಲಸ ಮಾಡುತ್ತದೆ. ಜ್ಞಾನ, ವಿಜ್ಞಾನ,

ಭಾವನಾತ್ಮಕ ವಿಷಯಗಳಲ್ಲಿ ಮನಸ್ಸಿನ ಪಾತ್ರ ಮುಖ್ಯವಾಗಿದೆ. ಇದನ್ನೆಲ್ಲ ತಿಳಿಯುವ ಪ್ರಯತ್ನ ಪುರಾತನ ಕಾಲದಿಂದ ನಡೆದೇ ಇದೆ."[೧೦] ಸಾಮಾನ್ಯವಾಗಿ ಮನುಷ್ಯ ಬದುಕಿನ ಬಹಿರಂಗ ಅಸ್ಥಿರತೆಗಿಂತಲೂ ಆಂತರಿಕವಾಗಿ ಅಸ್ಥಿರಗೊಂಡರೆ, ಹೆಚ್ಚು ತೊಂದರೆಗಳನ್ನು ಕಷ್ಟಗಳನ್ನು ಅನುಭವಿಸುತ್ತಾರೆ. ಆದ್ದರಿಂದ ಆತ್ಮಶಕ್ತಿ ಬಹಳ ಮುಖ್ಯವಾಗಿ ವ್ಯಕ್ತಿಯಲ್ಲಿ ಇರಬೇಕು. ಸಮಸ್ಯೆಗಳು ನಮ್ಮನ್ನು ಕಾಡುತ್ತಲೇ ಇರುತ್ತವೆ. ಸಮಾಜದ ಅಚಾರ ವಿಚಾರಗಳು, ಸಾಮಾಜಿಕ ಘಟನೆಗಳು ನಮ್ಮನ್ನು ಬಾಧಿಸುತ್ತವೆ. 'ಈ ಸನ್ನಿವೇಷಗಳೇ ಸಮಸ್ಯೆಗಳು ನಮ್ಮ ಜ್ಞಾನದ ಕೊರತೆಯೇ ಇದಕ್ಕೆ ಕಾರಣ' ಆದ್ದರಿಂದ ನಮ್ಮಲ್ಲಿನ ಅರಿವನ್ನು ನಾವು ತಿಳಿದುಕೊಳ್ಳಬೇಕೆಂದು ವೈದ್ಯ ಸಂಗಣ್ಣ ತಿಳಿಸಿದ್ದಾರೆ.

"ಭಕ್ತಂಗೊಂದೆ ವಾಕ್ಯಸ ಬಾಳೆಗೊಂದೆ ಫಲ
ವಿರಕ್ತ ಬಿಟ್ಟುವ ಹಿಡಿದಲ್ಲಿ ಮತ್ತೆ ಮುಟ್ಟಿದಡೆ ಸತ್ತನಾಯ ಹಡುಹು
ಮತ್ತೆ ಸತ್ಕ್ರಿಯೆಯಲ್ಲಿ ನಡೆವವ ತನ್ನ ನಿತ್ಯ ನೇಮವ ತಪ್ಪಿ,
ಕೆಟ್ಟು ನಡೆದು, ಮತ್ತೆ ದ್ರವ್ಯದ ಕೊಟ್ಟು,
ಭಕ್ತರೊಡೆಯರಲ್ಲಿ ತಪ್ಪ ಪರಿಹರಿಸಿಕೊಂಡಿಹೆನೆಂದು
ಬಹಮಿಟ್ಟೆಯ ಭಂಡರ ಕಂಡಡೆ,
ಮರುಳ ಶಂಕರ ಪ್ರಿಯ ಸಿದ್ದರಾಮೇಶ್ವರ
ಲಿಂಗವಾಯಿತ್ತಾದಡೂ ಒಡಗೂಡಲೊಲ್ಲೆ."

[ಸಂ.ವ.ಸಂ–೪ ವ.ಸಂ–೧೨೩]

ಭಕ್ತಂಗೆ ಒಂದೇ ವಾಕ್ಯ ಬಾಳೆಗೊಂದೆ ಫಲ ಎನ್ನುವ ವಚನದ ಮೊದಲ ಸಾಲು ಇದರಲ್ಲಿ ಭಕ್ತನಾದವನು ಒಂದೇ ಮಾತಿನ ಮೇಲೆ ನಿಂತಿರಬೇಕು ಹೇಗೆಂದರೆ, ಬಾಳೆಗೊಂದೆ ಫಲವಿರುವ ಹಾಗೆ ಹೇಳಿದ ಮಾತನ್ನು ಉಳಿಸಿಕೊಳ್ಳದಿದ್ದರೆ ಸತ್ತ ನಾಯನ್ನು ತಿಂದಹಾಗೆ. ಒಳ್ಳೆಯ ಕೆಲಸ ಕಾರ್ಯಗಳನ್ನು ತೊಡಗಿಕೊಂಡು ಉತ್ತಮನೆನಿಸಿಕೊಂಡವನು ತನ್ನ ನಿತ್ಯ ಕೆಲಸವನ್ನು ಮಾಡದೆ ತಪ್ಪಿನಡೆದಲ್ಲಿ ಕೆಟ್ಟು ಹೋಗುತ್ತಾನೆ. ಆತ ಎಷ್ಟೇ ಹಣ ಕೊಟ್ಟು ತನ್ನ ತಪ್ಪನ್ನು ಅರಿತರು ಅವನ ಕೆಟ್ಟ ಬುದ್ಧಿಯನ್ನು ಕ್ಷಮಿಸುವುದು. ಇದನ್ನು ಒಂದು ಗಾದೆಯಲ್ಲಿ ಕಾಣುತ್ತೇವೆ. 'ಅಡಿಕೆಯಲ್ಲಿ ಹೋದ ಮಾನ, ಆನೆ ಕೊಟ್ಟರು ಬರುವುದಿಲ್ಲ' ಎಂಬುದು ಎಷ್ಟು ನೈಜ ಸತ್ಯವನ್ನು ತಿಳಿ ಹೇಳುತ್ತದೆ. ಇಂತಹ ತಪ್ಪಿ ನಡೆದು ದ್ರವ್ಯದ ಕೊಟ್ಟು ಸರಿಪಡಿಸಿ ಕೊಂಡೆನೆಂದಡೆ ಮರುಳ ಶಂಕರನೂ ಸಹ ಮೆಚ್ಚನು.

ಭಕ್ತನಾದವನು ಸದಾಚಾರದಲ್ಲಿ ನಡೆಯುತ್ತಾ ಲಿಂಗ ಜಂಗಮರು ಒಂದೇ ಭಾವನೆಯಿಂದ ಕಂಡು ಮನಸ್ಸಿಗೂ ಮೀರಿ ಭಾವಲಿಂಗದ ಪೂಜೆಯಲ್ಲಿ ಪರಿಣಾಮವನ್ನು ಅನುಭವಿಸತಕ್ಕದ್ದು. ಭಕ್ತನು ಬಾಳೆ ಹಣ್ಣಿನಂತೆ ಇರಬೇಕು. ಬಾಳೆಹಣ್ಣು ಎತ್ತ ನೋಡಿದರೂ ಮೆತುವೇ, ಒಳಗೆ ದಿಂಡಿಲ್ಲ, ಓಟೆಯಿಲ್ಲ, ಗುರುಲಿಂಗ ಜಂಗಮದ ದಾಸೋಹದಲ್ಲಿ ತನು, ಮನ, ಧನಗಳನ್ನು ಎತ್ತ ಒತ್ತಿ ಪರೀಕ್ಷಿಸಿದರೂ ಸುಲಭವಾಗಿ ಸರ್ವಾರ್ಪಣವಾಗಿ ಪರಿಣಮಿಸಬೇಕು. ಅವರ ಸ್ವೀಕಾರಕ್ಕೆ ಯಾವ ಭಾವವು ಕಠಿಣವಾಗಿ ಇರಬಾರದು. ಬೆಲ್ಲದಚ್ಚನ್ನು ಎತ್ತ ರುಚಿ ನೋಡಿದರೂ ಸಿಹಿಯೇ ಕಾಣುವಂತೆ ಎಲ್ಲ ಕರಣಗಳೂ ಗುರು, ಲಿಂಗ, ಜಂಗಮ ಸೇವೆಯಲ್ಲಿ ಅಮೃತವಾಗಿ ಪರಿಣಮಿಸ ಬೇಕು. ಹಣ್ಣುಗಳೊಳಗೆ ಶ್ರೇಷ್ಟವಾದ ಮಾವಿನ ಹಣ್ಣಿನಂತೆ ಭಕ್ತನಾದವನು ಶ್ರೇಷ್ಟವಾಗಿ, ಎಲ್ಲರಿಗೆ ಬೇಕಾದವನಾಗಿ, ಶಿವತತ್ವ ವೃಕ್ಷವನ್ನಾಗಿ ಮಾಡಬಲ್ಲ, ಚೈತನ್ಯವುಳ್ಳವನಾಗಿ ಪರಿಣಾಮ ಹೊಂದತಕ್ಕದ್ದು. ಗುರುಲಿಂಗ ಜಂಗಮರಿಗೆ ವಂಚನೆ ಮಾಡದೆ, ಸ್ವಾರ್ಥಾದಿ ತನುಗುಣಗಳನ್ನು ಒಲಿಸಿಕೊಳ್ಳದೆ, ಸತ್ಕ್ರಿಯಾಚರಣೆಯೇ ರೂಪದಂತೆ ಭಕ್ತನು ನಡೆದುಕೊಳ್ಳಬೇಕು.

ಲಿಂಗ ಜಂಗಮ ಒಂದೇ ಭಾವದಲ್ಲಿ ಕಂಡು, ಜಂಗಮ ಎಂದರೆ 'ಜ್ಞಾನರೂಪು' ಭಕ್ತರ ಅನುಗ್ರಹಾರ್ಥವಾಗಿ ಶಿವನು ಜಂಗಮವಾಗಿ ಬರುತ್ತಾನೆ. ಆದುದರಿಂದ ಲಿಂಗ ಜಂಗಮರಿಗೆ ಅಭೇದ, ಜ್ಞಾನೋದಯವಾಬೇಕಾದರೆ 'ಜಂಗಮ ದಾಸೋಹ' ಅವಶ್ಯಕ. ಒಂದು ರೀತಿಯಲ್ಲಿ ಲಿಂಗಕ್ಕಿಂತ ಜಂಗಮವೇ ಹೆಚ್ಚು ಜಂಗಮ ಸಂತುಷ್ಟಿಯಾದರೆ ಲಿಂಗ ಸಂತುಷ್ಟಿಯಾಗುತ್ತದೆ. ಮತ್ತೊಂದು ರೀತಿಯಲ್ಲಿ ಲಿಂಗ ವೃಕ್ಷಕ್ಕೆ ಜಂಗಮವೇ ಬೇರು. 'ತಳಕ್ಕೆ ನೀರೆರೆದರೆ ಮೇಲೆ ಪಲ್ಲವಿಸಿತ್ತು ನೋಡಾ.' ಜ್ಞಾನದಿಂದಲ್ಲದೆ ಲಿಂಗದ ಕಳೆ ಪ್ರಜ್ವಲಿಸದು ಆದ್ದರಿಂದ ಜಂಗಮ ಪೂಜೆಯನ್ನು ಮಾಡಬೇಕು. ಜಂಗಮ ಪ್ರಸಾದ ಪಾದೋದಕಗಳನ್ನು ಸ್ವೀಕರಿಸಬೇಕು."[೧೧]

ಭಕ್ತನಾದವನು ಹೇಗೆ ಇರಬೇಕು ಭಕ್ತನಿಗೆಇರಬೇಕಾದ ಮುಖ್ಯ ಲಕ್ಷಣಗಳನ್ನು ಕುರಿತು ಹೇಳುತ್ತಾನೆ.

"ಭಕ್ತನಾದಡೆ ಬಾಳೆಯ ಹಣ್ಣಿನಂತಿಬೇಕು.

ಭಕ್ತನಾದಡೆ ಬೆಲ್ಲದ ಕುಳ್ಳಿಯಂತಿರಬೇಕು.

ಭಕ್ತನಾದಡೆ ಮಾವಿನ ಫಲದಂತಿರಬೇಕು.

ಇಂತಪ್ಪಾತನೆ ಸದ್ಭಕ್ತ"

ಎಂದು ಒಬ್ಬ ಶರಣ ಭಕ್ತನ ಮಹತ್ವವನ್ನು ತಿಳಿಸುತ್ತಾನೆ. ತಾನು ದೀಕ್ಷೆಯನ್ನು ಪಡೆಯುವ ಸಂದರ್ಭದಲ್ಲಿ ಇಷ್ಟಲಿಂಗವನ್ನು ಬಿಟ್ಟು ತನ್ನ ಸಂಸಾರದ ಕಡೆ ಗಮನ ಹರಿಸುವುದಿಲ್ಲ. ಏಕೆಂದರೆ ಇಷ್ಟಲಿಂಗವೇ ಪರದೈವ. ಬ್ರಹ್ಮ ರಂಧ್ರದಲ್ಲಿ ದೀಕ್ಷೆಯ ಗುರು ಇರುತ್ತಾನೆ. ಆತ ಆತ್ಮಕ್ಕೆ ಭಾವಲಿಂಗವನ್ನಾಗಿ, ಮನಸ್ಸಿಗೆ ಪ್ರಾಣಲಿಂಗವನ್ನಾಗಿ, ದೇಹಕ್ಕೆ ಇಷ್ಟಲಿಂಗವನ್ನಾಗಿ ಮೂಡಿ ಕೊಟ್ಟಿರುವಾಗ ಬೇರೆ ಸ್ಥಾವರಲಿಂಗದ ಹಂಗೇಕೆ? ಇಷ್ಟಲಿಂಗವನ್ನು ಯಾವಾಗಲೂ ಬಿಡಬಾರದು. ಇದು ಭಕ್ತನಾದವನ ಮುಖ್ಯ ಕಾರ್ಯವಾಗಿದೆ ಎಂಬ ವಿಷಯವನ್ನು ಎಲ್ಲಾ ವಚನಕಾರರು ಪ್ರತಿಪಾದಿಸುತ್ತಾರೆ ವೈದ್ಯ ಸಂಗಣ್ಣನೂ ಸಹ ಅದೇವಿಷಯವನ್ನು ಹೇಳುತ್ತಾ ಭಕ್ತ ತಾನು ಆಡಿದ ಮಾತನ್ನು ಎಂದೂ ತಪ್ಪಬಾರದು. ಆತ ಎಂದಾದರೂ ತಪ್ಪಿದರೆ ಸತ್ತ ನಾಯಿಯನ್ನು ತಿಂದಂತೆ ಆತ ಎಷ್ಟೇ ಹಣ ಕೊಟ್ಟರು ತಾನು ಮಾಡಿದ ತಪ್ಪನ್ನು ತಿದ್ದಿಕೊಳ್ಳಲು ಸಾಧ್ಯವಿಲ್ಲ. ಆದ್ದರಿಂದ ಭಕ್ತನಾದವನು ತನ್ನ ಅಂತರಂಗದ ಅರಿವನ್ನು ಬೇಗ ಅರಿತುಕೊಳ್ಳಬೇಕು. ಇಲ್ಲಿ ಭಕ್ತನಾದವನು ಒಬ್ಬ ವೈದ್ಯನೂ ಹೌದು, ರೋಗಿಯೂ ಹೌದು ಅದನ್ನು ತಿಳಿದು ವೈದ್ಯನಾದವನು ರೋಗಿಗೆ ಯಾವ ರೀತಿ ಚಿಕಿತ್ಸೆ ಮಾಡಬೇಕೆಂದು ಅರಿತುಕೊಳ್ಳಬೇಕು. ಆ ಅರಿವು ಆತನಿಗೆ ಬಂದಾಗ ಅರಿವೇ ಗುರುವಾಗುತ್ತದೆ. ಅರಿವೇ ಗುರುವಾದವನಿಗೆ ಶೋಕ ಎನ್ನುವುದು ಇರುವುದಿಲ್ಲ. ಭಕ್ತನನ್ನು ಕುರಿತು ಅಲ್ಲಮ ಪ್ರಭು ಒಂದು ವಚನದಲ್ಲಿ ಈ ರೀತಿ ಹೇಳುತ್ತಾನೆ.

"ಬೇಡದ ಮುನ್ನವೆ ಮೂಡಬಲ್ಲಡೆ ಭಕ್ತಿ

ಬೇಡುವನೆ ಲಿಂಗ ಜಂಗಮವು?

ಬೇಡುವವರಿಗೆಯೂ ಬೇಡಿಸಿಕೊಂಬುವರಿಗೆಯೂ

ಪ್ರಸಾದವಿಲ್ಲ ಗುಹೇಶ್ವರಾ".

ಭಕ್ತನೆಂದರೆ ಬೇಡದ ಮುನ್ನ ಮಾಡ ಬಲ್ಲಡಾತ ಭಕ್ತ. ಈ ಭಕ್ತ ತನುವ ಗುರುವಿಂಗಿಕ್ಕಿ ಗುರುವಾದಾತ. ಮನವ ಲಿಂಗಕಿಕ್ಕಿ ಲಿಂಗವಾದಾತ. ಧನವ ಜಂಗಮಕಿಕ್ಕಿ ಜಂಗಮವಾದಾತ. ಇಂತಿ ತ್ರಿವಿಧದ ತ್ರಿವಿಧಕಿಕ್ಕಿ ಸದ್ಗುರು ಕಪಿಲಸಿದ್ಧ ಮಲ್ಲಿಕಾರ್ಜುನ ನಿಮ್ಮ ಶರಣರೆಲ್ಲರಿಗೂ ಗುರುವಾದನಯ್ಯ ಬಸವಣ್ಣ ಭಕ್ತನಾಗಿ ಬೇಡದ ಮುನ್ನ. ಲಿಂಗ ಜಂಗಮರಿಗೆ ಅರ್ಪಿತ ಮಾಡುವುದು, ಏನನ್ನು ಅರ್ಪಿತ ಮಾಡುವುದು? ತನು ಮನ ಧನ ಅರ್ಪಿತ ಮಾಡುವುದು. ಇವು ಮೂರನ್ನು ಲಿಂಗಾಂಗ ಸಮರಸ ಜ್ಞಾನಕ್ಕಾಗಿ ಅರ್ಪಿತ ಮಾಡುವುದು ಸಮ್ಯಜ್ಞಾನಕ್ಕಾಗಿ ಅರ್ಪಿತ ಮಾಡುವುದು.ಅರ್ಪಿತ ಮಾಡಿದಲ್ಲಿ ಇಲ್ಲದುದು ಇಲ್ಲವಾಗಬೇಕು. ಇದ್ದ ಪರತತ್ವ ಬೆಳಗಬೇಕು. ಇಲ್ಲದ ಮರವು ಇಲ್ಲವಾಗಬೇಕು, ಇಲ್ಲದ ಮಾಯಾರೂಪಿ ತೋರಿಕೆ ಇಲ್ಲವಾಗಬೇಕು. ಇಲ್ಲದ ತನು ಮನ ಧನ ಇಲ್ಲವಾಗಿ, ಇರುವ ಜ್ಞಾನದ ಅರಿವು ತಾನಾಗಬೇಕು. ಲಿಂಗ ಜಂಗಮವೆಂಬಿವು ತನ್ನರಿವಿನ ಅರಿವಾಗಬೇಕು.

ಇದಲ್ಲದೆ ನಿರಂತರವಾಗಿದ್ದ ತೆರೆಹಿಲ್ಲದ ಜ್ಞಾನ ಪ್ರಸಾದ ತನ್ನದಾಗಿ ಪ್ರಜ್ವಲಿಸಬೇಕು".[೧೪] ಇದು ಅಲ್ಲಮ ಪ್ರಭುವಿನ ವಚನಗಳ ಇಂಗಿತ ಮತ್ತು ಭಕ್ತಿಯಲ್ಲಿ ಬಸವಣ್ಣ ಹೀಗೆ ಇದ್ದ ಎಂದು ಹೇಳುತ್ತಾರೆ. ಎಲ್ಲ ಶರಣರೂ ಬಸವಣ್ಣನ ಕಾಲು ಹಾದಿಯಲ್ಲಿ ಬಂದವರೆ ವೈದ್ಯ ಸಂಗಣ್ಣನೂ ಸಹ ಬಸವಣ್ಣನವರ ಶರಣಾಗಿದ್ದನು ಬಹಿರಂಗ ಮತ್ತು ಅಂತರರಂಗ ಶುದ್ದಿಯನ್ನು ಮಾಡುವ ಈತನ ವಚನಗಳಲ್ಲಿ ಮುಖ್ಯವಾಗಿ ಈ ಕೆಳಗಿನ ವಚನವನ್ನು ಕಾಣಬಹುದು.

ಹೊರನಾಳ ಎಂಟು ಕೋಟಿ, ಒಳನಾಳ ನೂರೆಂಟು.

ಹೊರದ್ವಾರ ಒಂಬತ್ತು, ಒಳದ್ವಾರ ಸರ್ವಾಂಗಮಯ.

ಇಂತೀ ಪಂಚತತ್ವ, ಅಷ್ಟಗುಣಂಗಳು ಕೂಡಿ,

ಘಟ್ಟಿಗೊಂಡ ತನು ಶುಕ್ಲ ಶೋಣಿತ ಮಜ್ಜೆ ಮಾಂಸ

ಎಲುವು ಸರ ಚರ್ಮ ರೋಮ,

ಇಂತೀ ಅಷ್ಟ ಗುಣಂಗಳ ಕಷ್ಟೋತ್ತರದಲ್ಲಿ ಸಿಕ್ಕಿದ ಅತ್ಮಂಗೆ,

ಇಂದ್ರಿಯಂಗಳ ರೋಗ ವಿಡಿದು ಬಂದ ಮೋಕ್ಷ ಕರ್ಮಂಗಳೆಂಬ

ಶೀತ ಜ್ವರ ತಾಪಂಗಳಲ್ಲಿ ವ್ಯವಹರಿಸುವ ಆತ್ಮಂಗೆ,

"ನಾನೊಂದು ನಿಹಿತದ ಮದ್ದ ಕಂಡೆ

ಅದು ಅರೆವಡೆ ಅಸಾಧ್ಯ", ಸುಮ್ಮನೆ ಮೇಲವಡೆ ಸವೆಯದು,

ದೃಷ್ಟಿ ನಟ್ಟು ಮುಚ್ಚಿರಲಿಕ್ಕಾಗಿ ರೋಗ ರುಜೆ ಬಚ್ಚಬಯಲು,

ಮರುಳಶಂಕರ ಪ್ರಿಯ ಸಿದ್ದರಾಮೇಶ್ವರ ಲಿಂಗವನರಿಯಲಾಗಿ"

(ಸಂ.ವ.ಸಂ –೪–ವ.ಸಂ–೧೨೭)

ಮಾನವನ ದೇಹದಲ್ಲಿ ಹೊರನಾಳ ಎಂಟು ಕೋಟಿ.ಒಳನಾಳ ನೂರೆಂಟು, ಹೊರದ್ವಾರಗಳು ಒಂಬತ್ತು, ಒಳದ್ವಾರ ಸರ್ವಾಂಗವೂ ಆಗಿದೆ. ಈ ಎಲ್ಲ ನಾಳಗಳಲ್ಲೂ ಪಂಚತತ್ವಗಳು ಹರಿದಾಡುತ್ತಿವೆ. ಅಷ್ಟ ಗುಣಂಗಳು ಕೂಡಿ ನಮ್ಮ ದೇಶ ಮಾಂಸ, ಮಜ್ಜೆ, ಶುಕ್ಲಶೋಣಿತ, ರೋಮ, ಚರ್ಮಗಳಿಂದ ಇಂತೀ ಅಷ್ಟ ಗುಣಂಗಳು ಭಕ್ತಿ, ಹಸಿವೆ, ಕ್ರೋಧ, ದ್ವೇಷ, ನಿದ್ರೆ, ಗಮನ, ಧರ್ಮ, ಶೀಲ ಮತ್ತು ವಿಷಯಾಭಿರುಚಿ ಎಂಬ ಗುಣಗಳು ನಮ್ಮ ದೇಹದಲ್ಲಿ ಜಾಗೃತಗೊಳ್ಳುತ್ತವೆ. ಇವುಗಳಿಂದ ಆತ್ಮಕ್ಕೆ ಇಂದ್ರಿಯ ರೋಗ ಹಿಡಿದು ಬಂಧನದಲ್ಲಿದೆ ಇದಕ್ಕೆ ಮೋಕ್ಷ ಕರ್ಮಗಳು ಶೀತ, ಜ್ವರ, ತಾಪಂಗಳು ಬಂದು ಆತ್ಮ ಅದರಲ್ಲಿ ಮಿಂದು ತೊಳಲುತ್ತಿದೆ. ಇದಕ್ಕೆ ನಾನೊಂದು ನಿಹಿತದ ಮದ್ದನ್ನು ಕಂಡುಕೊಂಡೆ ಅದನ್ನು ಅರೆತುಕೊಳ್ಳಲು ಅಸಾಧ್ಯ, ಸುಮ್ಮನೆ ಅದನ್ನು ಪದೇಪದೇ ನೆನೆಸಿಕೊಂಡರು ಅದು ಅರ್ಥಕ್ಕೆ ಬರುವುದಿಲ್ಲ. ಇದಕ್ಕೆ ಗಮನವಿಟ್ಟು ಪಂಚೇಂದ್ರಿಯಗಳು ಮುಚ್ಚಿರಲು ರೋಗ ರುಜೆ ಹೊರಟು ಹೋಗುತ್ತದೆ. ತನ್ನನ್ನು ತಾನು ಅರಿತುಕೊಂಡಾಗ ರೋಗವು ಬಟ್ಟ ಬಯಲಾಗುತ್ತದೆ.

ಪಂಚೇಂದ್ರಿಯಗಳ ಕ್ರಿಯೆಯಿಂದ ತನ್ನ ಕೆಲಸಗಳಿಗೆ ಅಡ್ಡಿಯಾಗುತ್ತಿದೆ ಅವುಗಳನ್ನು ಪಂಚ ವೈದ್ಯರಾಗಿ(ಭಕ್ತರಾಗಿ) ಮಾಡು ಎಂದು ಬಸವಣ್ಣ ಒಂದು ವಚನದಲ್ಲಿ ಹೇಳುತ್ತಾರೆ.

"ಆಸೆ, ಆಮಿಷ, ತಾಮಸ ಹುಸಿ, ವಿಷಯ

ಕುಟಿಲ ಕುಹಕ, ಕ್ರೋಧ, ಕ್ಷುದ್ರ, ಮಿಥ್ಯೆ

ಇವನೆನ್ನ ನಾಲಿಗೆಯ ಮೇಲಿಂದತ್ತ ತೆಗೆದು ಕಳೆಯಯ್ಯಾ,

ಅದೇಕೆಂದಡೆ; ನಿಮ್ಮತ್ತಲೆನ್ನ ಬರಲೀಯವು

ಇದು ಕಾರಣ ಇವೆಲ್ಲವ ಕಳೆದು

ಎನ್ನ ಪಂಚೈವರ ಭಕ್ತರ ಮಾಡು ಕೂಡಲಸಂಗಮದೇವಾ"

ದೇಹ ಜ್ಞಾನದ ಭಂಡಾರ! ಆಸೆ, ಆಮಿಷ, ತಾಮಸ, ಹುಸಿ, ವಿಷಯ, ಕುಟಿಲ, ಕುಹಕ, ಕ್ರೋಧ, ಕ್ಷುದ್ರ, ಮಿಥ್ಯೆ ಎಂಬ ದುರ್ಗುಣಗಳು ದೇಹದ ಸದ್ಗುಣವನ್ನು ಅಡಗಿಸುತ್ತದೆ. ದುರ್ಗುಣಗಳು ದೇಹದ ಅರಿವಿನ ಸೂರ್ಯನನ್ನು ಮೋಡದಂತೆ ಮುಸುಕುತ್ತವೆ.

ಅರಿವಿನ ಸತ್ಯದ ನಾಲಿಗೆಯ ಮೇಲೆ ಆಸೆ, ಆಮಿಷ, ತಾಮಸ, ಹುಸಿ ವಿಷಯಾದಿಗಳು ನರ್ತನ ಮಾಡುತ್ತವೆ, ಕುಟಿಲತೆಯಿಂದ ಕುಹಕತನದಿಂದ ಕ್ರೋಧದಿಂದ,ಕ್ಷುದ್ರತೆಯಿಂದ ಸುಳ್ಳಿನಿಂದ ದೇಹ ವಿಷಯ

ಸುಖವನ್ನು ಮತ್ತೆ ಮತ್ತೆ ಪಡೆಯಲು ಬಯಸುತ್ತದೆ.ಅರಿವಿನ ದೇಹದಲ್ಲಿ ಮನೆ ಮಾಡಿದ ಮನದ ದುರ್ಗುಣಗಳನ್ನು ದೇಹದ ಅರಿವು ಮಾತ್ರ ಕಳೆಯಬಲ್ಲದು. ನೋಡುವ ಕಣ್ಣಿನಲ್ಲಿ ಅರಿವೆಂಬ ಗುರುವಿದ್ದಾನೆ. ಮನವೆಂಬ ಶಿಷ್ಯನೂ ಇದ್ದಾನೆ. ಮನವೆಂಬ ಶಿಷ್ಯ ಕಣ್ಣಿನಲ್ಲಿ ಬೆರೆತು ಆಭರಣ ನೋಡಿ ಖರೀದಿಸುತ್ತಾನೆ. ಸಾಧ್ಯವಾಗದಿದ್ದರೆ ಕಳುವು ಮಾಡುತ್ತಾನೆ. ದಕ್ಕದಿದ್ದರೆ ಕೊಲೆ ಮಾಡಿ ಪಡೆಯುತ್ತಾನೆ. ಹಲ್ಲೆ ಅತ್ಯಾಚಾರವೆಸಗುತ್ತಾನೆ. ಖರೀದಿಸಿದರೆ ದೇಹಕ್ಕೆ ಶ್ರೀಮಂತನ ಪಟ್ಟ, ಸಾಧ್ಯವಾಗದಿದ್ದರೆ ಕೊಲೆಗಡುಕ ಕಳ್ಳ, ಹಲ್ಲೆ, ಕ್ರೋರ ಅತ್ಯಾಚಾರಿಯ ಪಟ್ಟ ಮನಕ್ಕೆ ತಿಳಿಯುವುದೇ ಇಷ್ಟು.

ಮನ ನೋಡಿದರೆ ಅಭರಣ ಮನ ಅರಿವಿಗೆ ಭಕ್ತಿ ಮಾಡಿ ಆ ಅರಿವಿನಲ್ಲಿ ಸಂಗಮವಾಗಿ ನೋಡಿದರೆ ಲೋಹ!ಹೇಗಿದೆ ಅರಿವೆಂಬ ಗುರು ಬಸವಣ್ಣನ ಚಮತ್ಕಾರ ಮನದಲ್ಲಿ ಅಡಗಿದ ಆಸೆ, ಆಮಿಷ, ತಾಮಸ, ಹುಸಿ ವಿಷಯ, ಕುಟಿಲ, ಕುಹಕ, ಕ್ರೋಧ, ಕ್ಷುದ್ರ, ಮಿಥ್ಯೆ ಗುಣಗಳೆಲ್ಲ ಅರಿವಿನಲ್ಲಿ ಕಳೆದು ಹೋದವು. ಮನ ಅರಿವೆಂಬ ಘನದಲ್ಲಿ ಬೆರೆತು ಘನಮನವಾಯಿತು”[೧೫] ಎಂದು ಬಸವಣ್ಣನವರು ತಿಳಿಸಿದ್ದಾರೆ.ಈ ವಿಷಯವನ್ನು ವೈದ್ಯ ಸಂಗಣ್ಣನ ವಚನದ “ಪಿಂಡ ಪ್ರಾಣ ಆರೋಗ್ಯಂಗಳ ಚಿಕಿತ್ಸೆಯನರಿದು ವೈದ್ಯವ ಮಾಡಬಲ್ಲಡೆ ಪಂಡಿತನಪ್ಪ, ಘಟತ್ರಯದ ಬೇಧವನರಿಡು ಮಾಡುವ ಕ್ರಮವೆಯಂಟೆಂದಡೆ” ಎಂಬ ವಚನದಲ್ಲಿ ಮನಸ್ಸು ಮತ್ತು ದೇಹಗಳ ಬೇಧವನ್ನು ಅರಿತು ವೈದ್ಯವನ್ನು ಮಾಡಬೇಕು.ಆಗ ಅರಿವಿನ ಜ್ಞಾನದ ಹಾದಿ ನಮ್ಮದಾಗುತ್ತದೆ ಎಂದು ಹೇಳಿದ್ದಾರೆ.

ವೈದ್ಯ ಸಂಗಣ್ಣನವರ ವಚನಗಳನ್ನು ಅಧ್ಯಯನಿಸುವಾಗ ಇವನು ವೈದ್ಯನಾಗಿ ಔಷಧಿ ಕೊಡುವುದಷ್ಟೇ ಅಲ್ಲದೆ ಭವರೋಗ ವೈದ್ಯನಾಗಿಯೂ ರೋಗಗಳಿಗೆ ಪರಿಹಾರ ಸೂಚಿಸುವುದು ಕಂಡು ಬರುತ್ತದೆ. ಒಬ್ಬ ವೈದ್ಯನಲ್ಲಿ ಆಧ್ಯಾತ್ಮ ಮತ್ತು ತಾತ್ವಿಕ ಚಿಂತನೆ ಎರಡೂ ಇರುವುದು ಒಂದು ವಿಶೇಷ. ವೈದ್ಯ ಸಂಗಣ್ಣ ಒಬ್ಬ ಸಂಗಜೀವಿಯಾಗಿ ಇತರರ ಕಷ್ಟಕ್ಕೆ ಸ್ಪಂದಿಸುತ್ತಾ ಪರಿಹಾರವನ್ನು ಅವರಲ್ಲೇ ಹುಡುಕುವಂತೆ ಸಲಹೆ ಕೊಡುತ್ತಿದ್ದ. ಬಹಿರಂಗ ಚಿಕಿತ್ಸೆಯೊಂದಿಗೆ ಅಂತರಂಗ ಚಿಕಿತ್ಸೆಯನ್ನು ಮಾಡಬೇಕು. ಬಹಿರಂಗ ಹೆಚ್ಚು ಮುಖ್ಯವಾಗುತ್ತದೆ ಬಹಿರಂಗ ಸ್ವಸ್ಥ್ಯವಾಗಿದ್ದರೆ ಅಂತರಂಗ ಚಿಕಿತ್ಸೆಯೂ ಸ್ವಸ್ಥ್ಯವಾಗಿರುತ್ತದೆ. ಬಹಿರಂಗ ಅಸ್ವಸ್ತವಾಗಿದ್ದರೆ ದೇಹದ ಮನಸ್ಸು ಸ್ವಸ್ಥ್ಯ ಕಳೆದುಕೊಳ್ಳುತ್ತದೆ. ಆದ್ದರಿಂದ ಎರಡರ ಸ್ವಸ್ಥ್ಯ ಕಾಪಾಡುವುದು ಪಂಚೇಂದ್ರಿಯಗಳಲ್ಲಿರುವ ವೈದ್ಯರಿಂದಲೇ ಸಾಧ್ಯ ಅದನ್ನು ತಿಳಿಸಿ ಕೊಟ್ಟವರು ವೈದ್ಯ ಸಂಗಣ್ಣ.

**ಕೊನೆ ಟಿಪ್ಪಣಿ:**


೧. ಬಿ.ಆರ್.ಹಿರೇಮಠ – ಸಂಕೀರ್ಣ ವಚನ ಸಂಪುಟ–೪ – ಪುಟ. ಸಂ–೩೫

೨. ರುದ್ರೇಶ್ ಗಂಗಾಧರ್ ಕಿತ್ತೂರ್ – ವಚನ ಜ್ಞಾನ ವಿಜ್ಞಾನ–ಪುಟ.ಸಂ–೧೧೩

೩. ಬಸವರಾಜ ಸ್ವಾಮಿ – ಜ್ಞಾನ ಭಂಡಾರಿ ಬಸವಣ್ಣ – ಪುಟ.ಸಂ–೨೭

೪. ಡಾ.ಎಸ್.ವಿದ್ಯಾಶಂಕರ – ವೀರಶೈವ ಪಾರಿಭಾಷಿಕ ಪದಕೋಶ.ಪುಟ.ಸಂ–೬೫,೬೬

೫. ಡಾ.ಎಸ್.ವಿದ್ಯಾಶಂಕರ – ವೀರಶೈವ ಪಾರಿಭಾಷಿಕ ಪದಕೋಶ. ಪುಟ.ಸಂ–೨೫೪

೬. ಡಾ.ಎಸ್.ವಿದ್ಯಾಶಂಕರ – ವೀರಶೈವ ಪಾರಿಭಾಷಿಕ ಪದಕೋಶ. ಪುಟ.ಸಂ–೨೦೮

೭. ೬. ಡಾ.ಎಸ್.ವಿದ್ಯಾಶಂಕರ – ವೀರಶೈವ ಪಾರಿಭಾಷಿಕ ಪದಕೋಶ. ಪುಟ.ಸಂ–೨೨೬

೮. ಶ್ರೀಮತಿ ಸುಮನ್ ಕೆ.ಚಿಪ್ಳೂಣ್‌ಕರ್ – ಮುದ್ರಾ ವಿಜ್ಞಾನ ಮತ್ತು ಆರೋಗ್ಯ.
ಪುಟ.ಸಂ–೧೮೬

೯. ಡಾ.ಎಸ್.ವಿದ್ಯಾಶಂಕರ – ವೀರಶೈವ ಪಾರಿಭಾಷಿಕ ಪದಕೋಶ.
ಪುಟ.ಸಂ–೭೧,೪೨೩

೧೦. ಗಜಾನನ ವಿಶ್ವೇಶ್ವರ ಶಾಸ್ತ್ರೀ – ಅಂಗ ಸಾಮುದ್ರಿಕ ಶಾಸ್ತ್ರ – ಪುಟ.ಸಂಖ್ಯೆ–೩

೧೧. ಎಂ.ಆರ್.ಶ್ರೀನಿವಾಸಮೂರ್ತಿ – ವಚನ ಧರ್ಮಸಾರ
ಪುಟ.ಸಂಖ್ಯೆ–೧೦೧,೧೦೨

೧೨. ಬಸವರಾಜ ಸ್ವಾಮಿ – ಗಗನ ಸಿದ್ಧಾಂತ – ಪುಟ ಸಂಖ್ಯೆ–೫

೧೩. ಬಸವರಾಜ ಸ್ವಾಮಿ – ಜ್ಞಾನ ಭಂಡಾರಿ ಬಸವಣ್ಣ – ಪುಟ ಸಂಖ್ಯೆ–೭೧, ೭೨

## ಅಧ್ಯಾಯ-೪

## ವೈದ್ಯ ಸಂಗಣ್ಣನ ವಚನಗಳಲ್ಲಿ ಕರ್ಮಯೋಗ ಮತ್ತು ಶಿವಯೋಗ

ವೈದ್ಯ ಸಂಗಣ್ಣನು ತಾನು ಮಾಡುವ ವೈದ್ಯ ಕಾಯಕವನ್ನೇ ಕರ್ಮಯೋಗವನ್ನಾಗಿ ಮಾಡಿ ಅರಿಷಡ್ವರ್ಗಗಳನ್ನು ನೀಗಿಸುವು ಕಾರ್ಯ ಮಾಡುತ್ತಿದ್ದಾನೆ. ತಾನು ಮಾಡುವ ಕಾರ್ಯದಲ್ಲಿ ಶಿವನನ್ನು ಕಾಣುವುದು ತಾನೇ ಶಿವನಾಗುವುದು ಈ ರೀತಿ ಚಿಕಿತ್ಸೆಯಲ್ಲಿ ತನ್ನನ್ನು ತೊಡಗಿಸಿಕೊಂಡಿದ್ದಾನೆ. ನಮ್ಮಲ್ಲೇ ಇರುವ ಶಿವನ ಸಿದ್ದಿಯನ್ನು ಗಳಿಸುವುದೇ ಕರ್ಮ ಯೋಗ ಎಂದು ತಿಳಿಸಿದ್ದಾರೆ ಸಿದ್ದಿಯನ್ನು ಪಡೆಯುವುದು ಅಂತರಂಗದ ಶಿವಯೋಗ ಮತ್ತು ಗೆಲ್ಲುವುದೇ ಬಹಿರಂಗದ ಕರ್ಮಯೋಗ ಎಂದು ವೈದ್ಯ ಸಂಗಣ್ಣ ತಿಳಿಸುತ್ತಾರೆ ಅಂತರಂಗ ಮತ್ತು ಬಹಿರಂಗದ ಸಿದ್ದಿಯೇ ಶಿವಯೋಗ.

**ಕರ್ಮಯೋಗ:-**

'ಸತ್ಯಂ ಶಿವಂ ಸುಂದರಂ' ಎಂಬ ವಾಕ್ಯವು ಸತ್ಯದಲ್ಲಿ ಶಿವನನ್ನು ಕಾಣಬೇಕು. ಆಗ ಶಿವನು ಸುಂದರವಾಗಿ ಕಾಣುತ್ತಾನೆ ಸತ್ಯ ಎನ್ನುವುದು ನಮ್ಮ ಅಂತರಂಗ ಮತ್ತು ಬಹಿರಂಗ ಎರಡನ್ನು ಒಳಗೊಂಡಿರುತ್ತದೆ. ಇವೆರಡರ ಅರಿವು ಸತ್ಯವಾಗಿ ಹೊರ ಹೊಮ್ಮುತ್ತದೆ. "ದೇವರು ಪ್ರಪಂಚದ ಸೃಷ್ಟಿಯನ್ನು ಆತ್ಮದ ಉದ್ಧಾರಕ್ಕಾಗಿಯೇ ಮಾಡಿದ್ದಾನೆ. ಮಲಗಳನ್ನು ನೀಗಿಕೊಳ್ಳುವುದಕ್ಕೆ ಇದು ಸಾಧನರಂಗ, ದೇವಲೋಕದವರಾದರೂ ಮನುಷ್ಯ ಲೋಕದಲ್ಲಿ ಮನುಷ್ಯರಾಗಿ ಜನ್ಮವೆತ್ತಿ ಇಲ್ಲಿಯ ಸಾಧನೆಯಿಂದ ನಿಜವನ್ನರಿಯ ಬೇಕಾಗಿದೆ"

"ಭೋಗ ಭೂಮಿಯ ಭೋಗ ತನುವಿನ

ಲಾಗದನುಪಮ ಸಿದ್ದಿ ಕರ್ಮೋ

ದ್ಯೋಗಭೂಮಿಯ ಕರ್ಮ ತನುವಿನಲಲ್ಲಿದದವಿಂದ

ಯೋಗ ಯೋಗ್ಯರು ಯೋಚಿಸುವ ಭೂ

ಭಾಗದೊಳು ಮಾನವ ಶರೀರಗ

ಳಾಗಿ ಸಾಧಿಸಿ ನಿಜವನದೆವರು ಗಿರಿಜೆ ಕೇಳೆಂದ"[೧]

ಕರ್ಮಯೋಗದ ಕುರಿತು ಈ ಮೇಲಿನ ವಚನದಲ್ಲಿ ಕಾಣಬಹುದು ಈ ಭೂಮಿ ಭೋಗದಿಂದ ಕೂಡಿದೆ ಇಲ್ಲಿ ಕರ್ಮೋದ್ಯೋಗ ಅಂದರೆ ತನ್ನ ಕಾಯಕದ ವ್ಯವಸಾಯ ಮಾಡಿ ಯೋಗ್ಯರಾಗಿ ಯೋಚಿಸಬೇಕು ಭೂಮಿಯಲ್ಲಿ ಮಾನವ ಶರೀರವನ್ನು ಹೊತ್ತ ಕಾಯ ನಿಜವನ್ನು ತಿಳಿದುಕೊಂಡು ಕರ್ಮ ಜೀವಿಯಾಗಿ ಬದುಕ ಬೇಕೆನ್ನುವುದು ಈ ವಚನದ ಆಶಯ.

"ಕರ್ಮಯೋಗದಲ್ಲಿ ಹೇಳುವ ಗುದ ಸ್ಥಾನವಾದ ಆಧಾರ ಚಕ್ರವನ್ನು ಬಿಡಬೇಕು ಸ್ವಾಧಿಷ್ಠಾನಿವಾದ ಲಿಂಗಸ್ಥಾನವನ್ನು ಬಿಡಬೇಕು. ಆ ಕರ್ಮಯೋಗಕ್ಕೆ ಸಲ್ಲುವ ಅನೇಕ ಬಂಧನಗಳನ್ನು ಅವರವರ ಆಸನಂಗಳಲ್ಲಿ ಚಲಿಸುವ ಪವನ ಪ್ರಕಾರಂಗಳನು... ಬಿಡುವುದು. ಕರ್ಮಯೋಗದಲ್ಲಿ ನಿಲ್ಲಬೇಕಾದರೆ ಕರ್ಮ ಮಲಗಳನ್ನು ಬೀಡಬೇಕು."[2] ಆಣವ ಮಾಯಾ, ಬಿಂದು, ಕರ್ಮ ಮತ್ತು ರೋಧ ಎಂಬ ಪಂಚಮಲಗಳಲ್ಲಿ ಒಂದಾದ ಕರ್ಮಮಲವನ್ನು ನೀಗಿಸಲು ಅರಿಷಡ್ವರ್ಗಗಳನ್ನು ಗೆಲ್ಲಬೇಕು. ಇವುಗಳಿಂದ ಎಲ್ಲವನ್ನು ಸಾಧಿಸಲು ಸಾಧ್ಯ ಎಂದು ವೈದ್ಯ ಸಂಗಣ್ಣ ತಿಳಿಸಿದ್ದಾರೆ.

"ಇಂತು ಐದು ನಾಡಿಗಳೊಳಗಾದ ಇಪ್ಪತ್ತೇಳು ನಾಡಿ, ಬಾಹ್ಯದಲ್ಲಿ ಆಡುವವು.

ಜೀವಗತಿಯಾಗಿ ಅಸ್ಥಿರನಾಳ ಮಧ್ಯದಲ್ಲಿ ಅಂತ್ಯನಾಡಿ.

ಆತ್ಮಚೇತನ ಅಸ್ಥಿಯೊಳಗಾದ ಸಂದುಸಂದಿನ ಮಜ್ಜೆಯ ಮಧ್ಯದಲ್ಲಿ ಸ್ವಪ್ನನಾಡಿ,

ಇಂತೀ ಉಭಯ ನಾಡಿ ಸುಷುಪ್ತಿಯ ಸುಷುಪ್ತಿಯಲ್ಲಿ

ಪರವಶನಾದ ಪರಬ್ರಹ್ಮ ನೋಡಾ,

ಮರುಳ ಶಂಕರ ಪ್ರಿಯ ಸಿದ್ದರಾಮೇಶ್ವರ ಲಿಂಗವು"

[ಸಂ.ವ.ಸಂ-೪-ವ.ಸಂ-೧೧೩]

ಪಂಚೇಂದ್ರಿಯ ನಾಡಿಗಳು ಇಪ್ಪತ್ತೇಳು ನಾಡಿಗಳಲ್ಲಿ ಆಡುವವು. ಇವ ಜೀವಗತಿಯಲ್ಲಿ ಆಡುವ ಕೊನೆಯನಾಡಿ ಆತ್ಮ ಚೇತನದ ಅಸ್ಥಿರತೆಯನ್ನು ಹೋಗಲಾಡಿಸುವ ಉಭಯನಾಡಿಗಳಲ್ಲಿ ಕಾರ್ಯ ನಿರ್ವಹಿಸುತ್ತದೆ. ಇದು ಅಷ್ಟವರ್ಣಗಳಲ್ಲಿ ನಡೆದಾಡುವ ನಾಡಿಗಳನ್ನು ಜ್ಞಾನದ ಮಾರ್ಗದಿಂದ ಕರ್ಮದಲ್ಲಿ ಅವುಗಳನ್ನು ತೊಡಗಿಸಬೇಕಾಗುತ್ತದೆ. ಕರ್ಮಯೋಗದಲ್ಲಿ ನಿಂದು ಕಾಯಕದಲ್ಲಿ ತೊಡಗಿದಾಗ ಶಿವ ಯೋಗವನ್ನು ಕಾಣಬಹುದು.

"ಷಟ್ಸ್ಥಲದಲ್ಲಿ ಕರ್ಮಯೋಗ ಭಕ್ತಿಯೋಗಗಳಿರುವಂತೆಯೇ ಜ್ಞಾನಯೋಗವೂ ಸೇರಿಕೊಂಡಿದೆ. ಆತ್ಮ ಸ್ವರೂಪವನ್ನು ತಿಳಿಯುವುದೇ ಜ್ಞಾನ. ಇದು ಗ್ರಂಥಗಳನ್ನು ಓದುವುದರಿಂದ ಬರೋದಿಲ್ಲ ಅದು ಅನುಭವದಲ್ಲಿ ಸಿಗುವಂತಹದ್ದು. ದೀಕ್ಷಾಕಾಲದಲ್ಲಿ ಗುರು 'ತತ್ತ್ವಮಸಿ' ಎಂದು ಭೋದೆ ಮಾಡಿ ಈ ಜ್ಞಾನಕ್ಕೆ ಅಂಕುರಾರ್ಪಣೆ ಮಾಡಿರುತ್ತಾನೆ. ಮುಂದೆ ಅದನ್ನು ಶಿಷ್ಯನು ತನ್ನಲ್ಲಿ ಕಂಡುಕೊಳ್ಳಬೇಕು.ಇದಕ್ಕೆ ಯೋಗ ಸಹಾಯ ಮಾಡುತ್ತದೆ. ಯಾವುದನ್ನು ಧ್ಯಾನಿಸಬೇಕು? ಯಾವುದನ್ನು ಸೇರಬೇಕು? ಎಂಬ ನಿಶ್ಚಯ ಜ್ಞಾನವಿಲ್ಲದಿದ್ದರೆ ಯೋಗ ಫಲಕಾರಿಯಲ್ಲ, ಆದ್ದರಿಂದ ಮೊದಲು ಅರಿವುಆನಂತರ ಅರಿವಿನ ಗುರು ಹಿಡಿದು ಯೋಗ ಹೀಗೆ ಜ್ಞಾನ ಮತ್ತು ಯೋಗ ಪರಸ್ಪರವಾಗಿ ಬಲಿಯುತ್ತ ಮಾಯಾಮೋಹಗಳನ್ನು ಜಯಿಸಿ "ತೆರಹಿಲ್ಲದ ಅರುಹು ತಾನಾಗಿ, ನೆರೆ ಅರುಹಿನೊಳು ನಿಬ್ಬೆರಗಾಗಿ" ಸಾಧಕನು ಪರಿಣಮಿಸುತ್ತಾನೆ"[೩] ಪ್ರತಿಯೊಬ್ಬ ವ್ಯಕ್ತಿಯೂ ಪ್ರಾಣವಿರುವವರೆಗೂ ಕರ್ಮವನ್ನು ಮಾಡಲೇ ಬೇಕು. ಇಂದ್ರಿಯಗಳು ತಂತಮ್ಮ ಕಾರ್ಯವನ್ನು ಮಾಡುತ್ತಲೇ ಇರುತ್ತವೆ. ಇಂದ್ರಿಯಗಳ ಕಾರ್ಯಗಳನ್ನು ನಿಲ್ಲಿಸುವುದು ತಪ್ಪು ಅವುಗಳ ಕಾರ್ಯವನ್ನೇ ಬಳಸಿ ನಾವು ಮುಕ್ತಿಯನ್ನು ಪಡೆಯುವುದು ಬುದ್ಧಿವಂತರ ಲಕ್ಷಣ. ಕರ್ಮಯೋಗದ ತಿರುಳು ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ಕಾಯಕ ಮಾಡುವುದು. ಆದುದ್ದರಿಂದ "ಕರ್ಮ ಮಾಡಬೇಕು, ಜ್ಞಾನ ಪಡೆಯಬೇಕು ವೈರಾಗ್ಯಗಳಿಸಬೇಕು, ಮುಕ್ತಿ ದೊರೆಯಬೇಕು. ಹೀಗೆ ಕರ್ಮಜ್ಞಾನ ವೈರಾಗ್ಯಗಳನ್ನು ಸಾಮರಸ್ಯದಿಂದ ಹೊಂದಿಸಿ, ಲಿಂಗತನುಲಿಂಗಮನ ಲಿಂಗಕರ್ಮಗಳಾಗಿ ಪರಿಣಾಮಗೊಳಿಸುವುದು ವಚನ ಧರ್ಮದಲ್ಲಿ ಮುಖ್ಯವಾದ ದ್ಯೇಯ, ಈ ದ್ಯೇಯ ಸಾಧನೆಯಲ್ಲಿ ಹೇಗೆ ತೊಡಕುಗಳು ಬರುತ್ತವೆ ಎಂಬುದನ್ನು ಅವುಗಳನ್ನು ಹೇಗೆ ದಾಟಬಹುದೆಂಬುದನ್ನು ಸಿದ್ದರಾಮನ ಜೀವನ ಚರಿತ್ರೆಯಿಂದ ತಿಳಿಯಬಹುದು"[೪] ಈತನು ಸಹ ಕರ್ಮಯೋಗದ ಸಿದ್ಧಿಯನ್ನು ಪಡೆಯಲು ಯಾವ ರೀತಿಯ ಸಾಧನೆ ಮಾಡಬೇಕು ಎಂಬುದನ್ನು ತಿಳಿಸಿಕೊಟ್ಟಿದ್ದಾರೆ.

**ಶಿವಯೋಗ:-**

137046

ಶಿವಯೋಗ ಎಂದರೆ ಸಾಕ್ಷಾತ ಶಿವನ ಸ್ವರೂಪವಾದ ಅರಿವನ್ನು ಸೇರುವದು

೧) ಶಿವನನ್ನು ಕೊಡುವುದು

೨) ಲಿಂಗಾಂಗ ಸಾಮರಸ್ಯ

**ಶಿವಯೋಗವು:** ಯೋಗ ಪಂಚಕಗಳಾದ ಮಂತ್ರಯೋಗ, ಲಯಯೋಗ, ಹಠಯೋಗ, ರಾಜಯೋಗ ಮತ್ತು ಶಿವಯೋಗ ಇವುಗಳಲ್ಲಿ ಒಂದಾಗಿದೆ. ಶಿವಸಂಬಂಧವಾದ ಜ್ಞಾನ, ಭಕ್ತಿ ಧ್ಯಾನ, ವ್ರತ ಮತ್ತು ಅರ್ಚನೆಗಳೆಂಬ ಐದು ವಿಷಯಗಳಿಂದ ಕೂಡಿದ ಯೋಗ.

**ಲಿಂಗಾಂಗ ಸಾಮರಸ್ಯ:** ಇದನ್ನು ಸಾಧಿಸಲು ಬೇಕಾದ ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧ್ಯಾನ, ಧಾರಣ ಮತ್ತು ಸಮಾಧಿ ಎಂಬ ಎಂಟು ಅಂಗಗಳು, ಯೋಗದ ಅಷ್ಟಾಂಗಗಳಿನುಗುಣವಾಗಿ ಶಿವಯೋಗದಲ್ಲಿರುವ

೧) ಸುಳ್ಳು, ಹಿಂಸೆ, ಪರದ್ರವ್ಯ, ಪರಸ್ತ್ರೀ, ಪರನಿಂದೆ- ಇವುಗಳನ್ನು ತ್ಯಜಿಸುವುದುಯಮಯೋಗ,

೨) ಸದಾಚಾರಗಳಿಂದ ಕೂಡಿದ್ದು ಶಿವಲಿಂಗಾರ್ಚನೆಯನ್ನು ಮಾಡುವುದು ನಿಯಮ ಯೋಗ.

೩) ಪದ್ಮಾಸನ, ಸಿದ್ಧಾಸನ. ಮುಂತಾದ ಆಸನಯೋಗ

೪) ರೇಚಕ, ಪೂರಕಗಳ ಭೇದವನ್ನು ತಿಳಿದುಕೊಂಡು, ಪ್ರಣವಗಳನ್ನುಚ್ಚರಿಸುತ್ತಾ ಲಿಂಗವನ್ನು ಸಂಬಂಧಿಸಿಕೊಂಡು ಪರಶಿವ ಧ್ಯಾನದಲ್ಲಿರುವುದು ಪ್ರಾಣಾಯಾಮ.ಇದರಿಂದ ನಮ್ಮ ದೇಹದ ಎಲ್ಲಾ ಅಂಗಾಂಗಗಳು ಕ್ರಿಯಾಶೀಲಗೊಂಡು ಬೇಗನೆ ಅವರು ಅರಿವು ಗುರಿಯನ್ನು ಮುಟ್ಟಲು ಸಾಧ್ಯವಾಗುತ್ತದೆ. ಪ್ರಾಣಾಯಾಮ ಮಾಡುವುದರಿಂದ ಜನರು ಹೆಚ್ಚು ಚೈತನ್ಯ ಶೀಲರಾಗಿರುಲು ಕಾರಣವಾಗುತ್ತದೆ.

೫) ಸರ್ವೇಂದ್ರಿಯಗಳನ್ನು ಅಂಕೆಯಲ್ಲಿಟ್ಟುಕೊಂಡು ಧರ್ಮಮಾರ್ಗದಲ್ಲಿರುವುದು ಪ್ರತ್ಯಾಹಾರ.

೬) ಕರಸ್ಥಲದ ಲಿಂಗವನ್ನು ಪರಮಾತ್ಮನೆಂದು ತಿಳಿದು, ಅದನ್ನು ಷಡ್ಚಕ್ರಗಳಲ್ಲಿ ಷಡ್ಲಿಂಗಗಳಾಗಿ ನೆಲೆಗೊಳಿಸಿ ಧ್ಯಾನಿಸುವುದು ಧ್ಯಾನಯೋಗ

೭) ಷಡ್ಲಿಂಗಗಳು ಷಡ್ಚಕ್ರಗಳಲ್ಲಿ ನೆಲೆಗೊಂಡುದರ ಪರಿಣಾಮವಾಗಿ ಭಾವಕರಣ, ಮನ, ಮುಂತಾದವುಗಳಲ್ಲಿ ಲಿಂಗಕಳೆಯು ಬೆಳಗಿ ಆಚರಣೆಗಳುಂಟಾಗುವ ಧಾರಣ ಯೋಗ.

೮) ಪರಂಜ್ಯೋತಿ ಸ್ವರೂಪವಾದ ಮಹಾಲಿಂಗದಲ್ಲಿ ಬೆರೆಯುವುದು ಸಮಾಧಿಯೋಗ – ಎಂಬ ಎಂಟು ಲಿಂಗ ಸಂಬಂಧವಾದ ಅಂಗಗಳು: ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧ್ಯಾನ, ಧಾರಣ, ಸಮಾಧಿ ಇವು ಯೋಗದ ಅಷ್ಟಾಂಗಗಳಾಗಿವೆ. ಆದರೆ ಶಿವಯೋಗದಲ್ಲಿ ಈ ಅಂಗಗಳಿಗೆ ವೀರಶೈವಾಚಾರಕ್ಕನುಗುಣವಾಗಿ ಕ್ರಿಯೆಗಳು ಹೇಳಲ್ಪಡು ವುದುಂಟು."[೪]

ಶಿವಯೋಗವನ್ನು ಗೆಲ್ಲ ಬೇಕಾದರೆ ಈ ಅಷ್ಟಾಂಗಗಳನ್ನು ಅಂಕೆಯಲ್ಲಿಟ್ಟುಕೊಳ್ಳಬೇಕು ಇವುಗಳಿಂದ ಇಡೀ ದೇಹದಲ್ಲಿ ಜ್ಞಾನದ ಅರಿವು ಅರಿಯುತ್ತಿರುತ್ತದೆ. ಲಿಂಗ ಮತ್ತು ಅಂಗದ ಸಾಮರಸ್ಯವನ್ನು ಕಾಪಾಡಲು ಶಿವಯೋಗ ಸಹಾಯಕವಾಗಿದೆ. ಶಿವಯೋಗವನ್ನು ಪಡೆದವನು ಅಹಂಕಾರವನ್ನು ತ್ಯಜಿಸಿ ಸತ್ಯವನ್ನು ತಿಳಿದು ಸಕಾರಾತ್ಮಕ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳುತ್ತಾರೆ. ಸತ್ಯವು ತಿಳಿಯುವುದು ಎಲ್ಲರಿಂದಲೂ ಸಾಧ್ಯವಿಲ್ಲ ಅರಿವಿನ ದಾರಿ ಹಿಡಿದವರಿಗೆ ಮಾತ್ರ ಸತ್ಯದ ದಾರಿ ದೊರೆಯುತ್ತದೆ.

"ಆರು ವರ್ಣದ ಬೇರು ಮೂರು ವರ್ಣದ ಉದಕ,

ರವೆ ತೋರಬಾರದ ಕಲ್ಲು, ಇಂತಿವ ಮೀರಬಾರದ ಗುಂಡು,

ಇಂತಿವ ಭೇದಿಸಿ ಅರೆಯಲಾಗಿ ಸವೆಯಿತ್ತು ಮದ್ದು ವಿಶ್ವಾಸವೆಂಬ ತಟ್ಟೆಯಲ್ಲಿ

ಭಕ್ತಂಗೆ ಮೂರು, ಮಾಹೇಶ್ವರಂಗೆ ನಾಲ್ಕು,

ಪ್ರಸಾದಿಗೆ ಐದು, ಪ್ರಾಣ ಲಿಂಗಿಗೆ ಆರು,

ಶರಣಂಗೆ ಎಂಟು, ಐಕ್ಯಂಗೆ ಹತ್ತು ಇಂತೀ ಕ್ರಮದಲ್ಲಿ ಕೊಂಡ ಮತ್ತೆ

ಮೂರು ನಾಲ್ಕು ಗೂಡಿ, ಆರು ಎಂಟು ಗೂಡಿ,

ಎಂಟು ಹತ್ತು ಗೂಡಿ, ನಷ್ಟವಾದ ಮತ್ತೆ,

ರೋಗದ ಕಟ್ಟು ತೊಟ್ಟು ಬಿಟ್ಟಿತು,

ಮರುಳ ಶಂಕರ ಪ್ರಿಯ ಸಿದ್ದರಾಮೇಶ್ವರ ಲಿಂಗವನರಿಯಲಾಗಿ"

[ಸಂ.ವ.ಸಂ.೪–ವ.ಸಂ–೧೧೨]

ಆರು ವರ್ಣದ ಬೇರು ಎಂದರೆ ಅರಿಷಡ್ವರ್ಗಗಳಿಂದ ಕೂಡಿದ ದೇಹ ಇದರಲ್ಲಿ ಮೂರು ವರ್ಣದ ಉದಕ ಎಂದರೆ ರಾಜಸ, ತಾಮಸ, ಸಾತ್ವಿಕ ಗುಣಗಳು.ಇವುಗಳಿಗೆ ಬೆಲೆಯೇ ಕೊಡದೆ ಇರುವಂತಹ ನಮ್ಮಲ್ಲಿ ಲಿಂಗ ಇದು ಎಲ್ಲವನ್ನು ಬೇಧಿಸಿ ಅರೆದರೆ ನಮ್ಮಲ್ಲಿ ರುಜೆಗೆ ಮದ್ದು ದೊರೆಯುತ್ತದೆ. ಆ ಮದ್ದನ್ನು ವಿಶ್ವಾಸವೆಂಬ ತಟ್ಟೆಯಲ್ಲಿ ಅಂದರೆ ನಮ್ಮ ದೇಹ ವಿಶ್ವಾಸದಿಂದ ಅದನ್ನು ಒಪ್ಪಿಕೊಂಡು ಭಕ್ತಂಗೆ ಮೂರು ಅವು ತನು, ಮನ, ಧನವನ್ನು ನೀಡಬೇಕು. ಮಹೇಶ್ವರಂಗೆ ನಾಲ್ಕು ಗುರು, ಲಿಂಗ, ಜಂಗಮ ಮತ್ತು ಪ್ರಸಾದವನ್ನು ನೀಡಬೇಕು. ಶರಣಂಗೆ ಎಂಟು ಇವು ಅಷ್ಟ ತನುಗಳು ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶ, ಚಂದ್ರ,

ಸೂರ್ಯ ಮತ್ತು ಆತ್ಮ ಇವುಗಳನ್ನು ಶರಣಂಗೆ ನೀಡಬೇಕು. ಐಕ್ಯಂಗೆ ಹತ್ತು ನೀಡಬೇಕು ಐಕ್ಯ ಎಂದರೆ ಶಿವತತ್ವದಲ್ಲಿ ಬೆರತು ಹೋಗುವುದು. ಲಿಂಗಾಂಗ ಸಾಮರಸ್ಯ ಹೊಂದುವುದು. ಭಕ್ತ, ಮಹೇಶ, ಪ್ರಸಾದಿ ಪ್ರಾಣಲಿಂಗಿ ಐಕ್ಯ ಎಂಬ ಮೋಕ್ಷ ಸಾಧನೆಯ ಆರು ಹಂತಗಳಲ್ಲಿ ಕೊನೆಯ ಹಂತವನ್ನು ಮುಟ್ಟಿದವನು. ಲಿಂಗಾಂಗ ಸಾಮರಸ್ಯವನ್ನು ಪಡೆದವನು ಅರಿವಿನ ದಾರಿಯನ್ನು ತಿಳಿದವನು. ಈ ಎಲ್ಲವೂ ಅರಿವಿನ ದಾರಿಯಲ್ಲಿ ಕಳಚಿ ಬೀಳುತ್ತಿರುತ್ತವೆ. ಆಗ ರೋಗದ ಕಟ್ಟು ತೊಟ್ಟಿನ ಸಮೇತ ಕೆಳಗೆ ಬೀಳುತ್ತದೆ. ಶಂಕರನ ಸಾಕ್ಷಿಯಾಗಿ ಎಂದು ವೈದ್ಯ ಸಂಗಣ್ಣ ಹೇಳುತ್ತಾನೆ.

ಇಲ್ಲಿ ಷಟ್ಸ್ಥಗಳ ಪ್ರಾಮುಖ್ಯತೆಯನ್ನು ತಿಳಿಸಿದ್ದಾನೆ. ಭಕ್ತ ಮಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ ಮತ್ತು ಐಕ್ಯ ಎಂಬ ಆರು ಷಟ್ಸ್ಥಲಗಳು ಕಾಯಕ ತತ್ವಕ್ಕೆ ಹಳವಡಿಸಿ ಮುಕ್ತಿ ಮಾರ್ಗವನ್ನು ಹೇಗೆ ಪಡೆಯಬೇಕೆಂದು ತೋರಿಸುತ್ತವೆ.

ವೈದ್ಯ ಸಂಗಣ್ಣ ಕರ್ಮಯೋಗವನ್ನು ತನ್ನ ಕಾಯಕದಲ್ಲಿ ನಿಷ್ಠೆಯಿಂದ ಪಾಲಿಸುತ್ತಾರೆ ಹಾಗೆಯೇ ಬಸವಣ್ಣವ 'ಕಾಯಕವೇ ಕೈಲಾಸ' ಎಂಬ ನುಡಿಯ ನೇರ ಅರಿವನ್ನು ವೈದ್ಯ ಸಂಗಣ್ಣ ನೀಡುತ್ತಾರೆ. ಶಿವಯೋಗ ಎಂದರೆ ಇದರಲ್ಲಿ ದಾಸೋಹ ತತ್ವವನ್ನು ಪ್ರತಿಪಾದಿಸುತ್ತಾರೆ. ತನ್ನ ಗುರುಗಳನ್ನು ನೆನೆಯುತ್ತಾನೆ ಈ ಕೆಳಗಿನ ವಚನದಲ್ಲಿ ಕಾಣಬಹುದು.

"ಕಕ್ಕಯ್ಯನೆನಗೆ ಕಾಮಧೇನುವಯ್ಯ, ಚೆನ್ನಯ್ಯನೆನಗೆ ಕಲ್ಪವೃಕ್ಷವಯ್ಯಾ.

ಹರಳಯ್ಯನೆನಗೆ ಚಿಂತಾಮಣಿಯಯ್ಯಾ,

ಕೆಂಬಾವಿಯ ಭೋಗಯ್ಯನೆನಗೆ ಸುದಾಬ್ಧಿಯಯ್ಯಾ,

ಶಿವನಾಗಯ್ಯನೆನಗೆ ಪರುಷದ ಗಿರಿಯಯ್ಯಾ.


ಇಂತೀ ಐವರ ಕಾರುಣ್ಯ ಪ್ರಸಾದವ ಕೊಂಡು ಬದುಕಿನಯ್ಯಾ

ಮರುಳ ಶಂಕರ ಪ್ರಿಯ ಸಿದ್ದರಾಮೇಶ್ವರಯ್ಯಾ"

ವೈದ್ಯ ಸಂಗಣ್ಣ ತನ್ನ ಜೀವನದ ಉಳಿವಿಗೆ ಕಾರಣಾದವರು ತನ್ನ ಗುರುಗಳು ಅವರಲ್ಲಿ ಕಕ್ಕಯ್ಯನನ್ನು ಕಾಮಧೇನುವಿಗೆ ಹೋಲಿಸಿದ್ದಾರೆ. ಚೆನ್ನಯ್ಯನನ್ನು ಕಲ್ಪವೃಕ್ಷಕ್ಕೆ ಹೋಲಿಸಿದ್ದಾರೆ. ಹರಳಯ್ಯನನ್ನು ಚಿಂತಾಮಣಿಗೆ ಹೋಲಿಸಿದ್ದಾರೆ. ಕೆಂಬಾವಿಯ ಬೋಗಯ್ಯ ನನಗೆ ಸುದಾಬ್ಧಿಯಯ್ಯಾ ಎಂದು ಶಿವನಾಗಯ್ಯನು ನನಗೆ

ಪರುಷಾಗಿರಿಯಯ್ಯ ಎಂದು ಅವರನ್ನು ಹೊಗಳಿದ್ದಾರೆ. ಇವರ ಕಾರುಣ್ಯ ಪ್ರಸಾದದಿಂದ ನಾನು ಬದುಕಿದೆನಯ್ಯಾ ಇಲ್ಲವಾದಲ್ಲಿ ತನ್ನ ಜೀವನ ಅಳಿಯುತ್ತಿತ್ತು. ಇವರು ಕೊಟ್ಟ ಪ್ರಸಾದದಿಂದಲೇ ನಾನು ಉಳಿದಿರುವೆ ಎಂದು ವೈದ್ಯ ಸಂಗಣ್ಣ ತನ್ನ ಮನಸ್ಪೂರ್ತಿಯಾಗಿ ತನ್ನ ಗುರುಗಳನ್ನು ಹೊಗಳಿದ್ದಾನೆ. ಈ ವಚನದಲ್ಲಿ ತನ್ನ ಗುರುಗಳಾದ ಐದು ಜನರನ್ನು ಗುರುತಿಸಿರುವುದರಿಂದ ಇವರು ಪಂಚೇಂದ್ರಿಯಗಳಿಗೆ ಪಂಚವೈದ್ಯರ ಪರಿಚಯವನ್ನು ಹೇಳುವಂತೆ ತೋರುತ್ತದೆ. ನಾವು ನಮ್ಮ ದೇಹದ ಕಾಯಿಲೆಗಳಿಗೆ ಒದೊಂದು ರೋಗಕ್ಕೂ ಒಬ್ಬಬ್ಬ ವೈದ್ಯನ ಬಳಿ ಹೋಗುತ್ತೇವೆ. ಒಬ್ಬನೇ ವೈದ್ಯ ಎಲ್ಲಾ ಕಾಯಿಲೆಗಳ ರುಜೆ ತೊಲಗಿಸಲು ಸಾಧ್ಯವಿಲ್ಲ ಆದ್ದರಿಂದ ಸಂಗಣ್ಣನು ಸಹ ಪಂಚ ಇಂದ್ರಿಯಗಳಿಗೆ ಪಂಚ ವೈದ್ಯರನ್ನು ತಿಳಿಸಿದ್ದಾನೆ. ಕಕ್ಕಯ್ಯ, ಚೆನ್ನಯ್ಯ, ಹರಳಯ್ಯ, ಕೆಂಬಾವಿ ಬೋಗಣ್ಣ, ಶಿವನಾಗಯ್ಯ ಈ ಐವರು ವೈದ್ಯ ಸಂಗಣ್ಣನ ಪಂಚ ಇಂದ್ರಿಯಗಳಿಗೂ ಪಂಚ ವೈದ್ಯರು. ಇವರು ವೈದ್ಯ ಸಂಗಣ್ಣನಿಗೆ ಅರಿವಿನ ಮಾರ್ಗವನ್ನು ತೋರಿಸಿಕೊಟ್ಟವರು. ಇವರ ಪ್ರಸಾದದಿಂದ ತಾನು ಬದುಕಿದೆ ಎಂದು ಹೇಳಿಕೊಂಡಿದ್ದಾನೆ.

ತಾನು ಮಾಡುವ ಕಾಯಕಕ್ಕೆ ಮೂಲಕಾರಣರಾದವರನ್ನು ನೆನೆಯುತ್ತ, ತನ್ನ ಹಿರಿಮೆಯನ್ನು ತನ್ನ ಜ್ಞಾನದ ಮಾರ್ಗವನ್ನು ತೋರಿಸಿ ಕೊಟ್ಟವರನ್ನು ನೆನೆಯುತ್ತಾ ಕರ್ಮಯೋಗದಲಿ ನಿಂತು ಕಾಯಕವನ್ನು ಮಾಡುತ್ತಾನೆ. ಈ ಮೇಲಿನ ಐದು ವಚನಕಾರರು ಕೆಳವರ್ಗದಲ್ಲಿ ಹುಟ್ಟಿದವರಾಗಿದ್ದು ಅವರ ಪ್ರಾಮುಖ್ಯತೆಯನ್ನು ವೈದ್ಯ ಸಂಗಣ್ಣ ಹೆಚ್ಚಿಸಿದ. ಇದರ ಮೂಲಕ ಶಿವಯೋಗದ ಸಿದ್ಧಿಯನ್ನು ಸಾಧಿಸಿದರು. ತನ್ನ ಕಾಯಕ ವೃತ್ತಿಯಲ್ಲಿ ದೇವರನ್ನು ಕಾಣಬೇಕು. ಕಾಯಕವೇ ಕೈಲಾಸ ಎಂಬ ಮಾತುಗಳು ಸಂಗಣ್ಣನ ವಚನದಲ್ಲಿ ಕಾಣುತ್ತೇವೆ. ಈತ ಹೇಳಿದ ವಿಧಾನ ಬೇರೆಯಾಗಿದೆ. ಈತ ವೈದ್ಯಕೀಯ ಪರಿಭಾಷೆಯನ್ನು ಬಳಸುತ್ತಾ ತಮ್ಮಲ್ಲಿರುವ ವೈದ್ಯರನ್ನು ಕ್ರಿಯಾಶೀಲರನ್ನಾಗಿ ಮಾಡುವ ಕಾರ್ಯದಲ್ಲಿ ನಿಂತಿದ್ದಾನೆ. ಆತ್ಮ ಮತ್ತು ದೇಹದ ನಡುವಿನ ಸಂಬಂಧವನ್ನು ತಿಳಿಸುತ್ತಾನೆ.




ಘಟ – ಆತ್ಮ
ದೇಹ – ಮನಸ್ಸುಅರಿವು
ಬಹಿರಂಗ – ಅಂತರಂಗ

ಈ ಮೂರು ಅಂಶಗಳಲ್ಲಿ ಅರಿವು ಅರಿಯುತ್ತದೆ. ಈ ಅರಿವಿಗೆ ಪುಷ್ಟಿಯಾಗಿ ಪಂಚೇಂದ್ರಿಯಗಳು ಸಹಕರಿಸುತ್ತವೆ. ದೇಹ ಮತ್ತು ಮನಸ್ಸು ಹೇಳಿದ ಮಾತಿಗೆ ಪಂಚೇಂದ್ರಿಯಗಳಲ್ಲಿ ೩ ರೀತಿ ಆಲೋಚನೆಗಳು ಬಂದು ಅರಿವು ಯಾವುದನ್ನು ಹೊರ ಹಾಕುತ್ತದೆ. ಅದಕ್ಕೆ ದೇಹ ಪ್ರಚೋದಿಸುತ್ತದೆ ಆದರೆ ಮನಸ್ಸು ಅದಕ್ಕೆ ತದ್ವಿರುದ್ಧವಾದ ಯೋಚನೆಯನ್ನು ಮಾಡುತ್ತದೆ. ಇದಕ್ಕೆ ಕಾರಣ ಪಂಚೇಂದ್ರಿಯಗಳ ರಾಸಾಯನಿಕ ಕ್ರಿಯೆ

ಇದನ್ನು ಹಿಡಿತದಲ್ಲಿ ಇಡಲು ನಮ್ಮಲ್ಲೇ ಇರುವ ಪಂಚ ವೈದ್ಯರಿಂದ ಮಾತ್ರ ಸಾಧ್ಯ ಎಂದು ವೈದ್ಯ ಸಂಗಣ್ಣ ತಿಳಿಸಿಕೊಟ್ಟಿದ್ದಾರೆ.

"ಕಾಯಕರ್ಮದ ಅನುಭವಿಸುತ್ತ ಮತ್ತೆ ದಿವ್ಯಜ್ಞಾನದ ಮಾತದೇತಕ್ಕೆ?

ವಾಗ್ವಾದಕ್ಕೂ ದಿವ್ಯಜ್ಞಾನದಕ್ಕೂ ಅನುಪಾನವುಂಟೆ?

ರಸವಾದದ ಬೇರ ಕದ್ದ ಚೋರನಂತೆ.

ಅದರ ಭೇಧವನರಿದು ಅದ ವೇದಿಸಿಕಾಣ

ಕಳಂಕ ಹೋದ ಹೊಲಬನರಿಯ, ಆ ಚೋರನ ಮಾತ ವೇದಿಗಳೊಪ್ಪುವರೆ?

ಇಂತಿ ಭೇದವ ತಿಳಿದು ಷಡುಸ್ಥಲವೇದಿಗಳಾಗ ಬೇಕು.

ಮರುಳ ಶಂಕರ ಪ್ರಿಯ ಸಿದ್ದರಾಮೇಶ್ವರ ಲಿಂಗವ.

ಅರಿವಿನಲ್ಲಿ ವೇಧಿಸಿಕೊಳ್ಳಬೇಕು"

[ಸಂ.ವ.ಸಂ.೪–ವ.ಸಂ–೧೧೭]

ಸಮಾಜದಲ್ಲಿ ಅಂಧಕಾರದ ನೆರಳಿನಲ್ಲಿ ಜೀವಿಸುತ್ತಿರುವ ಎಲ್ಲರಿಗೂ ಹೇಳುತ್ತಿರುವ ಮಾತು ಈ ವಚನವಾಗಿದೆ. ಎಲ್ಲರೂ ತಮ್ಮ ತಮ್ಮ ಕೆಲಸಗಳಲ್ಲಿ ತೊಡಗಿ ಅದೇ ಜೀವನ ಎಂದು ಜೀವಿಸುತ್ತಿರುವವರಿಗೆ ದಿವ್ಯಜ್ಞಾನದ ಮಾತು ಏತಕ್ಕೆ? ಅವರಿಗೆ ಅವಶ್ಯಕತೆ ಇರುವುದಿಲ್ಲ ಈಗಿನ ಜನ ಹೆಚ್ಚು ವಾಗ್ವಾದಕ್ಕೆ ಇಳಿಯುತ್ತಾರೆ. ತಮಗೆ ಅವಶ್ಯಕತೆ ಇದೆಯೇ ಇಲ್ಲವೋ ಎನ್ನುವ ಲೆಕ್ಕಾಚಾರದಲ್ಲಿ ಬದುಕುವ ಜನ ಇಂತಹ ಜನರ ವಾಗ್ವಾದಕ್ಕೂ ದಿವ್ಯ ಜ್ಞಾನಕ್ಕೂ ಅನುಪಾನವುಂಟೆ? ಎಲ್ಲಾದರೂ ಇವೆರಡರ ಮದ್ಯೆ ಸಾಮ್ಯತೆಯನ್ನು ತರಲು ಸಾಧ್ಯವೇ ಇಲ್ಲಿ ಇವರಿಗೆ ಅದರ ಅರಿವಿನ ಅವಶ್ಯಕತೆಯೂ ಅವರಿಗೆ ಇಲ್ಲ. ಇಲ್ಲಿರುವ ಜನರೆಲ್ಲರೂ ರಸವಾದದ ಬೇರನ್ನು ಕದ್ದ ಚೋರರು. ಇವರಿಗೆ ಕದ್ದಂತಹ ಬೇರು ಯಾವುದಕ್ಕೆ ಉಪಯೋಗಕ್ಕೆ ಬರುತ್ತದೆ ಎನ್ನವುದು ತಿಳಿದೇ ಇರುವುದಿಲ್ಲ, ಇಂಥ ಕಳ್ಳರ ಮಾತುಗಳನ್ನು ವೇದಿಗಳದವರು ಒಪ್ಪುವರೇ ಸಾಧ್ಯವೇ ಇಲ್ಲ. ಅವರು ಚೋರರೆಂದು ಗುರ್ತಿಸಿ ಅವರನ್ನು ನಂಬುವುದಿಲ್ಲ. ಇಂತಹ ವ್ಯಕ್ತಿಗಳು ತಮ್ಮ ಜ್ಞಾನದ ಅರಿವನ್ನು ತಿಳಿಯಬೇಕು ಎನ್ನುವ ಆಸೆ ಬಂದಲ್ಲಿ ಅವರು ಷಡುಸ್ಥಲ ವೇದಿಗಳಾಗಬೇಕು ಅಂದರೆ ಆರು ಸ್ಥಲಗಳಾದ

೧) ಭಕ್ತ ಸ್ಥಲ

೨) ಮಹೇಶ್ವರ ಸ್ಥಲ

೩) ಪ್ರಸಾದಿ ಸ್ಥಲ

೪) ಪ್ರಾಣಲಿಂಗಿ ಸ್ಥಲ

೫) ಶರಣ ಸ್ಥಲ

೬) ಐಕ್ಯ ಸ್ಥಲ

ಇವುಗಳನ್ನು ವೇದಿಸಬೇಕು. ಭಕ್ತನಾದವನ್ನು ದೀಕ್ಷೆಯನ್ನು ಪಡೆದ ಮೇಲೆ ಗುರು ಕೊಟ್ಟ ಅರಿವೆಂಬ ಇಷ್ಟಲಿಂಗವನ್ನು ಬಿಟ್ಟು ಮತ್ತೆ ಸ್ಥಾವರ ಲಿಂಗಗಳ ಕಡೆ ಹೋಗಬಾರದು. ಏಕೆಂದರೆ ಇಷ್ಟಲಿಂಗವೇ ಪರದೈವ, ಬ್ರಹ್ಮರಂಧ್ರದ ಅರಿವನ್ನು ತಿಳಿದ "ಗುರು ಆಕರ್ಷಿಸಿ ಆತ್ಮಕ್ಕೆ ಭಾವಲಿಂಗವನ್ನಾಗಿ ಮನಸ್ಸಿಗೆ ಪ್ರಾಣಲಿಂಗವನ್ನಾಗಿ, ದೇಹಕ್ಕೆ ಇಷ್ಟಲಿಂಗವನ್ನಾಗಿ ಮಾಡಿ ಕೊಟ್ಟಿರುವಾಗ ಬೇರೆ ಸ್ಥಾವರ ಲಿಂಗದ ಹಂಗು ಏಕೆ? ಇಷ್ಟಲಿಂಗವನ್ನು ಯಾವಾಗಲೂ ಅಗಲದಿರು, ಇಷ್ಟಲಿಂಗ ಪೂಜೆಯನ್ನು ಅರಿವಿನ ಮಾರ್ಗದ ಮೂಲಕ ಮಾಡು.

ಮಹೇಶ್ವರ ಸ್ಥಲದ ಸಾಧನೆಗೆ ಅವಶ್ಯಕವಾದ ನಿಷ್ಠಾಭಕ್ತಿಯ ಸ್ವರೂಪವನ್ನು ವಚನಕಾರರು ಹೇಳಿದ್ದಾರೆ. ಈ ನಿಷ್ಠೆಯನ್ನು ಏಕೆ ಒತ್ತಿ ಹೇಳಿರುವರು ಎಂದರೆ, ಮನುಷ್ಯ ಸ್ವಭಾವವನ್ನು ಅವರು ಬಲ್ಲರು, ಮೊದಲಿದ್ದ ಉತ್ಸಾಹ ಶ್ರದ್ದೆಗಳು ಕಾಲಕ್ರಮದಲ್ಲಿ ಕಡಿಮೆಯಾಗಿ ಕೊನೆಗೆ ಅದೃಶ್ಯವೇ ಆಗಬಹುದೆಂದು ಅವರಿಗೆ ಹೆದರಿಕೆ.

ಅಂತರಂಗ ಶಾಂತಿಯುಕ್ತವಾಗಿ ಜ್ಞಾನೋದಯವಾಗುವುದರಿಂದ ಎಲ್ಲಾ ಕಡೆಯೂ ಶಿವನನ್ನು ಕಾಣುವ ಸ್ವಭಾವ ಎಲ್ಲವನ್ನೂ ಶಿವನ ಕಾರ್ಯಗಳನ್ನಾಗಿ ತಿಳಿಯುವ ಬುದ್ಧಿ ತಾನು ಶಿವನ ಪೋಷಣೆಗೆ ಒಳಗಾಗಿ ಶಿವನ ಮೂಲಕ ಎಲ್ಲವನ್ನೂ ಪ್ರಸಾದ ರೂಪವಾಗಿ ಪಡೆಯುತ್ತಿರುವೆನೆಂಬ ಅರಿವು ಈ ಪ್ರಸಾದಿ ಸ್ಥಲದಲ್ಲಿ ದೊರೆಯುತ್ತದೆ.

ಇದುವರೆಗೆ ಹೇಳಿದ ಮೂರು ಸ್ಥಲಗಳಲ್ಲಿ ಕರ್ಮ ಪ್ರಾಧಾನ್ಯವಿರುವುದನ್ನೂ ಜ್ಞಾನವಿನ್ನೂ ಸಂಪೂರ್ಣ ವಿಕಾಸ ಹೊಂದದೆ ಅದು ಗೌಣವಾಗಿರುವುದನ್ನೂ ಕಾಣಬಹುದಾಗಿದೆ. ಪ್ರಾಣಲಿಂಗಿಸ್ಥಲದಿಂದ ಮುಂದೆ ಜ್ಞಾನ ಪ್ರಧಾನವಾಗಿ ಕರ್ಮ ಗೌಣವಾಗುತ್ತದೆ. ಇದುವರೆಗೂ ಆದುದು ದೇಹ ಮನಸ್ಸುಗಳ ಶಿಕ್ಷಣ ಸುತ್ತು ಸುಳಿಯುವ ಮನವನ್ನು ಒಂದು ಕಡೆಗೆ ತಂದು ನಿಲ್ಲಿಸಿದ್ದೂ ಹೊರಗಿನ ದೇವರು ಒಳಗಿರುವನೆಂದು ತೋರಿಸಿಕೊಟ್ಟಿರುವುದೂ ಅದರ ಪರಿಣಾಮ. ಮುಂದೆ ಆಗುವುದು ಆತ್ಮ ಸ್ವರೂಪ ಜ್ಞಾನ. ಈಗ ಒಳಗಿನ ಚೈತನ್ಯಮೂರ್ತಿಯ ನಿಕಟ ಸಂಬಂಧದಿಂದ ಏನಾಗುವುದೆಂಬುದನ್ನು ನೋಡ ಬಹುದಾಗಿದೆ.

ಶರಣನು ಜ್ಞಾನಿ, ನಿತ್ಯಾ ನಿತ್ಯಗಳನ್ನು ತಿಳಿದವನು, ದೇಹ ಸಂಸಾರಾದಿ ಮೋಹಗಳನ್ನು ಬಿಟ್ಟವನು, ಲಿಂಗದ ಕಳೆಯರಿತು ಲಿಂಗದ ಗುಣಗಳುಳ್ಳವನಾಗಿ ಬಾಹ್ಯಾಭ್ಯಂತರಗಳಲ್ಲಿ ಲಿಂಗದ ನೆನಹಿನಿಂದ ವ್ಯವಹರಿಸತಕ್ಕವನು. ಇವನು ಅಂತರ್ಮುಖಿಯಾದಾಗ ಕಾರಣ ತನುವಿನ ಬಾವಲಿಂಗದ ಸಂಬಂಧ ಬಹಿರ್ಮುಖಿ ಯಾವಾಗ ಸ್ಥೂಲ, ಸೂಕ್ಷ್ಮ, ತನುಗಳ ವ್ಯವಹಾರವುಳ್ಳವನಾದರೂ ತನು ಮನಗಳ ಗುಣಗಳಿಂದ ಬಾದಿತನಲ್ಲ. ಇದು ಶರಣನ ಅಂತಃಕರಣ.

ಈ ಮೇಲಿನ ಎಲ್ಲಾ ಸ್ಥಲಗಳನ್ನು ವೇದಿಸಿಕೊಂಡು ಬಂದಾಗ ಕೊನೆಗೆ ಒಂದೇ ವಸ್ತು ಎರಡಾಗಿತ್ತು. ಪುನಃ ಅಂತರಂಗದಲ್ಲಿ ಕೂಡಿ ಒಂದೇ ಆಯಿತು ಇದು ಸಂಪೂರ್ಣ ಸಾಮರಸ್ಯದ ಐಕ್ಯ. ಗುರು ಸತ್ಯವನ್ನು ತಿಳಿದವನಾದ್ದರಿಂದ ಸತ್ಯ ಮಾರ್ಗವನ್ನು ತೋರಿಸಬಲ್ಲವನು. ಲಿಂಗವೇ ತಾನಾಗಿ ಗುರು ರೂಪದಲ್ಲಿರುವವನು."[೫]

ಈ ಮೇಲಿನ ಷಡ್ಸ್ಥಲಗಳನ್ನು ಬೇದಿಸುವುದು ಸುಲಭದ ಕೆಲಸವಲ್ಲ. ಅವುಗಳನ್ನು ಸಾಧಿಸಲು ತಾನು ಏಕಾಗ್ರ ಚಿತ್ತನಾಗಿ ತನ್ನ ಎಲ್ಲಾ ಬಂಧಗಳನ್ನು ಕಳಚಿ ಅರಿವಿನ ಹಾದಿಯನ್ನು ಹಿಡಿಯಬೇಕು. ಆಗ ಈ ಎಲ್ಲಾ ಸ್ಥಲಗಳನ್ನು ಸಾಧಿಸಿ ಕೊನೆಯದಾಗಿ ಅಂಗವೇ ಲಿಂಗ ಲಿಂಗವೇ ಅರಿವು ಎಂಬ ಜ್ಞಾನ ದೀವಿಗೆಯನ್ನು ಹಿಡಿಯಲು ಸಾಧ್ಯವಾಗುತ್ತದೆ. ಇಂತಹ ಅರಿವಿನಲ್ಲಿ ನಮ್ಮನ್ನು ತೊಡಗಿಸಿಕೊಳ್ಳಬೇಕು ಎಂದು ವೈದ್ಯ ಸಂಗಣ್ಣ ತಮ್ಮ ವಚನಗಳಲ್ಲಿ ತಿಳಿಸಿಕೊಟ್ಟಿದ್ದಾರೆ.

ವೈದ್ಯ ಸಂಗಣ್ಣನ ವಚನಗಳಲ್ಲಿ ಕರ್ಮಯೋಗದ ಮೂಲಕ ಶಿವಯೋಗವನ್ನು ಸಾಧಿಸುವ ಬಗ್ಗೆ ಹೇಳುತ್ತಾರೆ. ಕರ್ಮ ಎಂದರೆ ಕೆಲಸ ಇದನ್ನು ಒಂದು ಯೋಗವಾಗಿ ಸತ್ಯದ ದರ್ಶನವನ್ನು ಮಾಡಿಸುತ್ತಾ, ಅರಿವೇ ಶಿವ, ಅರಿವೇ ದೇಹ ತ್ರೀಕರಣ ಶುದ್ಧಿಯಿಂದ ಗುರು ಲಿಂಗ ಜಂಗಮನನ್ನು ಕಾಯವಾಗಿಸಿ ಶಿವಯೋಗದ ಸಾಧನೆ ಮಾಡುವ ಅರಿವನ್ನು ಮೂಡಿಸಿಕೊಳ್ಳಬೇಕು. "ಸತ್ಯಂ ಶಿವಂ ಸುಂದರಂ" ಎಂಬ ಲೋಕೋಕ್ತಿಯಲ್ಲಿನ ಸತ್ಯಂ ಎಂದರೆ ಅರಿವು, ಶಿವಂ ಎಂದರೆ ಅರಿವುಳ್ಳ ಕಾಯ ಸುಂದರವಾಗಿರುವಂತೆ ನಮ್ಮ ಕಾಯ ಶುದ್ಧವಾಗಿದ್ದರೆ ಅಂತರಂಗವೂ ಶುದ್ಧವಾಗಿರುತ್ತದೆ. ವೈದ್ಯ ಸಂಗಣ್ಣನ ಪ್ರಕಾರ ಬಹಿರಂಗ ಎನ್ನುವುದು ಕಾಯ (ದೇಹ) ಇದು ಅರಿವುಳ್ಳ ಕಾಯವಾಗಿದೆ. ಇದಕ್ಕೆ ತೊಂದರೆಯಾದರೆ ನಮ್ಮ ಅಂತರಂಗ ಅಂದರೆ ಆತ್ಮವೂ ಸಹ ಸಕ್ರಿಯವಾಗಿರುವುದಿಲ್ಲ. ಆದ್ದರಿಂದ ಕರ್ಮಯೋಗ ಮತ್ತು ಶಿವಯೋಗದ ಸಿದ್ದಿಗೆ ದೇಹ ಮತ್ತು ಆತ್ಮಗಳು ಶುದ್ಧವಾಗಿರಬೇಕೆಂದು ವೈದ್ಯ ಸಂಗಣ್ಣನ ನಿಲುವು.

## ಕೊನೆ ಟಿಪ್ಪಣಿ

೧. ಎಂ.ಆರ್.ಶ್ರೀನಿವಾಸಮೂರ್ತಿ – ವಚನ ಧರ್ಮಸಾರ – ಪುಟ ಸಂಖ್ಯೆ–೬೪

೨. ಡಾ.ಎಸ್.ವಿದ್ಯಾಶಂಕರ – ವೀರಶೈವ ಪಾರಿಭಾಷಿಕ ಪದಕೋಶ.
ಪುಟ ಸಂಖ್ಯೆ – ೧೧೭

೩. ಎಂ.ಆರ್.ಶ್ರೀನಿವಾಸಮೂರ್ತಿ – ವಚನ ಧರ್ಮಸಾರ – ಪುಟ ಸಂಖ್ಯೆ–೧೨೩

೪. ಡಾ.ಎಸ್.ವಿದ್ಯಾಶಂಕರ – ವೀರಶೈವ ಪಾರಿಭಾಷಿಕ ಪದಕೋಶ.
ಪುಟ ಸಂಖ್ಯೆ – ೫೦೭, ೫೦೮

೫. ಎಂ.ಆರ್.ಶ್ರೀನಿವಾಸಮೂರ್ತಿ – ವಚನ ಧರ್ಮಸಾರ
ಪುಟ ಸಂಖ್ಯೆ–೧೦೧, ೧೦೩, ೧೦೬, ೧೧೦, ೧೧೪, ೧೧೫, ೧೧೭

## ಸಮಾರೋಪ

ವೈದ್ಯ ಸಂಗಣ್ಣ ವಚನ ಸಾಹಿತ್ಯದಲ್ಲಿ ಒಬ್ಬ ಮಹತ್ವಪೂರ್ಣ ವ್ಯಕ್ತಿಯಾಗಿ ಕಾಣುತ್ತಾನೆ. ಈತ ತನ್ನ ಇಪ್ಪತ್ತೊಂದು ವಚನಗಳಲ್ಲಿ ಹೇಳುವುದು ಸತ್ಯವನ್ನು ಅರಿತುಕೊಳ್ಳಿ, ಸತ್ಯ ಎನ್ನುವುದು ಎಲ್ಲಿಯೂ ಇಲ್ಲ ಅದು ಶರೀರದಲ್ಲಿಯೇ ಅಂತರ್ಗತವಾಗಿದೆ. ಸತ್ಯ ಎಂದರೆ ಅರಿವು. ಅರಿವೇ ಗುರು ಎಂದು ಹೇಳುತ್ತಾರೆ. ಗುರುವೊಬ್ಬನೇ ನಮ್ಮ ತಪ್ಪುಗಳನ್ನು ಗುರುತಿಸಬಲ್ಲನು ಆದ್ದರಿಂದ ನಮ್ಮ ತಪ್ಪು ದುರ್ಗುಣಗಳ ನಿರ್ಮೂಲನೆಯಾಗಬೇಕಾದರೆ ಪ್ರತಿಯೊಬ್ಬರು ಗುರುವಿನ ಅಧೀನರಾಗಿ ಇರಲೇಬೇಕು.ಇದು ಎಲ್ಲ ವಚನಕಾರರು ಹೇಳುವ ಸಾರ್ವತ್ರಿಕ ಸತ್ಯ. ವೈದ್ಯ ಸಂಗಣ್ಣ ಇದನ್ನು ಮುಂದುವರೆಸುತ್ತ ಗುರುವೇ ವೈದ್ಯ ಎಂದು ಹೇಳುತ್ತಾರೆ. ಅಂದರೆ ನಮ್ಮಲ್ಲಿನ ಪಂಚ ಇಂದ್ರಿಯಗಳಿಗೂ ಪಂಚ ವೈದ್ಯರಿದ್ದಾರೆ ಅವರೇ ನಮ್ಮ ಗುರುಗಳು ಎಂಬ ಹೊಸ ಪರಿಕಲ್ಪನೆಯ ಪರಿಚಯವನ್ನು ಮಾಡಿಕೊಡುತ್ತಾರೆ. ಈ ವಿಷಯವನ್ನು ನನ್ನ ಅಧ್ಯಯನದಿಂದ ನಾನು ತಿಳಿದುಕೊಂಡೆ. ಈ ವಿಷಯ ಸರ್ವಕಾಲಕ್ಕೂ ಸಾರ್ವತ್ರಿಕ.

ವೈದ್ಯ ಸಂಗಣ್ಣ ಎಲ್ಲಿಯೂ ಆಧ್ಯಾತ್ಮಿಕ ಚಿಂತನೆಯನ್ನಾಗಲಿ, ದೇವರ ಇರುವಿಕೆಯನ್ನಾಗಲಿ ಆತ ತಿಳಿಸಿಲ್ಲ. ಆತ ತಿಳಿಸಿರುವ ಅತಿ ಮುಖ್ಯ ವಿಚಾರ ಅರಿವೇ ಶಿವ ಎಂದು ನಮ್ಮಲ್ಲಿರುವ ಜ್ಞಾನ ಸತ್ಯವೇ ಶಿವ ಎಂಬುದನ್ನು ತನ್ನ ವಚನಗಳಲ್ಲಿ ತಿಳಿಸಿದ್ದಾರೆ. ಈತ ಒಬ್ಬ ವೈದ್ಯನಾಗಿ ಯಾವುದೇ ಔಷಧಿಯನ್ನಾಗಲಿ, ಬೇರು ಮೂಲಿಕೆಗಳನ್ನಾಗಲಿ ನೀಡಿಲ್ಲ. ಈತ ಒಬ್ಬ ಭವರೋಗದ ವೈದ್ಯನಾಗಿದ್ದ. ಹುಟ್ಟು ಮತ್ತು ಸಾವಿನ ಮಧ್ಯದ ಮನುಷ್ಯನ ತೊಳಲಾಟಕ್ಕೆ ಕಾರಣವನ್ನು ಹುಡುಕುತ್ತಾ ಆ ತೊಳಲಾಟಕ್ಕೆ ಕಾರಣ ಆತನ ಅಜ್ಞಾನ ಅಂಧಕಾರಗಳೆಂದು ತನ್ನಲ್ಲಿರುವ ಅರಿವನ್ನು ಚೇತನಗೊಳಿಸುವ ಕಾರ್ಯದಲ್ಲಿ ಆತನನ್ನು ತೊಡಗಿಸಿಕೊಂಡಿದ್ದನು. ಆ ವ್ಯಕ್ತಿಗೆ ತನ್ನಲ್ಲಿರುವ ಪಂಚ ವೈದ್ಯರ ಪರಿಚಯವನ್ನು ಮಾಡಿಸಿಕೊಟ್ಟು ಆತನಿಗೆ ಜ್ಞಾನ ಮಾರ್ಗದ ದಾರಿಯನ್ನು ತೋರಿಸಿಕೊಟ್ಟನು. ಲಿಂಗ ಎಂದರೆ ಅರಿವು ಜ್ಞಾನ ಎಂದು ತಿಳಿಸಿಕೊಟ್ಟು 'ಇದು ಲಿಂಗಾಂಗಿಗಳ ವೈದ್ಯ' ಎಂಬುದನ್ನು ವಚನದಲ್ಲಿ ವಿವರಿಸುತ್ತಾರೆ. ಅಂದರೆ ಜ್ಞಾನ ಮತ್ತು ದೇಹದ ಒಡನಾಟಕ್ಕೆ ಮಾಡುವ ವೈದ್ಯ. ದೇಹ ನಮ್ಮಲ್ಲಿನ ಅರಿವಿನ ಮೊರೆ ಹೋದರೆ ಸಕಲವು ಶುಭಪ್ರದವಾಗುತ್ತದೆ. ಇಲ್ಲವಾದರೆ ಅದೋಗತಿಗೆ ಹೋಗುತ್ತದೆ ಎಂಬ ವಿಚಾರವನ್ನು ವೈದ್ಯ ಸಂಗಣ್ಣ ತಿಳಿಸಿಕೊಟ್ಟಿದ್ದಾರೆ. ಈತ ವೈದ್ಯ ಶಾಸ್ತ್ರಕ್ಕೆ ನೀಡಿದ ಕೊಡುಗೆ ಮಹತ್ವಪೂರ್ಣವಾದದ್ದು. ವೈದ್ಯರೂ ಯಾವುದೇ ಕಾಯಿಲೆ ಬಂದರೂ ನಾಡಿಯನ್ನು ಪರೀಕ್ಷಿಸಿ ವೈದ್ಯ ಮಾಡುತ್ತಾರೆ. ನಮ್ಮ ದೇಹದಲ್ಲಿ ನಾಡಿ ಅಷ್ಟು ಪ್ರಮುಖವಾದದ್ದು ಅಂತಹ ನಾಡಿಗಳ ಬಗ್ಗೆ ವೈದ್ಯ ಸಂಗಣ್ಣ ತಿಳಿಸಿಕೊಟ್ಟಿದ್ದಾರೆ. ನಮ್ಮ ದೇಹವನ್ನು ಆವರಿಸಿಕೊಂಡಿರುವ ಪಂಚ ಇಂದ್ರಿಯಗಳಿಗೂ ಪಂಚ ವೈದ್ಯರಿದ್ದಾರೆ. 'ಇಂದ್ರಿಯ ಗುಣರೋಗಕ್ಕೆ ಜ್ಞಾನ ವೈದ್ಯ ನೋಡಾ' ಈ ಇಂದ್ರಿಯಗಳಿಂದ ಬಂದ ರೋಗಕ್ಕೆ ಜ್ಞಾನ ವೈದ್ಯರು ಇದ್ದಾರೆ ಅವರೇ ಈ ರೋಗವನ್ನು ವಾಸಿ ಮಾಡಬಲ್ಲರೆಂಬ ಸತ್ಯವನ್ನು ತಿಳಿಸಿದ್ದಾರೆ. ಎಲ್ಲವನ್ನೂ ಅರಿದಿಹೆನೆಂಬ ಬಯಲರೋಗ ಹುಟ್ಟಿದ ಅಜ್ಞಾನಿಗೆ ಜ್ಞಾನದ ಮಾರ್ಗವನ್ನು ತೋರಿಸಿಕೊಟ್ಟನು. ಇಡೀ ದೇಹ ರುಜೆಯಿಂದ

ತೊಳಲಾಡುತ್ತಿದೆ, ಅದು ತನ್ನಲ್ಲಿನ ಪಂಚ ಇಂದ್ರಿಯಗಳ ಜ್ಞಾನವನ್ನು ಅರಿತು ಅದಕ್ಕೆ ಚಿಕಿತ್ಸೆಯನ್ನು ಮಾಡಿಕೊಂಡರೆ ಇದು ಸಿದ್ಧಾಂತ ಮೂಲಿಕೆ ಇದನ್ನು ಸಾಧಿಸಿಕೊಳ್ಳಿ ಎಂದೆಂದಿಗೂ ಕಾಯಿಲೆ ಬರುವುದಿಲ್ಲವೆಂದು ವೈದ್ಯ ಸಂಗಣ್ಣ ಹೇಳಿದ್ದಾರೆ. ಅಸ್ಥಿ ಮಾಂಸ ಶುಕ್ಲ ಶೋಣಿತಗಳಿಂದ ನಿರ್ಮಾಣವಾದ ಈ ದೇಹಕ್ಕೆ ಕಾಯಿಲೆ ಎನ್ನುವುದು ಸರ್ವೇಸಾಮಾನ್ಯ. ಅದು ಯಾರನ್ನು ಬಿಡುವುದಿಲ್ಲ ಆ ರೋಗಕ್ಕೆ ಕಾರಣವನ್ನು ಅರಿತು ಚಿಕಿತ್ಸೆ ಮಾಡಿದರೆ ದೇಹ ಮತ್ತು ಆತ್ಮ ಎರಡೂ ಸುಸ್ಥಿತಿಯಲ್ಲಿ ಇರುತ್ತವೆ. 'ಅವರವರ ಚಿಕಿತ್ಸೆಯಲ್ಲಿ ಹೊತ್ತು ನಿತ್ತರಿಸುವುದೇ ಕ್ರಮ' ಅಂದರೆ ಅವರವರ ಸ್ವಭಾವಕ್ಕೆ ಅನುಗುಣವಾಗಿ ಚಿಕಿತ್ಸೆಯನ್ನು ಮಾಡಬೇಕು ಎಂದು ವೈದ್ಯ ಸಂಗಣ್ಣನ ವಚನಗಳಲ್ಲಿ ಸ್ಪಷ್ಟವಾಗಿ ಗೋಚರಿಸುತ್ತದೆ.

ವೈದ್ಯ ಸಂಗಣ್ಣನಿಗೆ ಪಂಚ ವೈದ್ಯರ ಪರಿಚಯ ಮಾಡಿಕೊಟ್ಟ ಪಂಚ ಗುರುಗಳನ್ನು ನೆನೆಯುತ್ತಾನೆ. ಕಕ್ಕಯ್ಯ, ಚೆನ್ನಯ್ಯ, ಹರಳಯ್ಯ, ಕೆಂಬಾವಿ ಬೋಗಯ್ಯ, ಶಿವನಾಗಯ್ಯ 'ಇಂತೀ ಐವರ ಕಾರುಣ್ಯ ಪ್ರಸಾದವ ಕೊಂಡು ಬದುಕಿದೆನಯ್ಯ' ಎಂದು ಅವರಲ್ಲಿನ ಗುರುಭಕ್ತಿಯನ್ನು ಬಿಚ್ಚಿ ಇಡುತ್ತಾರೆ. ತಮ್ಮ ಗುರುಗಳು ನೀಡಿದ ಕಾರುಣ್ಯ ಪ್ರಸಾದದಿಂದ ತಾನು ಬದುಕಿದ್ದೇನೆ ಎಂದು ಗರ್ವದಿಂದ ಬೀಗುತ್ತಾನೆ. ನಮ್ಮ ಅಜ್ಞಾನವನ್ನು ಕಳೆದುಕೊಳ್ಳಬೇಕಾದರೆ ಈ ತನುವನ್ನು ಗುರುವಿಗೆ ಅರ್ಪಿಸಬೇಕು, ಮನವನ್ನು ಲಿಂಗಕ್ಕೆ ಅರ್ಪಿಸಬೇಕು, ಧನವನ್ನು ಜಂಗಮಕ್ಕೆ ಕೊಟ್ಟಾಗ ನಮ್ಮಲ್ಲಿನ ಅಜ್ಞಾನದ ತೆರೆ ಸರಿದು ಹೋಗುತ್ತದೆ ಬೇಗ ಎಲ್ಲರೂ ಅರಿತುಕೊಳ್ಳಿ ಎಂದು ಕರೆಯನ್ನು ಕೊಟ್ಟಿದ್ದಾರೆ.

'ಆಸೆಯೆಂಬ ರೋಗ ಸರ್ವಾಂಗದಲ್ಲಿ ಹೊಕ್ಕು ಸರ್ವರಿಗೆಲ್ಲಕ್ಕೂ ಪಾಷಂಡಿ ವೇಷ ಧಾರಿಗಳೆನಿಸುತ್ತಿದೆ ನೋಡಾ' ಅಂದರೆ ಆಸೆ ಎನ್ನುವ ಅಜ್ಞಾನದಲ್ಲಿ ಜೀವಿಸುತ್ತಿರುವ ಪ್ರತಿಯೊಬ್ಬ ವ್ಯಕ್ತಿಗೂ ಸರ್ವ ಅಂಗಗಳಲ್ಲೂ ಕಾಯಿಲೆ ಹರಿದು ಅದು ಪಾಷಂಡಿ ವೇಷವನ್ನು ಆ ವ್ಯಕ್ತಿ ಧರಿಸುವ ಹಾಗೆ ಮಾಡಿಬಿಟ್ಟಿದೆ ಅಂತಹ ವ್ಯಕ್ತಿಯ ರೋಗಕ್ಕೆ ಮದ್ದನ್ನು ಕೊಟ್ಟವರು ವೈದ್ಯ ಸಂಗಣ್ಣ. ಎಲ್ಲಾ ಜೀವಿಗಳ ನಿಹಿತವನ್ನು ಅರಿತು ತನ್ನ ಆತ್ಮ ಸಿದ್ದಿಗಾಗಿ ತಾನು ಮಾಡಿದ ಕೆಲಸ ಈ ವೈದ್ಯ ವೃತ್ತಿ ಎಂಬುದು ನನ್ನ ಅಧ್ಯಯನದ ಫಲವಾಗಿದೆ.

ವೈದ್ಯ ಸಂಗಣ್ಣನ ವಚನಗಳಲ್ಲಿ ಷಟ್ಸ್ಥಲ ಸಿದ್ಧಾಂತವು ವೈದ್ಯಕೀಯ ಜವಾಬ್ದಾರಿಯೊಂದಿಗೆ ಬಹಿರಂಗದ ಸ್ವಾಸ್ಥ್ಯದಾದ (ದೇಹ) ಅಂತರಂಗದ ಸ್ವಾಸ್ಥ್ಯ (ಆತ್ಮ) ಸಿದ್ಧಿಯನ್ನು ಪಡೆಯುತ್ತದೆ ಎಂದು ತೀರ್ಮಾನಿಸಲಾಗಿದೆ. ಅದನ್ನೇ ಆತ ಭಕ್ತಸ್ಥಲದಿಂದ ಐಕ್ಯ ಸ್ಥಲ ಎಂದು ಕರೆಯುತ್ತಾರೆ. ಅಂದರೆ ಶರೀರಧಾರಿಯಾದ ಭಕ್ತನು ತನ್ನ ಕಾಯ ವಾಚ ಮನಃಶುದ್ಧಿಯಿಂದ ಶರಣ, ಮಹೇಶ್ವರ, ಪ್ರಾಣಲಿಂಗಿ, ಪ್ರಸಾದಿ, ಐಕ್ಯ ಸ್ಥಲಗಳ ಪರಿಣಾಮವನ್ನು ದಾಟಿ ಅಂತರಂಗದಲ್ಲಿ ಅರಿವೇ ಲಿಂಗವನ್ನು ಪಡೆಯುವ ಸಿದ್ಧಿಗೆ ಕಾರಣನಾಗುವುದನ್ನು ಗುರುತಿಸಲಾಗಿದೆ.

ಷಟ್ಸ್ಥಲ ಸಿದ್ಧಾಂತದ ಸಿದ್ಧಿಯನ್ನು ಪಡೆಯಬೇಕಾದರೆ ನಾವು ಮಾಡುವ ಕಾಯ ಅಂದರೆ ಕಾಯಕ, ನಿರ್ಮಲವು, ನಿಸ್ವಾರ್ಥವು, ಪ್ರಾಮಾಣಿಕವು ಆತ್ಮತೃಪ್ತಿಯನ್ನು ಒದಗಿಸಬೇಕೆಂದು ಅಲ್ಲಿಯೇ ದಾಸೋಹತತ್ವ ಸಮಾಜಕ್ಕೆ ವಿತರಣೆಯಾಗುತ್ತದೆಯೆಂದು ತನ್ನ ಮೂಲಕ ಕಾಯ ಕಾಯಕವಾಗಿ ಕೈಲಾಸವಾಗುವುದನ್ನು

ವೈದ್ಯಸಂಗಣ್ಣ ವೈದ್ಯಕೀಯ ಪರಿಭಾಷೆಯಲ್ಲಿ ನಿರ್ವಚಿಸಿದ್ದನ್ನು ಗುರ್ತಿಸಲಾಗಿದೆ. ಕಾಯದಿಂದ ಮಾಡುವ ಕಾಯಕ ಸಂಪಾಧನೆಯಾದರೆ ಅಂತಃರಂಗ ಶುದ್ಧಿಯಿಂದ ನಿವೇದನೆ ಮಾಡಬೇಕಾದದ್ದು ದಾಸೋಹ ಎನಿಸಿಕೊಳ್ಳುತ್ತದೆ. ಸೂಕ್ಷ್ಮವಾಗಿ ಗಮನಿಸಿದರೆ ಈ ತತ್ವ ವೈದ್ಯಸಂಗಣ್ಣನ ವಚನಗಳಲ್ಲಿ ನಿರೂಪಿತಗೊಂಡಿರುವುದನ್ನು ಗುರ್ತಿಸಲಾಗಿದೆ.

ತ್ರಿವಿಧ ದಾಸೋಹಗಳಾದ ಗುರು, ಲಿಂಗ, ಜಂಗಮ ತತ್ವವನ್ನು ಶರೀರದ ಎಲ್ಲಾ ಅಂಗಗಳನ್ನು ಪರಿಚಯಿಸುತ್ತಲೇ ಶರೀರಶಾಸ್ತ್ರದ ವ್ಯಾಕ್ಯಾನ ನೀಡಿರುವುದು ಗಮನಾರ್ಹ. ವೈದ್ಯಸಂಗಣ್ಣ ವೈದ್ಯನೂ ಹೌದು, ವೈಜ್ಞಾನಿಕ ಕರ್ಮಯೋಗಿಯೂ ಹೌದು, ಶರೀರ ಶಾಸ್ತ್ರಜ್ಞನು ಹೌದು ಎಂಬ ವಿಚಾರಗಳನ್ನು ಇತನ ವಚನಗಳ ಮೂಲಕ ಶೋಧಿಸಲಾಗಿದೆ. ವೈದ್ಯಕೀಯ ಕ್ಷೇತ್ರದ ಚಿಕಿತ್ಸೆಯಲ್ಲಿ ವೈದ್ಯಸಂಗಣ್ಣನ ವಚನಗಳ ಶರೀರ ಶಾಸ್ತ್ರ ಅನುಸರಿಸಿದರೆ ಸ್ಥಳೀಯ ದೇಸೀಯತೆಯ ಮೌಲ್ಯವನ್ನು ಕಾಪಾಡಿಕೊಂಡಂತ್ತಾಗುತ್ತದೆ.

ಜಾಗತಿಕ ಯುಗಕ್ಕೆ ವೈದ್ಯಸಂಗಣ್ಣ ಅಗತ್ಯ ಮತ್ತು ಅನಿವಾರ್ಯ ಏಕೆಂದರೆ ಕಲುಶಿತ ಪರಿಸರದಲ್ಲಿ ಒತ್ತಡ ಆತಂಕ ವೇಗದ ಬದುಕಿನಲ್ಲಿ ನೇರವಾಗಿ ಅಂತರಂಗದ ಸಮತೋಲನವೆ ಮುಖ್ಯಸವಾಲಾಗಿರುವಾಗ ಪರಿಣಾಮದಾಯಕ ಶರೀರ ಶಾಸ್ತ್ರದ ಜ್ಞಾನ ವೈದ್ಯ ಸಂಗಣ್ಣನ ಕೊಡುಗೆಯಾಗಿರುತ್ತದೆ. ಹಾಗಾಗಿ ಸದ್ಯದ ವೈದ್ಯಕೀಯ ಕ್ಷೇತ್ರ ವೈದ್ಯಸಂಗಣ್ಣನ ವಚನಗಳ ಅಧ್ಯಾಯನದಿಂದ ವೈದ್ಯಕೀಯ ಪರಿಭಾಷೆಯನ್ನು ಅರಿತು ನೆಮ್ಮದಿಯ ಬದುಕಿಗೆ ಸಮರ್ಪಕ ಉತ್ತರವನ್ನು ಕಂಡುಕೊಳ್ಳುವಲ್ಲಿ ವೈದ್ಯಸಂಗಣ್ಣ ಯಶಸ್ವಿ ಮಾರ್ಗದರ್ಶಕನಾಗಿದ್ದಾನೆ.

"ಆರು ವರ್ಣದ ಬೇರು ಮೂರು ವರ್ಣದ ಉದಕ,
ರವೆ ತೋರಬಾರದ ಕಲ್ಲು, ಇಂತಿವ ಮೀರಬಾರದ ಗುಂಡು,
ಇಂತಿವ ಭೇದಿಸಿ ಅರೆಯಲಾಗಿ ಸವೆಯಿತ್ತು ಮದ್ದು ವಿಶ್ವಾಸವೆಂಬ ತಟ್ಟೆಯಲ್ಲಿ
ಭಕ್ತಂಗೆ ಮೂರು, ಮಾಹೇಶ್ವರಂಗೆ ನಾಲ್ಕು,
ಪ್ರಸಾದಿಗೆ ಐದು, ಪ್ರಾಣ ಲಿಂಗಿಗೆ ಆರು,
ಶರಣಂಗೆ ಎಂಟು, ಐಕ್ಯಂಗೆ ಹತ್ತು ಇಂತೀ ಕ್ರಮದಲ್ಲಿ ಕೊಂಡ ಮತ್ತೆ
ಮೂರು ನಾಲ್ಕು ಗೂಡಿ, ಆರು ಎಂಟು ಗೂಡಿ,
ಎಂಟು ಹತ್ತು ಗೂಡಿ, ನಷ್ಟವಾದ ಮತ್ತೆ,
ರೋಗದ ಕಟ್ಟು ತೊಟ್ಟು ಬಿಟ್ಟಿತು,
ಮರುಳ ಶಂಕರ ಪ್ರಿಯ ಸಿದ್ದರಾಮೇಶ್ವರ ಲಿಂಗವನರಿಯಲಾಗಿ"

[ಸಂ.ವ.ಸಂ.೪-ವ.ಸಂ-೧೧೨]

ಆಕರ ಗ್ರಂಥಗಳು


೧. ಡಾ. ಬಿ.ಆರ್.ಹಿರೇಮಠ– ಸಂಕೀರ್ಣ ವಚನಗಳು,
ಸಮಗ್ರ ವಚನ ಸಂಪುಟ ಆವೃತ್ತಿ – ೯(೪),
ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು.
ವರ್ಷ – ೨೦೦೧

೨. ಎಸ್.ವಿದ್ಯಾಶಂಕರ – ವೀರಶೈವ ಸಾಹಿತ್ಯ ಚರಿತ್ರೆ
ಪ್ರಿಯದರ್ಶಿನಿ ಪ್ರಕಾಶಕರು–೨೦೧೩

೩. ಎಸ್.ವಿದ್ಯಾಶಂಕರ – ವೀರಶೈವ ಪಾರಿಭಾಷಿಕ ಪದಕೋಶ
ಬಸವ ಸಮಿತಿ – ೨೦೦೦

೪. ಬಿ. ಶಿವಮೂರ್ತಿಶಾಸ್ತ್ರೀ – ಕಥಾಸೂತ್ರರತ್ನಾಕರ
ಶರಣ ಸಾಹಿತ್ಯ ಪ್ರಕಾಶನ – ೧೯೫೪

೫. ಸಿದ್ದ ನಂಜೇಶ – ಗುರುರಾಜ ಚಾರಿತ್ರ
ಶ್ರೀ.ಮ.ನಿ.ಪ್ರ ಮೃತ್ಯುಂಜಯ ಸ್ವಾಮಿಗಳು ಮುರುಘಾಮಠ.

೬. ಡಾ. ಆರ್.ಸಿ.ಹಿರೇಮಠ – ಬೈರವೇಶ್ವರ ಕಾವ್ಯದ ಕಥಾಮಣಿ ಸೂತ್ರ
ಡಾ. ಎಂ.ಎಸ್.ಸುಂಕಾಪುರ (ಸಂ) ರತ್ನಾಕರ ಕರ್ನಾಟಕ ವಿಶ್ವವಿದ್ಯಾಲಯ – ೧೯೬೮

೭. ಎಂ.ಆರ್.ಶ್ರೀನಿವಾಸಮೂರ್ತಿ – ವಚನ ಧರ್ಮಸಾರ
ಕನ್ನಡ ಸಾಹಿತ್ಯ ಪರಿಷತ್ – ೨೦೦೯

೮. ರುದ್ರೇಶ ಗಂಗಾಧರ ಕಿತ್ತೂರ – ವಚನ ಜ್ಞಾನ ವಿಜ್ಞಾನ
ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು–೨೦೧೨

೯. ಭಗವಾನ್ – ಸಾಹಿತ್ಯ ವಿಮರ್ಶೆ ಕನ್ನಡ ಸಾಹಿತ್ಯ ಅಕಾಡೆಮಿ–೨೦೧೦

೧೦. ಎಸ್.ಬಿ.ಪಾಟೀಲ(ಸತ್ರಿ) – ದೇಹವೇ ದೇಗುಲ – ಸ್ವಪ್ನ ಬುಕ್ ಹೌಸ್ – ೨೦೧೬

೧೨. ಡಾ.ಸಿ.ಆರ್.ಚಂದ್ರಶೇಖರ್ – ನಮ್ಮ ದೇಹ – ನವಕರ್ನಾಟಕ ಪ್ರಕಾಶನ – ೨೦೧೪

೧೩. ಕೆ.ಮರುಳ ಸಿದ್ದಪ್ಪ ಮತ್ತು ಕಿ.ರಂ.ನಾಗರಾಜು(ಸಂ) – ವಚನ ಕಮ್ಮಟ – ಸ್ವಪ್ನ ಬುಕ್ ಹೌಸ್ – ೨೦೧೬

೧೪. ಡಾ.ವೀರಣ್ಣ ರಾಜೂರ – ಮುತ್ತಿನ ಹಾರ ಬಸವಣ್ಣ
ಕನ್ನಡ ಸಾಹಿತ್ಯ ಅಕಾಡೆಮಿ–೨೦೦೨

೧೫. ಬರಗೂರು ರಾಮಚಂದ್ರಪ್ಪ (ಪ್ರ.ಸಂ) – ಬೆಡಗಿನ ವಚನ ಪರಂಪರೆ
ಕರ್ನಾಟಕ ಸಾಹಿತ್ಯ ಅಕಾಡೆಮಿ–೧೯೯೪

೧೬. ಬಿ.ಕೆ.ರೇಣುಕಾಭಟ್ – ಔಷಧಿ ರಹಿತ ಪ್ರಕೃತಿ ಚಿಕಿತ್ಸೆ
ಆನಪದ ಪ್ರಕಾಶನ

೧೭. ಗಜಾನನ ವಿಶ್ವೇಶ್ವರ ಶಾಸ್ತ್ರಿ – ಅಂಗ ಸಾಮುದ್ರಿಕ ಶಾಸ್ತ್ರ
ಶ್ರೀನಿಧಿ ಪಬ್ಲಿಕೇಷನ್ಸ್–೨೦೧೨

೧೮. ಶ್ರೀಮತಿ ಸುಮನ್.ಕೆ.ಚಿಪ್ಳೂಣ್‌ಕರ್ – ಮುದ್ರಾ ವಿಜ್ಞಾನ ಮತ್ತು ಆರೋಗ್ಯ
ಅಭಿಜಿತ್ ಪ್ರಕಾಶನ–೨೦೦೬

೧೯. ಎ.ಆರ್.ಕೃಷ್ಣಶಾಸ್ತ್ರೀ – ಸರ್ವಜ್ಞ ಕವಿ– ಪ್ರಸಾರಾಂಗ
ಮೈಸೂರು ವಿಶ್ವವಿದ್ಯಾಲಯ–೧೯೪೮

೨೦. ಡಿ.ವಿ.ಜಿ – ದೇವರು ಒಂದು ವಿಚಾರ ಲಹರಿ
ಮೈಸೂರು ಕಾವ್ಯಾಲಯ–೧೯೭೩

೨೧. ಬಸವರಾಜ ಸ್ವಾಮಿ – ಬಯಲು ಬೀಜಗಳು
ಶ್ರೀ ಬಸವ ಸೇವಾ ಪ್ರತಿಷ್ಠಾನ–೨೦೧೩

೨೨. ಬಸವರಾಜ ಸ್ವಾಮಿ – ಜ್ಞಾನ ಭಂಡಾರಿ ಬಸವಣ್ಣ
ಸುದ್ಧಿ ಮೂಲ ಪಬ್ಲಿಷರ್ಸ ಇಂಡಿಯಾ ಲಿಮಿಟೆಡ್–೨೦೧೩

೨೩. ದೇವಾನಂದ ಶರಣರು ಮತ್ತು ಬಸವರಾಜ ಸ್ವಾಮಿ(ಸಂ) – ತೆರಹಿಲ್ಲದ ಭವ ನುಡಿಗೆಡೆಗೊಡನು
ಶ್ರೀ ಬಸವ ಸೇವಾ ಪ್ರತಿಷ್ಠಾನ–೨೦೧೧

೨೪. ದೇವಾನಂದ ಶರಣರು ಬೆನಕನಹಳ್ಳಿ ಮತ್ತು
ಬಸವರಾಜ ಸ್ವಾಮಿ ರಾಯಚೂರು (ಸಂ) – ಗಗನ ಸಿದ್ಧಾಂತ
ಸುದ್ದಿಮೂಲ ಪಬ್ಲಿಷರ್ಸ ಇಂಡಿಯಾ ಲಿಮಿಟೆಡ್

೨೫. ಡಾ. ಬಿ.ಟಿ.ರುದ್ರೇಶ – ಡಾ.ಬಿ.ಟಿ.ರುದ್ರೇಶ್ ಡೈರಿ
ಸ್ವಪ್ನ ಬುಕ್ ಹೌಸ್–೨೦೧೭

೨೬. ಡಾ. ಶೀಲಾದೇವಿ ಎಸ್ ಮಳೀಮಠ –ವಚನ ಮತ್ತು ಸಮೂಹ ಸಂವಹನ– ಒಂದು ಅಧ್ಯಯನ ಪಿ.ಎಚ್‌ಡಿ.ನಿಬಂಧ ೨೦೦೨.ಬನಾರಸ್ ಹಿಂದೂ ವಿಶ್ವವಿದ್ಯಾಲಯ ವಾರಣಾಸಿ ಉತ್ತರ ಪ್ರದೇಶ.

## ಪ್ರಶ್ನಾವಳಿ

೧. ವೈದ್ಯ ಸಂಗಣ್ಣನ ವಚನಗಳಲ್ಲಿ ಷಟ್ಸ್ಥಲ ಸಿದ್ಧಾಂತ ಹೇಗೆ ನಿರೂಪಿತವಾಗಿದೆ?

೨. ವೈದ್ಯ ಸಂಗಣ್ಣನ ವಚನಗಳಲ್ಲಿ 'ಕಾಯಕವೇ ಕೈಲಾಸ' ಈ ತತ್ವ ನಿರೂಪಣೆ ನೇರವಾಗಿದೆ ಇದರ ಬಗ್ಗೆ ನಿಮ್ಮ ಅಭಿಪ್ರಾಯವೇನು?

೩. ವೈದ್ಯ ಸಂಗಣ್ಣ ತ್ರಿವಿಧ ದಾಸೋಹವನ್ನು ಶರೀರ ಶಾಸ್ತ್ರಕ್ಕೆ ಹೋಲಿಸಿದ್ದಾರೆ, ಹೇಗೆ?

೪. ಕರ್ಮವನ್ನು ಯೋಗವಾಗಿ ತೆಗೆದು ಕೊಂಡಿದ್ದಾರೆ. ಅದನ್ನು ತಮ್ಮ ಕಾಯಕ ವೃತ್ತಿಗೆ ಹೋಲಿಸಲಾಗಿದೆ ಹೇಗೆ?

೫. ಶಿವಯೋಗ ವೈದ್ಯ ಸಂಗಣ್ಣನಲ್ಲಿ ವೈಜ್ಞಾನಿಕವಾಗಿ ಮೂಡಿದೆ ಹೇಗೆ?

೬. ವೈದ್ಯ ಸಂಗಣ್ಣ ಒಬ್ಬ ವೈಜ್ಞಾನಿಕ ವೈದ್ಯರೇ?

೭. ಜಾಗತಿಕ ಸಾಹಿತ್ಯಕ್ಕೆ ವೈದ್ಯ ಸಂಗಣ್ಣನ ಕೊಡುಗೆ ಏನು?

೮. ಇತ್ತೀಚಿನ ವೈದ್ಯಕೀಯ ಕ್ಷೇತ್ರಕ್ಕೆ ವೈದ್ಯ ಸಂಗಣ್ಣನನ್ನು ಎಲ್ಲಿ ಅನುಸರಿಸಿದರೆ ದೇಶೀಯತೆ ಉಳಿಯುತ್ತದೆ?

೯. ವೈದ್ಯ ಸಂಗಣ್ಣನನ್ನು ವೈದ್ಯಕೀಯ ಕ್ಷೇತ್ರಕ್ಕೆ ಯಾರು ಪರಿಚಯಸಬೇಕು?

೧೦. ವೈದ್ಯ ಸಂಗಣ್ಣ ಯಾವ ರೀತಿಯ ವೈದ್ಯನಾಗಿದ್ದ?

## ಪ್ರಶ್ನಾವಳಿ ಮತ್ತು ಉತ್ತರಗಳು

೧. **ವೈದ್ಯ ಸಂಗಣ್ಣನ ವಚನಗಳಲ್ಲಿ ಷಟ್ಸ್ಥಲ ಸಿದ್ಧಾಂತ ಹೇಗೆ ನಿರೂಪಿತವಾಗಿದೆ?**

ಉ. ವೈದ್ಯ ಸಂಗಣ್ಣನ ವಚನಗಳಲ್ಲಿ ಷಟ್ಸ್ಥಲ ಸಿದ್ಧಾಂತವು ಈ ರೀತಿ ನಿರೂಪಿತವಾಗಿದೆ

ಭಕ್ತಸ್ಥಲ – ದೇಹದಲ್ಲಿ ಸಂಗಮವಾದ ಜ್ಞಾನಕ್ಕೆ ಭಕ್ತನಾಗುವುದು.

ಮಹೇಶ್ವರ ಸ್ಥಲ – ಜ್ಞಾನಕ್ಕೆ ಭಕ್ತನಾಗಿ ತಾನೇ ಶರಣನಾಗುವುದು.

ಪ್ರಸಾದಿ ಸ್ಥಲ – ಶರಣನಾದವನು ಎಲ್ಲಾವನ್ನು ಪ್ರಸಾದವಾಗಿ ಸ್ವೀಕರಿಸುವುದು.

ಪ್ರಾಣಲಿಂಗಿ ಸ್ಥಲ – ದೇಹದಲ್ಲಿ ಪ್ರಾಣ ಲಿಂಗವಾಗಿದೆ ಎಲ್ಲರಲ್ಲೂ ಇರುವ ಲಿಂಗ ಒಂದೇ ಎಲ್ಲರಲ್ಲೂ ಸಹಜತೆಯನ್ನು ಕಾಣುವುದು.

ಶರಣ ಸ್ಥಲ – ತನ್ನಲ್ಲಿರುವ ಜ್ಞಾನಕ್ಕೆ ಶರಣಾದರೆ ಸತ್ಯದ ದರ್ಶನವಾಗುವುದು.

ಐಕ್ಯ ಸ್ಥಲ – ಜ್ಞಾನಕ್ಕೆ ಶರಣಾದ ಮೇಲೆ ಅದರಲ್ಲೇ ಲೀನವಾಗುವುದು.

ಹೀಗೆ ಆರು ಸ್ಥಲಗಳು ವೈದ್ಯ ಸಂಗಣ್ಣನ ವಚನಗಳಲ್ಲಿ ವೇದ್ಯವಾಗಿದೆ.

೨. **ವೈದ್ಯ ಸಂಗಣ್ಣನ ವಚನಗಳಲ್ಲಿ 'ಕಾಯಕವೇ ಕೈಲಾಸ' ಈ ತತ್ವ ನಿರೂಪಣೆ ನೇರವಾಗಿದೆ ಇದರ ಬಗ್ಗೆ ನಿಮ್ಮ ಅಭಿಪ್ರಾಯವೇನು?**

ಉ. ಹೌದು.ಕಾಯಕ ತತ್ವ ವೈದ್ಯ ಸಂಗಣ್ಣನಲ್ಲಿ ನೇರವಾಗಿ ನಿರೂಪಿತವಾಗಿದೆ.ಇಲ್ಲಿ ದೇಹ ಅರಿವುಳ್ಳದ್ದು 'ಕಾಯದ ಧರ್ಮ ಕಾಯವೇ ಪಾಲಿಸುವುದೇ ಕಾಯಕ.ಕಾಯ ತನ್ನ ಉಪ ಜೀವನಕ್ಕೆ ಮಾಡುವ ಕೆಲಸ ಅದು ಕಾಯಕವಲ್ಲ'.

೩. **ವೈದ್ಯ ಸಂಗಣ್ಣ ತ್ರಿವಿಧ ದಾಸೋಹವನ್ನು ಶರೀರ ಶಾಸ್ತ್ರಕ್ಕೆ ಹೋಲಿಸಿದ್ದಾರೆ, ಹೇಗೆ?**

ಉ. ತ್ರಿವಿಧಗಳಾದ ಗುರು, ಲಿಂಗ, ಜಂಗಮರು ನಮ್ಮಲ್ಲಿ ಅರಿವಾಗಿ, ಅರಿವನ್ನು ಪಾಲಿಸುವರಾಗಿ ಇದ್ದಾರೆ.ಇದನ್ನು ವೈದ್ಯ ಸಂಗಣ್ಣ ಕಾಯದ ಅರಿವನ್ನು ಶಾಸ್ತ್ರವಾಗಿ ಮಾಡಿ ಹೇಳಿದರು.ಕಾಯದಿಂದ ಬಂದ ಶಾಸ್ತ್ರ ಕಾಯಕ್ಕೆ ಮುಳುವಾಯಿತು.ಆದ್ದರಿಂದ ತ್ರಿಕರಣ ಶುದ್ಧಿಯಿಂದ ದೇಹ ಮತ್ತು ಆತ್ಮಗಳ ನಡುವಿನ ಅಂತರವನ್ನು ಕಳಚಿ ಅರಿವನ್ನು ಪಡೆಯಬೇಕು.

**೪. ಕರ್ಮವನ್ನು ಯೋಗವಾಗಿ ತೆಗೆದು ಕೊಂಡಿದ್ದಾರೆ. ಅದನ್ನು ತಮ್ಮ ಕಾಯಕ ವೃತ್ತಿಗೆ ಹೋಲಿಸಲಾಗಿದೆ ಹೇಗೆ?**

ಉ. ನಮ್ಮ ದೇಹ ನಮ್ಮಲ್ಲಿ ಜ್ಞಾನದಿಂದ ಗುರ್ತಿಸಿಕೊಳ್ಳಬೇಕು.ಆಗ ಸತ್ಯದ ದರ್ಶನವಾಗುತ್ತದೆ.ಆದ್ದರಿಂದ ತಾನು ಮಾಡುವ ಕರ್ಮವನ್ನು ಯೋಗವಾಗಿ ತೆಗೆದುಕೊಂಡು ತನ್ನ ಕಾಯಕದಲ್ಲಿ ಅಳವಡಿಸಿಕೊಂಡಿದ್ದಾನೆ.

**೫. ಶಿವಯೋಗ ವೈದ್ಯ ಸಂಗಣ್ಣನಲ್ಲಿ ವೈಜ್ಞಾನಿಕವಾಗಿ ಮೂಡಿದೆ ಹೇಗೆ?**

ಉ. ಹೌದು.ವೈದ್ಯ ಸಂಗಣ್ಣ ಶಿವಯೋಗವನ್ನು ವೈಜ್ಞಾನಿಕ ನೆಲೆಯಲ್ಲಿ ತಿಳಿಸುತ್ತಾನೆ. ಪಂಚಾಕ್ಷರಿ ಪ್ರಣವ ಮಂತ್ರವನ್ನು ತಪ್ಪದೇ ತ್ರಿಸಂಧಿಯಲ್ಲಿ ನೆನೆಯಬೇಕು ಎಂದು ಹೇಳುತ್ತಾರೆ.

**೬. ವೈದ್ಯ ಸಂಗಣ್ಣ ಒಬ್ಬ ವೈಜ್ಞಾನಿಕ ವೈದ್ಯರೇ?**

ಉ. ಹೌದು.ವೈದ್ಯ ಸಂಗಣ್ಣ ಒಂದು ಔಷಧಿಯನ್ನಾಗಲಿ, ಮೂಲಿಕೆಯನ್ನಾಗಲಿ ನೀಡುವುದಿಲ್ಲ. ಆದರೂ ಈತ ಒಬ್ಬ ವೈಜ್ಞಾನಿಕ ವೈದ್ಯನೆನಿಸಿಕೊಳ್ಳುತ್ತಾನೆ ಕಾರಣ ಈತನ ವಚನಗಳಲ್ಲಿ ಎಲ್ಲವೂ ವೈದ್ಯಕೀಯ ಪರಿಭಾಷೆಯನ್ನು ಬಳಸಿ ದೇಹ ಮತ್ತು ಆತ್ಮವನ್ನು ಕುರಿತು ಪಂಚ ವೈದ್ಯರ ಪರಿಚಯವನ್ನು ಮಾಡಿಸುತ್ತಾನೆ. ಆದ್ದರಿಂದ ವೈದ್ಯ ಸಂಗಣ್ಣ ಒಬ್ಬ ವೈಜ್ಞಾನಿಕ ವೈದ್ಯನಾಗಿದ್ದಾನೆ.

**೭. ಜಾಗತಿಕ ಸಾಹಿತ್ಯಕ್ಕೆ ವೈದ್ಯ ಸಂಗಣ್ಣನ ಕೊಡುಗೆ ಏನು?**

ಉ. ಜಾಗತಿಕ ಸಾಹಿತ್ಯಕ್ಕೆ ವೈದ್ಯ ಸಂಗಣ್ಣ ಅಪಾರವಾದ ಕೊಡುಗೆಯನ್ನು ನೀಡಿದ್ದಾನೆ. ಈತ ಒಬ್ಬ ವಚನಕಾರನಾಗಿ ಎಲ್ಲಿಯೂ ದೇವರ ಕಲ್ಪನೆಯನ್ನಾಗಲಿ, ಆಧ್ಯಾತ್ಮಿಕ ಚಿಂತನೆಯ ನ್ನಾಗಲಿ ನೀಡಿಲ್ಲ. ಈತ ವಿಭಿನ್ನವಾದ ರೀತಿಯಲ್ಲಿ ವಚನಗಳ ರಚನೆ ಮಾಡಿದ್ದಾನೆ. ಈತ ವಚನಗಳನ್ನು ಅಧ್ಯಯನಕ್ಕೆ ಒಳಪಡಿಸಿದಾಗ ಹೊಸ ಹೊಸ ವಿಚಾರಗಳನ್ನು ಹೆಚ್ಚಾಗಿ ತಿಳಿಯುವ ಅವಕಾಶವಿದೆ. ಆದ್ದರಿಂದ ಜಾಗತಿಕ ಸಾಹಿತ್ಯದ ಬೆಳವಣಿಗೆಗೆ ಈತನ ವಚನಗಳು ಕೊಡುಗೆಯಾಗಿದೆ.

೮.	**ಇತ್ತೀಚಿನ ವೈದ್ಯಕೀಯ ಕ್ಷೇತ್ರಕ್ಕೆ ವೈದ್ಯ ಸಂಗಣ್ಣನನ್ನು ಎಲ್ಲಿ ಅನುಸರಿಸಿದರೆ ದೇಶೀಯತೆ ಉಳಿಯುತ್ತದೆ?**

ಉ.	ವೈದ್ಯಕೀಯ ಕ್ಷೇತ್ರಕ್ಕೆ ವೈದ್ಯ ಸಂಗಣ್ಣನನ್ನು ನಾಡಿಗಳ ಪರೀಕ್ಷೆಯ ಸಂದರ್ಭದಲ್ಲಿ ಈತ ತಿಳಿಸಿದ ೨೬ ನಾಡಿಗಳ ಕುರಿತು ವಿವರಣೆಯನ್ನು ಪಡೆದು ತಮ್ಮ ಚಿಕಿತ್ಸೆಯಲ್ಲಿ ಅನುಸರಿಸಿದರೆ ನಮ್ಮ ದೇಶಿಯತೆ ಉಳಿಯುತ್ತದೆ.

೯.	**ವೈದ್ಯ ಸಂಗಣ್ಣನನ್ನು ವೈದ್ಯಕೀಯ ಕ್ಷೇತ್ರಕ್ಕೆ ಯಾರು ಪರಿಚಯಸಬೇಕು?**

ಉ.	ವೈದ್ಯ ಸಂಗಣ್ಣನನ್ನು ವೈದ್ಯಕೀಯ ಕ್ಷೇತ್ರಕ್ಕೆ ಸಂಶೋಧನ ವಿದ್ಯಾರ್ಥಿಗಳಿಂದ ನಾವೇ ಪರಿಚಯ ಮಾಡಿಕೊಡಬೇಕು.ಇಂತಹ ಹೊಸ ವಿಚಾರಗಳ ಪರಿಚಯದಿಂದ ವೈದ್ಯಕೀಯ ಕ್ಷೇತ್ರವೂ ಬೆಳವಣಿಗೆ ಆಗುತ್ತದೆ.

೧೦.	**ವೈದ್ಯ ಸಂಗಣ್ಣ ಯಾವ ರೀತಿಯ ವೈದ್ಯನಾಗಿದ್ದ?**

ಉ.	ವೈದ್ಯ ಸಂಗಣ್ಣ ಭವ ರೋಗದ ವೈದ್ಯನಾಗಿದ್ದ. ಈತ ಜನನ ಮರಣಗಳ ನಡುವಿನ ಜಂಜಾಟಗಳ ಕಾರಣ ಪರಿಣಾಮಗಳನ್ನು ಅರಿತು ಚಿಕಿತ್ಸೆ ಮಾಡುವ ವೈದ್ಯನಾಗಿದ್ದ.

**ಧನ್ಯವಾದಗಳು ಸ್ವಾಮಿ.**



ಶ್ರೀ ಬಸವರಾಜ ಸ್ವಾಮಿ

ವಚನಗಳ ನಿರ್ವಚನಕಾರರು

ಸುದ್ದಿಮೂಲ ಪ್ರಕಾಶಕರು. ರಾಯಚೂರು



ಸಂದರ್ಶನದೊಂದಿಗೆ ಶ್ರೀ. ಬಸವರಾಜ ಸ್ವಾಮಿ ಹಾಗೂ ಶ್ರೀಮತಿ.ರಾಧಿಕ



ವೈದ್ಯ ಸಂಗಣ್ಣ


ಚಿನ್ಮಯಜ್ಞಾನಿ ಚೆನ್ನಬಸವಣ್ಣನವರು




ತ್ಯಾಗಜೀವಿಗಳಾದ ಹರಳಯ್ಯ - ಕಲ್ಯಾಣಮ್ಮ



ಶ್ರೀ ಶರಣ ಬಸವಣ್ಣ



ಸಿರಿಗನ್ನಡ ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ.ಹಂಪಿ.